ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ನನ್ನ ಬಾಲ್ಯದ ನೆನಪುಗಳು

ಮೋಹನದಾಸ ಕರಮಚಂದ ಗಾಂಧಿ



ಕನ್ನಡಾನುವಾದ : ಹನುಮಂತರಾವ್ ಮಂಜ್ರೇಕರ್

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ನನ್ನ ಬಾಲ್ಯದ ನೆನಪುಗಳು

ಮೋಹನದಾಸ ಕರಮಚಂದ ಗಾಂಧಿ

ಕನ್ನಡಾನುವಾದ : ಹನುಮಂತರಾವ್ ಮಂಜ್ರೇಕರ್

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ನನ್ನ ಬಾಲ್ಯದ ನೆನಪುಗಳು
ಲೇಖಕರು : ಮೋಹನದಾಸ ಕರಮಚಂದ ಗಾಂಧಿ
ಕನ್ನಡಾನುವಾದ : ಹನುಮಂತರಾವ್ ಮಂಜ್ರೇಕರ್
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಮೊದಲ ಮುದ್ರಣ : 1960

ದ್ವಿತೀಯ ಮುದ್ರಣ : 2008

ಪರಿಷ್ಕೃತ ತೃತೀಯ ಮುದ್ರಣ : 2019

ಪ್ರತಿಗಳು : 1000

ಪುಟಗಳು : XIV + 70

ಬೆಲೆ : 52/–

ISBN No : 978-81-941136-8-3

ಮುದ್ರಕರು : ಕ್ರಿಯೇಟಿವ್‌ಗೀಕ್ಸ್
ಯಾದವ ಕಾಲೇಜು ರಸ್ತೆ
ಮಾಧವನಗರ, ಬೆಂಗಳೂರು–560001
ದೂರವಾಣಿ : 080 40927049




ಅರ್ಪಣೆ

ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ

ಶ್ರೀ ಗೋಪಾಲ ಕೃಷ್ಣ ಗೋಖಲೆ ಅವರಿಗೆ

ಗೌರವಪೂರ್ವಕವಾಗಿ



ಸುಖ-ಸಂತೋಷಗಳಿಲ್ಲದೇ ಮಾಡಿದ
ಸೇವೆಯು ಸೇವಕನಿಗೂ ಸೇವ್ಯನಿಗೂ
ಉಪಯುಕ್ತವಿರುವದಿಲ್ಲ. ಆದರೆ
ಸಂತೋಷದಿಂದ ಸಲ್ಲಿಸಿದ ಸೇವೆಯಲ್ಲಿ ಎಲ್ಲವೂ
ಅಡಗಿರುತ್ತದೆ, ಉಪಯುಕ್ತವೆನಿಸುತ್ತದೆ.
ಅದರೆದುರು ಸ್ಥಾನಮಾನಗಳು, ಸುಖವು
ಮಹತ್ವದ್ದೆನಿಸುವುದಿಲ್ಲ.

– ಮಹಾತ್ಮ ಗಾಂಧಿ

ನಿವೇದನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ ಮಹಾತ್ಮಾ ಗಾಂಧೀಜಿ ಅವರ ಬಾಲ್ಯದ ದಿನಗಳನ್ನು ನೆನಪಿಸುವ "ನನ್ನ ಬಾಲ್ಯದ ನೆನಪುಗಳು" ಕೃತಿಯನ್ನು ಪ್ರಕಟಿಸಲು ನನಗೆ ಅತ್ಯಂತ ಹರ್ಷವಾಗುತ್ತದೆ.

ಗಾಂಧೀ ಅವರ ಸ್ವಂತ ನುಡಿಗಳನ್ನು ದಾಖಲಿಸಿದ ಅವರ ಬಾಲ್ಯದ ನೆನಪುಗಳು, ಸತ್ಯದರ್ಶನದಂತಿದೆ. ಮನುಷ್ಯ ಬಾಲ್ಯದಲ್ಲಿ ಹಲವಾರು ತಪ್ಪು, ಸುಳ್ಳು, ಹೀನಾಯ ನಡವಳಿಕಯವನಾಗಿದ್ದರೂ, ಅವನು ದೊಡ್ಡವನಾದಂತೆ ಅವುಗಳು ತಪ್ಪು ಎಂಬ ಅರಿವು ಮೂಡಿಸಿಕೊಂಡು ಪರಿವರ್ತನೆಯಾಗುವ ಕಥಾನಕವನ್ನು ಇದು ಹೇಳುತ್ತವೆ. ಗಾಂಧಿ ತನ್ನ ಬಾಲ್ಯದಲ್ಲಿ ಆಕರ್ಷಿತವಾದ ವಿವಿಧ ಆಮಿಷಗಳ ಕುರಿತು ಹೇಳುತ್ತಾ, ಅದರಿಂದ ವಿಮುಕ್ತರಾದಂಥ ಸಂದರ್ಭದಲ್ಲಿ "ನೀತಿಯು ಜಗತ್ತಿನ ಆಧಾರ. ಈ ನೀತಿಯು ಸತ್ಯದಲ್ಲಿಯೇ ಅಡಗಿದೆ. ಸತ್ಯ ಶೋಧನೆಯನ್ನು ಮಾಡಲೇಬೇಕಾಗುವುದು. ಸತ್ಯದ ಲಕ್ಷಣವು ವಿಸ್ತಾರಗೊಳ್ಳುತ್ತಾ ಹೋಯಿತು ಮತ್ತು 'ಅಪಕಾರಕ್ಕೆ ಅಪಕಾರವನ್ನು ಮಾಡದೆ, ಉಪಕಾರವನ್ನೇ ಮಾಡಬೇಕು', ಎಂಬ ಮಾತು ನನ್ನ ಜೀವನಸೂತ್ರವಾಗಿ ಪರಿಣಮಿಸಿತು" ಎಂಬ ಮಾತುಗಳು ನಮ್ಮ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕೆಂಬ ಬಗ್ಗೆ ನಮಗೆ ಪಠ್ಯವಿದ್ದಂತಿದೆ. ತಪ್ಪುಗಳನ್ನು ತಿದ್ದಿಕೊಳ್ಳದೆ ಪರಿವರ್ತನೆಗೆ ಇರುವ ಅವಕಾಶಗಳನ್ನು ಕಳೆದುಕೊಳ್ಳುತ್ತಾ ಅಪರಾಧಿಗಳಾಗುವ ಯುವಕರು, ವಿದ್ಯಾರ್ಥಿಗಳಿಗೆ,

ಮಾರ್ಗದರ್ಶಕವಾಗಿದೆ. ಈ ಕೃತಿ, ಪ್ರತಿಯೊಬ್ಬ ಮಕ್ಕಳು ಓದಲೇಬೇಕಾದ ತಂದೆತಾಯಿಯರು ಓದಿ, ಮಕ್ಕಳಿಗೆ ತಿಳಿಹೇಳುವ ಆಕರ ಕೃತಿಯಾಗಿದೆ ಶಾಲೆ-ಕಾಲೇಜುಗಳಲ್ಲಿ, ವಿದ್ಯಾರ್ಥಿಗಳ ಪರಿವರ್ತನಾ ಹಾದಿಗೆ, ಸ್ಫೂರ್ತಿದಾಯಕ ಕೃತಿ ಇದಾಗಿದೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಗಾಂಧಿ ಅವರ ಬಾಲ್ಯದ ನೆನಪುಗಳು ಕುರಿತಾದ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಗಾಂಧಿ ಅವರ ಬಾಲ್ಯವನ್ನು ಬಿಚ್ಚುಮನಸ್ಸಿನಿಂದ ದಾಖಲಿಸಿದ ಬರಹವನ್ನು ಶ್ರೀ ಹನುಮಂತರಾವ್ ಮಂಜ್ರೇಕರ್ ಅವರು ಕನ್ನಡೀಕರಿಸಿ ನಮ್ಮ ಅರಿವಿಗೆ ಇಲ್ಲಿ ತೆರೆದಿಟ್ಟಿದ್ದಾರೆ.

ಬಾಲ್ಯದ ನೆನಪುಗಳನ್ನು ಯಥಾವತ್ ಹೇಳಿಕೊಂಡ ಗಾಂಧೀಜಿ ಹಾಗೂ ಅದನ್ನು ಕನ್ನಡಿಗರಿಗೆ ಅರ್ಥೈಸಿಕೊಟ್ಟಿರುವ ಶ್ರೀ ಮಂಜ್ರೇಕರ್ ಅವರಿಗೆ ಹಾರ್ದಿಕ ವಂದನೆಗಳು ಸಲ್ಲುತ್ತವೆ. ಈ ಕೃತಿ ರಾಷ್ಟ್ರನಾಯಕರಿಗೆ ಸಮಾಜಮುಖಿ ಚಿಂತಕರಿಗೆ, ಸಾಮಾಜಿಕ ಕಾರ್ಯಕರ್ತರಿಗೆ ಆದರ್ಶಪ್ರಾಯವಾದುದಾಗಿದೆ.

ಬಾಲ್ಯವನ್ನು ವೈಭವೀಕರಿಸುವ, ತಪ್ಪಿಲ್ಲದೆ ನಡೆದ ಮಕ್ಕಳಂತೆ ಚಿತ್ರಿಸಿಕೊಳ್ಳುವ ಆಧುನಿಕ ಸಮಾಜ ಸುಧಾರಕರು, ರಾಷ್ಟ್ರನಾಯಕರುಗಳ ಆತ್ಮಕಥೆಗಳು, ಜೀವನ ಚಿತ್ರಗಳು, "ನನ್ನ ಬಾಲ್ಯದ ನೆನಪುಗಳು" ಕೃತಿಯ ಮುಂದೆ ತೆರೆಮರೆಗೆ ಸರಿಯುತ್ತವೆ. ಮನುಷ್ಯನ ವ್ಯಕ್ತಿತ್ವ ವಿಕಾಸವಾಗುವ ಸಹಜ ಚರ್ಚೆಗಳ ಕುರಿತಾಗಿ, ಗಾಂಧಿ ಅವರು ಬಾಲ್ಯದ ನೆನಪುಗಳು ಅನಾವರಣಗೊಂಡಿವೆ. ತಪ್ಪುಗಳನ್ನು ತಿದ್ದಿಕೊಳ್ಳುವ ಮತ್ತು ತಪ್ಪಿಗೆ ಕ್ಷಮೆಯಾಚಿಸುವ-ಶುದ್ಧ ಹೃದಯವಂತಿಕೆಯೇ, ಅವರನ್ನು ಮಹಾತ್ಮರಾಗುವ ಕಡೆಗೆ ಕೊಂಡೊಯ್ದಿದೆ. 'ಕ್ಷಮಾಗುಣವೇ' ಅವರನ್ನು ವಿಶ್ವದ ಶಾಂತಿಯದೂತನನ್ನಾಗಿಸಿದೆ. ಅದೆಲ್ಲವನ್ನು ಹೇಳಿಕೊಂಡ ಗಾಂಧಿ ಅವರು ನಿರ್ಮಲ ಮನಸ್ಕರಾದರು. ಅವರಿಗೆ

ಬಾಲ್ಯದಲ್ಲಿಯೇ ವಿವಿಧ ಧರ್ಮಗ್ರಂಥಗಳ ಓದುವಿಕೆ ಮತ್ತು ಧಾರ್ಮಿಕ ಮುಖ್ಯಸ್ಥರ ಪರಿಚಯ, ಅವರನ್ನು ಸರ್ವಧರ್ಮ ಸಮಭಾವದ ಕಡೆಗೆ ವಿಕಸನಗೊಳ್ಳಲು ಸಹಕಾರಿಯಾಯಿತು. ಇಂಥಹ ಅನುಸರಣೀಯ ಕೃತಿಯನ್ನು ಲೋಕಾರ್ಪಣೆ ಮಾಡಿದ ಅಂದಿನ ಸಂಪಾಕದ ಮಂಡಳಿಯವರಿಗೆ ಮತ್ತು ಅಧ್ಯಕ್ಷರಾದ ಶ್ರೀ ಹುಕ್ಕೇರಿಕರ ಅವರಿಗೂ ಆತ್ಮೀಯ ನಮನಗಳು ಸಲ್ಲುತ್ತವೆ.

ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂಥಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಶ್ರೀ ಇಂದ್ರ ಕುಮಾರ್ ಅವರಿಗೂ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು; ನಡೆವಲ್ಲಿ ಪವಿತ್ರ ಭೂಮಿಯಾಯಿತು–ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿಯವರ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿಯವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧಿ ಸ್ಮಾರಕ ನಿಧಿಯವರು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧೀ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟಣೆಗಳಾಗಿವೆ. ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧೀ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟಣೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧೀ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು. ಈ ಗ್ರಂಥಗಳ ಉದ್ದೇಶ ಗಾಂಧಿತತ್ತ್ವಜ್ಞಾನ ಇಲ್ಲವೆ ಸಾಹಿತ್ಯದ ಮೌಲ್ಯಮಾಪನವಾಗಿರದೆ, ಭಿನ್ನ ಭಿನ್ನ ವಿಷಯಗಳ ಬಗೆಗೆ ಗಾಂಧೀಜಿ ಅವರು ಹೇಳಿದ ಮಾತುಗಳನ್ನು ತದ್ವತ್ತಾಗಿ ಭಾಷಾಂತರಿಸಿ ಕೊಡುವುದೇ ಆಗಿದೆ. ಪ್ರಸ್ತುತ ಗ್ರಂಥವು ಗಾಂಧೀಜಿಯವರ ಆತ್ಮಕಥೆಯ ಭಾಷಾಂತರವಾಗಿದೆ. ಗಾಂಧೀಜಿ ರಾಷ್ಟ್ರದ ಸೊತ್ತು. ರಾಷ್ಟ್ರೀಯ ಪರಂಪರೆಯಾದ ಅವರ ಜೀವನಪ್ರಭಾವವು ಗಾಢವಾಗಿ ಆಗಬೇಕಾದರೆ, ಎಳೆಯ ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಗಾಂಧಿ ಚರಿತ್ರೆಯನ್ನು ಅರಿತಿರಬೇಕು. ಎಳೆಯ ವಯಸ್ಸಿನ ಮಕ್ಕಳಿಗೆ ಹಿಡಿಯುವಂತೆ ತೀರ ಸರಳವಾದ ಮಕ್ಕಳ ಭಾಷೆಯಲ್ಲಿಯೇ ಈ ಅನುವಾದವನ್ನು ಒದಗಿಸಿಕೊಡಲಾಗಿದೆ.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆ ಲಕ್ಷ್ಯವನ್ನು ಪೂರೈಸಿದ್ದರೆ, ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧೀ ವಿಚಾರ ಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ 'ಜನಪ್ರಿಯ' ಆವೃತ್ತಿಯಲ್ಲಿ ಈಗಾಗಲೇ "ಮಹಿಳೆಯರು", "ಒಳ್ಳೆಯ ಜೀವನ", "ಅಸ್ಪೃಶ್ಯತೆ", "ಸತ್ಯ", "ಸರ್ವೋದಯ", "ವಿದ್ಯಾರ್ಥಿಗಳು" ಮತ್ತು "ಖಾದಿ ಗ್ರಾಮೋದ್ಯೋಗ" ಎಂಬ ಪುಸ್ತಕಗಳು ಪ್ರಕಟವಾಗಿವೆ.

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರಗಳಲ್ಲಿ ಇಂದು ಗಾಂಧೀ ವಿಚಾರದ ತಿಳಿವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ವಿಚಾರಗಳಲ್ಲಿ ಆಸಕ್ತಿಯುಳ್ಳ ಶಿಕ್ಷಣ ಸಂಸ್ಥೆಗಳು, ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಣಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ವಿದ್ಯಾಗಿರಿ, ಧಾರವಾಡ
15–08–1956
ಸ್ವಾತಂತ್ರ್ಯ ದಿನ

ರಾ. ಶ್ರೀ. ಹುಕ್ಕೇರಿಕರ
ಅಧ್ಯಕ್ಷ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪ್ರಕಾಶಕರ ಮಾತು

ಗಾಂಧೀ ತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ.

ಗಾಂಧೀಜಿಯವರು "ನನ್ನ ಬಾಲ್ಯದ ನೆನಹುಗಳು" ಕೃತಿಯಲ್ಲಿ ತಮ್ಮ ಬಾಲ್ಯದ ಕೆಲವು ಮಹತ್ತರ ನೆನಹುಗಳನ್ನು ಬಿಚ್ಚಿಟ್ಟಿದ್ದಾರೆ. ಅವರು ತಮ್ಮ ತಂದೆಯವರ ನಿಷ್ಠೆ ಬಗ್ಗೆ ಹೇಳುತ್ತಾ ಅವರ ತಂದೆಯವರು ಜುನಾಗಡದ ನವಾಬರಿಗೆ ಎಡಗೈಯಿಂದ ಮುಜರೆ ಮಾಡಿದ ಕಾರ್ಯವನ್ನು ವ್ಯಕ್ತಿಯೊಬ್ಬರು ಕೇಳಿದಾಗ ನನ್ನ ಬಲಗೈಯು ಈ ಮೊದಲೆ ಪೋರಬಂದರಕ್ಕೆ ಮೀಸಲಾಗಿದೆ ಎಂದು ಉತ್ತರ ನೀಡಿದ್ದನ್ನು ವಿವರಿಸುತ್ತ ಅವರ ತಾಯಿ ದೈವಭಕ್ತರಾಗಿದ್ದರು ಮತ್ತು ಚಾತುರ್ಮಾಸ ವ್ರತಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಆಚರಿಸುತ್ತಿದ್ದರು. ಅವರು ಚಂದ್ರದರ್ಶನ ಮಾಡದೇ ಊಟ ಮಾಡುತ್ತಿರಲಿಲ್ಲವೆಂಬ ವಿಷಯವನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ತಮ್ಮ ತಂದೆಯವರು ಕೊಂಡು ತಂದಿದ್ದ ಶ್ರವಣನ ಪಿತೃಭಕ್ತಿ ನಾಟಕವನ್ನು ಓದಿ ಹಾಗೂ ಊರಿಗೆ ಬಂದಿದ್ದ ನಾಟಕ ಕಂಪನಿಯಿಂದ ನಾಟಕ ನೋಡಿ ಗಾಂಧೀಜಿ ಅವರು ಬಾಲ್ಯದಲ್ಲಿಯೇ ಶ್ರವಣನಂತಾಗಬೇಕೆಂದು ಹಂಬಲಿಸಿದ ವಿಷಯವನ್ನು ಚಿತ್ರಿಸಿದ್ದಾರೆ. ಮತ್ತು ಹರಿಶ್ಚಂದ್ರ ನಾಟಕವನ್ನು ನೋಡಿ ಎಲ್ಲರಿಗೂ ಸತ್ಯವಾದಿಗಳೇಕಾಗಬಾರದು ಎಂದು ಹಂಬಲಿಸಿದ್ದರು. ಅವರ ಬಾಲ್ಯ ವಿವಾಹದ ಸಮಯದಲ್ಲಿ ತಂದೆಯವರು ಗಾಡಿಯಿಂದ ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾರೆ ಹಾಗೂ ಬ್ರಿಟಿಷರನ್ನು ಓಡಿಸಲು ಶಕ್ತಿ ಸಂಗ್ರಹಿಸಲು ತನ್ನ ಸ್ನೇಹಿತನ ಪ್ರಚೋದನೆಯಿಂದ ಮಾಂಸಾಹಾರ ಸೇವನೆ ಮಾಡಿ ತಾಯಿಯ ಹತ್ತಿರ ಸುಳ್ಳು ಹೇಳುವ ಪ್ರಸಂಗ ಒದಗಿ ಬಂದಾಗ ಮತ್ತು ತನ್ನ ತಾಯಿಗೆ ಈ

ವಿಷಯ ತಿಳಿದಾಗ ಆಗುವ ಆಘಾತವನ್ನು ನೆನೆದು ಮಾಂಸಾಹಾರ ವರ್ಜಿಸಿದ ಘಟನೆಯನ್ನು ವಿವರಿಸಿದ್ದಾರೆ. ಇದೇ ರೀತಿ ಹತ್ತು ಹಲವು ಬಾಲ್ಯದಲ್ಲಿ ನಡೆದ ಘಟನಾವಳಿಗಳನ್ನು ನೀತಿ ಕಥೆಯಂತೆ ಹೇಳಿಕೊಂಡಿದ್ದಾರೆ. ಅವರು ಈ ಕೃತಿಯಲ್ಲಿ ತಂದೆಯ ನಿಧನ, ಮತ್ತು ತಮ್ಮ ನಾಚಿಕೆಯ ಸ್ವಭಾವ, ರಾಮನಾಮ ತಮ್ಮ ಮೇಲೆ ಬೀರಿದ ಪ್ರಭಾವ, ವಿಲಾಯತಿಗೆ ಹೋಗುವಾಗ ಆದ ಘಟನೆ, ಇವರಿಗಾದ ಜಾತಿ ಬಹಿಷ್ಕಾರ, ಅವರ ಅಭಿರುಚಿಗಳು, ಅವರು ನಡೆಸಿದ ಆಹಾರ ಪ್ರಯೋಗಗಳು, ಅವರು ಪರಿವರ್ತನೆಗೊಂಡ ಬಗ್ಗೆ ಎಲ್ಲವನ್ನು ಬಿಚ್ಚು ಮನಸ್ಸಿನಿಂದ ವ್ಯಕ್ತಪಡಿಸಿದ್ದಾರೆ. ಈ ಕೃತಿಯು ಮಕ್ಕಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಒಂದು ನೀತಿ ಪಾಠವಾಗುವುದರಲ್ಲಿ ಸಂದೇಹವಿಲ್ಲ.

ಇಂತಹ ಕೃತಿಯನ್ನು ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಅಂದಿನ ಸ್ಮಾರಕ ನಿಧಿಯ ಅಧ್ಯಕ್ಷರು ಹಾಗೂ ಅಂದಿನ ಸಲಹಾ ಸಮಿತಿಯ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ.

ಹಾಗೂ ಈ ಕೃತಿಯ ಕರಡು ತಿದ್ದುಪಡಿ ಮಾಡಿದ ಪ್ರೊ. ಅಶ್ವತ್ಥನಾರಾಯಣ್ ದಂಪತಿಗಳಿಬ್ಬರಿಗೂ ಹಾಗೂ ಈ ಕೃತಿಗೆ ಅಂದವಾದ ಮುಖಪುಟ ರಚಿಸಿಕೊಟ್ಟ ಡಾ॥ ಬಸವರಾಜ ಪಾಟೀಲ್ ಅವರಿಗೂ ಮತ್ತು ಅಂದವಾಗಿ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಲಿಬರ್ಟಿ ಎಂಟರ್‌ಪ್ರೈಸಸ್ ಮಾಲೀಕರಾದ ಶಿವದೇವ್ ಅವರಿಗೂ ಧನ್ಯವಾದಗಳು ಸಲ್ಲುತ್ತವೆ.

ಬೆಂಗಳೂರು
2008

ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಹಾಗೂ ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕನಿಧಿ

ಪರಿವಿಡಿ

ನನ್ನ ಬಾಲ್ಯದ ನೆನಹುಗಳು

ತಾಯಿ–ತಂದೆಗಳು

ನನ್ನ ಅಜ್ಜ ಉತ್ತಮಚಂದ ಗಾಂಧಿ ಊರ್ಫ ಓತಾಗಾಂಧಿ ಅವರು ಒಳ್ಳೇ ದೃಢ ಮನಸ್ಕರಾಗಿದ್ದರು. ರಾಜ್ಯ ದರ್ಬಾರದ ಒಳಸಂಚುಗಳಿಂದಾಗಿ ಅವರು ಪೋರಬಂದರನ್ನು ಬಿಟ್ಟು ಜುನಾಗಡ ರಾಜ್ಯದಲ್ಲಿ ಬಂದು ನೆಲೆಸಬೇಕಾಯಿತು. ಅಲ್ಲಿ ಅವರು ಎಡಗೈಯಿಂದ ನವಾಬ ಸಾಹೇಬರಿಗೆ ಮುಜುರೆ ಮಾಡಿದರು. ಇಂಥಹ ಅಗೌರವದ ಕಾರಣವನ್ನು ಯಾರೋ ಒಬ್ಬರು ಅವರಿಗೆ ಕೇಳಲಾಗಿ "ಬಲಗೈಯು ಈ ಮೊದಲೇ ಪೋರಬಂದರಕ್ಕೆ ಮೀಸಲಾಗಿದೆ" ಎಂದು ಮಾರುತ್ತರ ಕೊಟ್ಟರು.

ಓತಾ ಗಾಂಧಿಯ ಐದನೆಯ ಪುತ್ರರಾದ ಕರಮಚಂದ ಗಾಂಧಿ ಊರ್ಫ ಕಬಾ ಗಾಂಧಿ ಅವರು ನನ್ನ ಪಿತಾಜಿಯವರು. ಪೋರಬಂದರದ ದಿವಾಣ ಪದವನ್ನು ಬಿಟ್ಟ ಮೇಲೆ ಅವರು ರಾಜ ದರ್ಬಾರದ ನ್ಯಾಯಾಲಯದಲ್ಲಿ ಸಭಾಸದರಾಗಿದ್ದರು. ಇದರ ತರುವಾಯ ಕೆಲವು ಕಾಲ ರಾಜಕೋಟದಲ್ಲಿಯೂ ಕೆಲವು ಕಾಲ ವಾಂಕಾನೇರನಲ್ಲಿಯೂ ದಿವಾಣರಾಗಿದ್ದರು.

ಕಬಾ ಗಾಂಧಿಗೆ ಕೊನೆಯ ಪತ್ನಿಯಾದ ಪುತಲೀಬಾಯಿಯಿಂದ ಒಬ್ಬಳು ಮಗಳು, ಮೂವರು ಗಂಡು ಮಕ್ಕಳೂ ಹುಟ್ಟಿದರು. ಇವರಲ್ಲಿ ನಾನೇ ಎಲ್ಲರಿಗಿಂತಲೂ ಕಿರಿಯವನು.

ನನ್ನ ತಂದೆಯವರು ಕುಟುಂಬವತ್ಸಲರೂ ಸತ್ಯಪ್ರಿಯರೂ ಶೂರರೂ, ಉದಾರರೂ, ಜೊತೆಗೆ ಸಿಡುಕಿನವರೂ ಆಗಿದ್ದರು. ಕೆಲಮಟ್ಟಿಗೆ ವಿಷಯಾಸಕ್ತರೂ ಇದ್ದಿರಬೇಕು. ಅವರು ಎಂದಿಗೂ ಲಂಚವನ್ನು ತೆಗೆದುಕೊಂಡಿಲ್ಲ. ಈ ಕಾರಣದಿಂದಾಗಿ ಅವರು ಯೋಗ್ಯ ನ್ಯಾಯದಾನದ ಬಗ್ಗೆ ಹೆಸರಾಗಿದ್ದರು. ಒಂದು ಸಲ ರಾಜಕೀಯ ಏಜೆಂಟನು ರಾಜಕೋಟದ ಠಾಕುರ ಸಾಹೇಬರಿಗೆ ಅಪಮಾನಕರವಾದ ಶಬ್ದಗಳನ್ನು ನುಡಿಯಲು ಅವರು ಅವನನ್ನು ಎದುರಾಡಿದರು. ಸಾಹೇಬರು ಸಿಟ್ಟಾಗಿ ಕಬಾ ಗಾಂಧಿಯವರು ಕ್ಷಮೆ ಬೇಡಬೇಕೆಂದು ಕೇಳಿದರು. ಕಬಾ ಗಾಂಧಿಯವರು ಕ್ಷಮೆ ಬೇಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಇದಕ್ಕಾಗಿ ಕೆಲವು ತಾಸುಗಳವರೆಗೆ ಅವರು ಬಂಧನದಲ್ಲಿರಬೇಕಾಯಿತು. ಆದರೂ ಅವರು ಎಳ್ಳಷ್ಟೂ ಹಿಂಜರಿಯಲಿಲ್ಲ. ಕೊನೆಗೆ ಸಾಹೇಬರೇ ಅವರನ್ನು ಬಿಡುಗಡೆ ಮಾಡುವ ಆಜ್ಞೆಯನ್ನು ವಿಧಿಸಬೇಕಾಯಿತು, ತಂದೆಯವರಿಗೆ ಹಣ ಗಳಿಸುವ ಮೋಹವಿರಲಿಲ್ಲ.

ಅವರು ಕೇವಲ ಅನುಭವದಿಂದಲೇ ಶಿಕ್ಷಣವನ್ನು ಪಡೆದವರಾಗಿದ್ದರು. ಆದರೂ ಅವರ ವ್ಯವಹಾರ ಜ್ಞಾನವು ಬಹಳ ಉತ್ತಮವಾಗಿತ್ತು. ಅದರಿಂದ ಅತಿ ಸೂಕ್ಷ್ಮ ಸಮಸ್ಯೆಗಳನ್ನು ಬಗೆಹರಿಸುವುದಾಗಲೀ ಸಾವಿರಾರು ಜನರಿಂದ ಕೆಲಸ ತೆಗೆದುಕೊಳ್ಳುವುದಾಗಲೀ ಅವರಿಗೆ ಕಠಿಣವೆನಿಸುತ್ತಿದ್ದಿಲ್ಲ. ಅವರ ವ್ಯವಹಾರ ಜ್ಞಾನವು ಅಷ್ಟೊಂದು ಉಚ್ಚ ಮಟ್ಟದ್ದಾಗಿತ್ತು. ಅವರಿಗೆ ಧಾರ್ಮಿಕ ಶಿಕ್ಷಣವೇನೂ ಇರಲಿಲ್ಲವೆಂದರೂ ಅಡ್ಡಿಯಿಲ್ಲ. ಆದರೆ ಅಸಂಖ್ಯ ಹಿಂದೂ ಜನರಿಗೆ ಕಥೆ ಪುರಾಣಗಳನ್ನು ಕೇಳುವುದರಿಂದ ಸಹಜವಾಗಿ ಉಂಟಾಗುವ ಧರ್ಮಜ್ಞಾನವು ಅವರಲ್ಲಿಯೂ ಇತ್ತು. ಅವರು ತಮ್ಮ ಕೊನೆಯ ದಿನಗಳಲ್ಲಿ ಗೀತಾ ಪಾಠವನ್ನು ಪ್ರಾರಂಭ

ಮಾಡಿದ್ದರು. ನಿತ್ಯವೂ ಪೂಜೆಯ ಹೊತ್ತಿಗೆ ಕೆಲವು ಶ್ಲೋಕಗಳನ್ನು ಉಚ್ಚಸ್ವರದಲ್ಲಿ ಪಠಿಸುತ್ತಿದ್ದರು.

ನನ್ನ ತಾಯಿಯು ಸಾಧ್ವಿ ಮಹಿಳೆಯಾಗಿದ್ದಳು ಎಂಬ ಭಾವನೆ ನನ್ನ ಮನದಲ್ಲಿ ಮೂಡಿದೆ. ಅವಳು ಬಹಳ ಶ್ರದ್ಧೆಯುಳ್ಳವಳು. ಪೂಜಾ ಪಾಠಗಳನ್ನು ಮುಗಿಸದೆ ಅವಳು ಎಂದೂ ಊಟ ಮಾಡುತ್ತಿರಲಿಲ್ಲ. ಅವಳು ಯಾವಾಗಲೂ ವೈಷ್ಣವ ದೇವಸ್ಥಾನಕ್ಕೆ ಹೋಗುತ್ತಿದ್ದಳು. ನನಗೆ ತಿಳುವಳಿಕೆಯುಂಟಾದಂದಿನಿಂದ ಅವಳು ಒಮ್ಮೆಯಾದರೂ ಚಾತುರ್ಮಾಸ ವ್ರತವನ್ನು ಬಿಟ್ಟಿದ್ದು ನನಗೆ ನೆನಪಿಲ್ಲ. ಅವಳು ಅತಿ ಕಠೋರ ವ್ರತ ವೈಕಲ್ಯಗಳನ್ನು ಕೈಕೊಂಡು ನಿರ್ವಿಘ್ನವಾಗಿ ಕೊನೆಗಾಣಿಸುತ್ತಿದ್ದಳು. ಕಾಯಿಲೆ ಬಿದ್ದರೂ ವ್ರತವನ್ನು ಬಿಡುತ್ತಿರಲಿಲ್ಲ.

ಚಾತುರ್ಮಾಸದಲ್ಲೆಲ್ಲ ಒಂದೇ ಸಲ ಉಣ್ಣುವುದು ಅವಳಿಗೆ ಸಾಮಾನ್ಯವಾದ ಸಂಗತಿಯಾಗಿತ್ತು. ಒಂದು ಚಾತುರ್ಮಾಸದಲ್ಲಂತೂ ದಿನ ಬಿಟ್ಟು ದಿನ ಉಪವಾಸವನ್ನಾಚರಿಸುತ್ತಿದ್ದಳು. ಸತತ ಎರಡು ಮೂರು ದಿನಗಳ ಉಪವಾಸವಂತೂ, ಅವಳಿಗೆ ಸಹಜವಾದ ಮಾತಾಗಿತ್ತು. ಒಂದು ಚಾತುರ್ಮಾಸದಲ್ಲಿಯಂತೂ, ಸೂರ್ಯದರ್ಶನ ಮಾಡಿಯೇ ಊಟ ಮಾಡಬೇಕೆಂಬ ವ್ರತವನ್ನು ಕೈಕೊಂಡಿದ್ದಳು. ಇದಕ್ಕಾಗಿ ಸೂರ್ಯನು ಯಾವಾಗ ಕಾಣಿಸಿಕೊಳ್ಳುವನು ಮತ್ತು ತಾಯಿಯು ಯಾವಾಗ ಊಟ ಮಾಡುವಳು ಎಂಬ ಚಿಂತೆಯಿಂದ ನಾನು ಯಾವಾಗಲೂ ಆಕಾಶದತ್ತ ನೋಡುತ್ತಿರುತ್ತಿದ್ದೆನು. ನನಗೆ ಇಂಥ ದಿನಗಳ ಸ್ಮರಣೆ ಇನ್ನೂ ಇದೆ. ಸೂರ್ಯನು ಕಾಣಿಸಿಕೊಂಡ ಕೂಡಲೇ "ಅವ್ವಾ, ಅವ್ವಾ, ಸೂರ್ಯನು ಮೂಡಿದ್ದಾನೆ" ಎಂದು ಹೇಳಲು ತಾಯಿಯು ತ್ವರೆಯಿಂದ ಬರುವಷ್ಟರಲ್ಲಿ ಸೂರ್ಯನು ಮಾಯವಾಗಿಬಿಡುತ್ತಿದ್ದನು. "ಏನೂ ದೊಡ್ಡ ಮಾತಲ್ಲ. ಈ ಹೊತ್ತು ಊಟ ಮಾಡಬೇಕೆಂದು ಈಶ್ವರೇಚ್ಛೆಯಿದ್ದ ಹಾಗೆ ಕಾಣುವುದಿಲ್ಲ"

ಎಂದು ಹೇಳುತ್ತ ತಾಯಿಯು ತನ್ನ ಕೆಲಸಗಳಲ್ಲಿ ಮಗ್ನಳಾಗುತ್ತಿದ್ದಳು.

ನನ್ನ ತಾಯಿಯು ವ್ಯವಹಾರ ಕುಶಲೆಯೂ ಆಗಿದ್ದಳು. ರಾಜ ದರ್ಬಾರದ ಎಲ್ಲ ಸಂಗತಿಗಳೂ ಅವಳಿಗೆ ಗೊತ್ತಿದ್ದವು. ಅಂತಃಪುರದಲ್ಲಿ ಅವಳ ಬುದ್ಧಿಮತ್ತೆಯ ಬಗ್ಗೆ ತುಂಬಾ ಆದರವಿತ್ತು. ನಾನು ಸಣ್ಣವನಿದ್ದಾಗ ನನ್ನನ್ನು ಒಮ್ಮೊಮ್ಮೆ ರಾಜಭವನಕ್ಕೆ ತನ್ನ ಸಂಗಡ ಕರೆದುಕೊಂಡು ಹೋಗುತ್ತಿದ್ದಳು. ಠಾಕೂರ ಸಾಹೇಬರ ಮಾತೋಶ್ರೀಯವರಾದ ಬಾಮಾ ಸಾಹೇಬರೊಂದಿಗೆ ನಡೆದ ಅವಳ ಎಷ್ಟೋ ಮಾತುಕತೆಗಳು ನನಗೆ ಇಂದಿಗೂ ನೆನಪಿವೆ.

ಈ ತಂದೆ ತಾಯಿಗಳಲ್ಲಿ 1735ನೆಯ ಸಂವತ್ಸರದ ಅಶ್ವಿನ ಬಹುಳ ದ್ವಾದಶಿಯ ದಿನ (ಅಂದರೆ 1869ನೆಯ ಇಸವಿ ಅಕ್ಟೋಬರ್ 2ನೆಯ ತಾರೀಖಿನ ದಿವಸ) ಪೋರಬಂದರದಲ್ಲಿ ಅಥವಾ ಸುದಾಮಪುರಿಯಲ್ಲಿ ನಾನು ಹುಟ್ಟಿದೆನು.

ನನ್ನ ಬಾಲ್ಯವು ಪೋರ ಬಂದರದಲ್ಲಿಯೇ ಕಳೆಯಿತು. ನನ್ನನ್ನು ಶಾಲೆಗೆ ಕಲಿಯಲು ಕಳಿಸಿದ್ದರು. ನಾನು ಕಷ್ಟದಿಂದ ಕೆಲವು ಮಗ್ಗಿಗಳನ್ನು ಕಲಿತಿದ್ದೆನು.

ಬಾಲ್ಯ

ತಂದೆಯವರು ಪೋರಬಂದರದಿಂದ ರಾಜಕೋಟಕ್ಕೆ ಹೋದಾಗ ನಾನು ಏಳು ವರುಷ ವಯಸ್ಸಿನವನಿರಬೇಕು. ಆಗ ನನ್ನನ್ನು ರಾಜಕೋಟದ ಶಾಲೆಗೆ ಕಳಿಸಿದರು. ಪ್ರಾಥಮಿಕ ಶಾಲೆಯಿಂದ ಮೇಲಿನ ಶಾಲೆಗೆ, ಅಲ್ಲಿಂದ ಹಾಯಸ್ಕೂಲಿಗೆ ನಾನು ಹೋದೆನು. ಇಲ್ಲಿಯವರೆಗೆ ಯಾವುದೇ ಶಿಕ್ಷಕನ ಕೂಡ ನಾನು ಸುಳ್ಳಾಡಿದ್ದು ನನಗೆ ನೆನಪಿಲ್ಲ. ಯಾವ ಹುಡುಗನ ಸಂಗಡವೂ ಗೆಳೆತನ ಮಾಡಿದ್ದು ನನಗೆ ಜ್ಞಾಪಕವಿಲ್ಲ. ನಾನು ಬಹಳ ಸಂಕೋಚ ಪ್ರವೃತ್ತಿಯವನಾಗಿದ್ದೆನು.

ಹಾಯಸ್ಕೂಲಿನಲ್ಲಿಯ ಮೊದಲನೆಯ ವರುಷದಲ್ಲಿ ನಡೆದ ಒಂದು ಸಂಗತಿಯು ಉಲ್ಲೇಖನೀಯವಾಗಿದೆ. ಇನ್ಸ್‌ಪೆಕ್ಟರಾದ ಜಾಯಿಲ್ಸ ಅವರು ಪರೀಕ್ಷೆಗಾಗಿ ಶಾಲೆಗೆ ಬಂದಿದ್ದರು. ಅವರು ಹುಡುಗರಿಗೆ ಐದು ಶಬ್ದಗಳನ್ನು ಬರೆಯಲು ಹೇಳಿದರು. ಅವುಗಳಲ್ಲಿ "ಕೆಟ್ಲ್" (ಏಜಣಣಟಜ) ಎಂಬ ಶಬ್ದವು ಒಂದಾಗಿತ್ತು.

ಅದನ್ನು ಬರೆಯುವಲ್ಲಿ ನಾನು ತಪ್ಪಿದೆನು. ಗುರುಗಳು ತಮ್ಮ ಪಾಪೋಸಿನಿಂದ ನನಗೆ ಸಂಜ್ಞೆ ಮಾಡಿ ಸೂಚಿಸಿದರು. ನನಗೆ ಇದರ ಅರ್ಥವಾಗುವ ಬಗೆ ಹೇಗೆ? ನನ್ನ ಸಂಗಡಿಗನ ಪಾಟಿಯನ್ನು ನೋಡಿ ನಾನು ನಕಲು ಮಾಡಬೇಕೆಂದು ಅವರು ಸೂಚಿಸುತ್ತಾರೆಂಬ ಸಂಗತಿಯು ನನ್ನ ತಲೆಯೊಳಗೆ ಸರ್ವಥಾ ಹೋಗಲಿಲ್ಲ. ನಾವು ಬೇರೆಯವರಿಂದ ನಕಲು ಮಾಡದಂತೆ ಶಿಕ್ಷಕರು ನೋಡಿಕೊಳ್ಳುತ್ತಾರೆಂದು ನನ್ನ ತಿಳುವಳಿಕೆಯಿತ್ತು. ಎಲ್ಲ ಹುಡುಗರೂ ಐದೂ ಶಬ್ದಗಳನ್ನು ಸರಿಯಾಗಿ ಬರೆದರು. ನಾನೊಬ್ಬನೇ ಮೂರ್ಖನಾದೆನು. ಹಿಂದಿನಿಂದ

ಗುರುಗಳು ನನಗೆ ನನ್ನ 'ಮೂರ್ಖತನ'ವನ್ನು ತೋರಿಸಿಕೊಟ್ಟರು. ಆದರೆ ಅದರ ಪರಿಣಾಮವೇನೂ ನನ್ನ ಮೇಲೆ ಆಗಲಿಲ್ಲ. ನಕಲು ಮಾಡುವುದನ್ನು ನಾನು ಎಂದೂ ಕಲಿಯಲಿಲ್ಲ.

ಇದೇ ಕಾಲದಲ್ಲಿ ನಡೆದ ಇನ್ನೆರಡು ಘಟನೆಗಳು ಯಾವಾಗಲೂ ನನ್ನ ನೆನಪಿನಲ್ಲಿವೆ. ತಂದೆಯವರು 'ಶ್ರವಣನ ಪಿತೃಭಕ್ತಿ' ಎಂಬ ನಾಟಕ ಗ್ರಂಥವನ್ನು ಕೊಂಡು ತಂದಿದ್ದರು. ಅದರ ಮೇಲೆ ನನ್ನ ದೃಷ್ಟಿಯು ಹರಿಯಿತು. ನಾನು ಅದನ್ನು ಬಹಳ ಆಸಕ್ತಿಯಿಂದ ಓದಿದೆನು. ಇದೇ ಸಮಯದಲ್ಲಿ ಕನ್ನಡಿಯೊಳಗೆ ಚಿತ್ರಗಳನ್ನು ತೋರಿಸುವ ಜನರೂ ಬಂದಿದ್ದರು. ಶ್ರವಣನು ತನ್ನ ತಂದೆ ತಾಯಿಗಳನ್ನು ಕಾವಡಿಯಲ್ಲಿ ಕುಳ್ಳಿರಿಸಿ ತೀರ್ಥ ಯಾತ್ರೆಗೆ ಕರೆದುಕೊಂಡು ಹೋಗುವ ಚಿತ್ರವನ್ನು ನಾನು ಇವುಗಳಲ್ಲಿ ನೋಡಿದೆನು. ಇವೆರಡೂ ಸಂಗತಿಗಳು ನನ್ನ ಮನಸ್ಸಿನಲ್ಲಿ ಆಳವಾಗಿ ಮೂಡಿದ್ದವು. ನಾನೂ ಶ್ರವಣನಂತೆಯೇ ಆಗಬೇಕೆಂದು ನನ್ನ ಮನಸ್ಸಿನಲ್ಲಿ ವಿಚಾರ ಬಂದಿತು. ಶ್ರವಣನು ಸಾಯುತ್ತಿರುವಾಗ ಅವನ ತಂದೆ ತಾಯಿಗಳು ಮಾಡಿದ ವಿಲಾಪವು ನನಗೆ ಇಂದಿಗೂ ಜ್ಞಾಪಕವಿದೆ. ಆ ವಿಲಾಪದ ಹೃದಯವಿದ್ರಾವಕ ಕವನವನ್ನು ನಾನು ರಾಗದ ಪೆಟ್ಟಿಗೆಯ ಮೇಲೆಯೂ ನುಡಿಸುತ್ತಿದ್ದೆನು.

ನನಗೆ ನೆನಪಿದ್ದ ಎರಡನೆಯ ಘಟನೆಯೆಂದರೆ ನಾನು ಹರಿಶ್ಚಂದ್ರ ನಾಟಕವನ್ನು ನೋಡಿದುದು. ಅದನ್ನು ಪುನಃ ಪುನಃ ನೋಡಬೇಕೆಂದು ಮನಸ್ಸಿನಲ್ಲಿ ಬರುತ್ತಿತ್ತು. ಆದರೆ ಮೇಲಿನಿಂದ ಮೇಲೆ ನಾಟಕಕ್ಕೆ ನಾನು ನನ್ನ ಮನೋರಂಗದಲ್ಲಿ ನೂರಾರು ಸಲ ಆಡಿರಬೇಕು. ನನಗೆ ಹರಿಶ್ಚಂದ್ರನ ಕನಸುಗಳು ಬೀಳುತ್ತಿದ್ದವು. ಹರಿಶ್ಚಂದ್ರನಂತೆಯೇ ಎಲ್ಲರೂ ಸತ್ಯವಾದಿಗಳೇಕಾಗಬಾರದು ಎಂಬ ವಿಚಾರದಿಂದ ನಾನು ಹುಚ್ಚನಂತಾದೆನು. ಹರಿಶ್ಚಂದ್ರನ ಹಾಗೆ ಕಷ್ಟಗಳನ್ನು ಅನುಭವಿಸಿಯೂ ಸತ್ಯವನ್ನು ಬಿಡದಿರುವುದು ಜೀವನದಲ್ಲಿ ಸಾರಭೂತವಾದ ಮಾತು ಎಂಬ ವಿಚಾರವೂ ನನ್ನ ಮನಸ್ಸಿನಲ್ಲಿ ದೃಢವಾಗಿ ಬೇರೂರಿತು.

ಬಾಲ್ಯ ವಿವಾಹ

ಹದಿಮೂರು ವರುಷದವನಿದ್ದಾಗಲೇ ನನ್ನ ಮದುವೆಯಾಯಿತೆಂದು ಇಲ್ಲಿ ಬರೆಯಲು ನನಗೆ ಅತ್ಯಂತ ದುಃಖವೆನಿಸುತ್ತದೆ. ಹನ್ನೆರಡು-ಹದಿಮೂರು ವರುಷದ ಮಕ್ಕಳನ್ನು ನೋಡಿದಾಗ ನನ್ನ ಮದುವೆಯ ನೆನಪಾಗಿ ನನ್ನ ಬಗ್ಗೆಯೇ ಕನಿಕರ ಹುಟ್ಟುತ್ತದೆ. ಅಲ್ಲದೆ ನನ್ನಂತೆ ದುರವಸ್ಥೆಗೆ ಗುರಿಯಾಗದ ಈ ಹುಡುಗರನ್ನು ಅಭಿನಂದಿಸಬೇಕೆಂಬ ಇಚ್ಛೆಯುಂಟಾಗುತ್ತದೆ. ಬಾಲ ವಿವಾಹವನ್ನು ಸಮರ್ಥಿಸುವ ಒಂದೂ ನೈತಿಕ ತರ್ಕವು ನನಗೆ ಹೊಳೆಯುವುದಿಲ್ಲ.

ಏಕಕಾಲಕ್ಕೆ ಲಗ್ನ ಮಾಡಬೇಕೆಂದು ನನ್ನ ಅಣ್ಣನನ್ನೂ ನನ್ನನ್ನೂ ರಾಜಕೋಟದಿಂದ ಪೋರಬಂದರಕ್ಕೆ ಕರೆದುಕೊಂಡು ಹೋದರು. ತಂದೆಯವರು ದಿವಾಣರಾಗಿದ್ದರೇನಾಯಿತು. ಅವರೂ ನೌಕರರು; ರಾಜಪ್ರಿಯರಾಗಿದ್ದುದರಿಂದಂತೂ ಇನ್ನೂ ಪರಾಧೀನರು. ಠಾಕೂರ ಮಹಾಶಯರು ಕೊನೆಯ ಗಳಿಗೆಯವರೆಗೂ ನಮ್ಮ ತಂದೆಯವರನ್ನು ಬಿಡಲಿಲ್ಲ. ಅವರು ಮದುವೆಗೆ ಹೋಗಲು ಬರೀ ಎರಡು ದಿನ ಮೊದಲು ಕಳುಹಿಸಿದರು. ಆದುದರಿಂದ ಅಂಚೆಯ ಗಾಡಿಯಲ್ಲಿ ಹೋಗಬೇಕಾಯಿತು. ಆದರೆ ದೈವವು ಇನ್ನೇನೋ ಚಿಂತಿಸಿತ್ತು. ರಾಜಕೋಟದಿಂದ ಪೋರಬಂದರದ ಅರವತ್ತು ಹರದಾರಿ. ಎತ್ತಿನ ಬಂಡಿಯಿಂದ ಐದು ದಿನಗಳ ದಾರಿ. ತಂದೆಯವರು ಮೂರೇ ದಿನಗಳಲ್ಲಿ ಬಂದರು. ಕೊನೆಯ ಘಟ್ಟದಲ್ಲಿ ಗಾಡಿಯು ಉರುಳಿತು.

ತಂದೆಯವರಿಗೆ ಬಲವಾದ ಪೆಟ್ಟಾಯಿತು. ನಮ್ಮ ವಿವಾಹದ ಆನಂದವು ಅರ್ಧಕ್ಕಿಳಿಯಿತು. ಆದರೆ ವಿವಾಹವೇನೊ ನಡೆದುಹೋಯಿತು.

ಅಂದಿನಿಂದ ನಾನು ಮತ್ತು ನನ್ನ ಹೆಂಡತಿ ನಾವಿಬ್ಬರೂ ಕೂಡಿಯೇ ಇರತೊಡಗಿದೆವು. ನಿಧಾನವಾಗಿ ನಮ್ಮ ಪರಿಚಯವು ಬೆಳೆಯತೊಡಗಿತು. ಪರಂಪರೆಯನ್ನು ಲಕ್ಷಿಸದೆ ಪರಸ್ಪರ ಮಾತನಾಡತೊಡಗಿದೆವು. ನಾವಿಬ್ಬರೂ ಒಂದೇ ವಯಸ್ಸಿನವರು. ಆದರೂ ನಾನು ಪತಿದೇವನಾಗಿಬಿಟ್ಟೆನು.

ಪತಿದೇವ

ನಾನು ಏಕಪತ್ನೀ ವ್ರತವನ್ನು ಪಾಲಿಸುವುದಾದರೆ ನನ್ನ ಹೆಂಡತಿಯೂ ಏಕಪತಿ ವ್ರತವನ್ನು ಆಚರಿಸಬೇಕೆಂಬ ವಿಚಾರದಿಂದ ನಾನು ತುಂಬಾ ಮಾತ್ಸರ್ಯಪೂರ್ಣ ಗಂಡನಾಗಿಬಿಟ್ಟೆನು. ಅಲ್ಲದೆ 'ಪಾಲನೆ ಮಾಡಬೇಕು' ಎಂಬ ವಿಚಾರದಿಂದ 'ಪಾಲಿಸುವಂತೆ ಮಾಡಬೇಕು' ಎಂಬ ಹಂತಕ್ಕೆ ಬಂದು ಮುಟ್ಟಿದೆನು. ಪಾಲಿಸುವಂತೆ ಮಾಡಬೇಕಾದರೆ ನಾನು ಹೆಂಡತಿಯ ಕಾವಲುಗಾರನಾಗಬೇಕು. ಹೆಂಡತಿಯು ಯಾವಾಗ ಎಲ್ಲೆಲ್ಲಿ ಹೋಗುತ್ತಾಳೆಂಬುದನ್ನು ನಾನು ತಿಳಿದುಕೊಳ್ಳುವುದು ಅನಿವಾರ್ಯವಾಯಿತು. ಇದಕ್ಕಾಗಿ ನನ್ನ ಅಪ್ಪಣೆಯನ್ನು ಪಡೆದುಕೊಳ್ಳದೆ ಅವಳು ಎಲ್ಲಿಗೂ ಹೋಗಕೂಡದೆಂಬ ನನ್ನ ಭಾವನೆಯು ನಮ್ಮಿಬ್ಬರೊಳಗಿನ ತಾಪದಾಯಕವಾದ ಜಗಳಗಳಿಗೆ ಮೂಲವಾಯಿತು. ಅಪ್ಪಣೆ ಪಡೆಯದೆ ಅವಳು ಎಲ್ಲಿಗೂ ಹೋಗಕೂಡದೆನ್ನುವುದು ಒಂದು ತರದ ಬಂಧನವೇ ಆಯಿತು.

ಆದರೆ ಕಸ್ತೂರ ಬಾಯಿಯು ಇಂತಹ ಬಂಧನವನ್ನು ಸಹಿಸುವಷ್ಟು ಮೃದು ಸ್ವಭಾವದವಳಿದ್ದಿಲ್ಲ. ಮನಸ್ಸಿಗೆ ಬಂದ ಕಡೆಗೆ ಅವಳು ನನ್ನನ್ನು ಕೇಳದೆಯೆ ಹೋಗೇ ಬಿಡುತ್ತಿದ್ದಳು. ಕಸ್ತೂರಬಾಯಿಯು ವಹಿಸಿದ್ದ ಈ ಸ್ವಾತಂತ್ರ್ಯ ಸಂಪೂರ್ಣ ದೋಷರಹಿತವಾಗಿತ್ತೆಂದೇ ನಾನು ಒಪ್ಪುತ್ತೇನೆ. ನಿಷ್ಪಾಪಳಾದ ಓರ್ವ ಬಾಲಿಕೆಯು ದೇವದರ್ಶನಕ್ಕೆ ಹೋಗುವುದಾಗಲೀ, ಯಾರನ್ನಾದರೂ ಕಾಣಲಿಕ್ಕೆ ಹೋಗುವುದಾಗಲೀ

ಇಂತಹ ಒತ್ತಾಯವನ್ನು ಯಾಕೆ ಸಹಿಸಬೇಕು? ಇಂತಹ ದಬ್ಬಾಳಿಕೆಯನ್ನು ನಾನು ಅವಳ ಮೇಲೆ ಹೇರುವುದಾದರೆ ಅವಳೂ ನನ್ನ ಮೇಲೆ ಹಾಗೆ ಏಕೆ ಮಾಡಬಾರದು? ಆದರೆ ಇದೆಲ್ಲ ತಿಳುವಳಿಕೆ ನನ್ನಲ್ಲಿ ಈಗ ಉಂಟಾಗಿದೆ.

ಆದರೆ ಇದರಿಂದ ನಮ್ಮ ದಾಂಪತ್ಯ ಜೀವನದಲ್ಲಿ ಮಾಧುರ್ಯವೇ ಇರಲಿಲ್ಲವೆಂದು ಓದುಗರು ತಿಳಿಯಬಾರದು. ನನ್ನ ನಿಷ್ಠುರತೆಗೆ ಪ್ರೇಮವೇ ಮೂಲವಾಗಿತ್ತು. ನಾನು ಕಲಿಯಬೇಕು, ಅವಳೂ ಕಲಿಯಬೇಕು; ದೇಹವೆರಡಾದರೂ ಒಮ್ಮನಸ್ಸಿನವರಾಗಿರಬೇಕು ಎಂಬುದೇ ನನ್ನ ಭಾವನೆಯಾಗಿತ್ತು. ಕಸ್ತೂರಬಾಯಿಯ ಮನಸ್ಸಿನಲ್ಲಿಯೂ ಅದೇ ಭಾವವಿತ್ತೋ ಹೇಗೆ ಎಂಬುದನ್ನು ನಾನರಿಯೆ. ಅವಳು ನಿರಕ್ಷರಿಯಾಗಿದ್ದಳು. ತನ್ನ ಅಜ್ಞಾನದ ಬಗ್ಗೆ ಅವಳಲ್ಲಿ ಅಸಮಾಧಾನವಿರಲಿಲ್ಲ. ಅವಳಿಗೆ ಕಲಿಸಬೇಕೆಂಬ ಹಿರಿ ಬಯಕೆ ನನ್ನಲ್ಲಿತ್ತು. ಆದರೆ ನನ್ನ ವಿಷಯವಾಸನೆಯು ನನಗೆ ಕಲಿಸಲು ಹೇಗೆ ಕೊಡಬೇಕು? ಅವಳ ಮನಸ್ಸಿನ ವಿರುದ್ಧ ನಾನು ಕಲಿಸಬೇಕಾಗುತ್ತಿತ್ತು. ಅದರಲ್ಲಿಯೂ ಇಂತಹ ಸಮಯ ಸಿಗುವುದು ಬರೀ ರಾತ್ರಿ ಹೊತ್ತಿಗೆ. ಹಿರಿಯರ ಸಮಕ್ಷಮದಲ್ಲಿ ಪತ್ನಿಯ ಕಡೆಗೆ ನೋಡುವುದೂ ಶಕ್ಯವಿರಲಿಲ್ಲ. ಮಾತನಾಡುವುದಂತೂ ದೂರ ಉಳಿಯಿತು. ಆ ಕಾಲದಲ್ಲಿ ಸೌರಾಷ್ಟ್ರದಲ್ಲಿ ಬುರುಕಿ ಹಾಕಿಕೊಳ್ಳುವ ಅರ್ಥಹೀನವಾದ ಕಾಡು ಪದ್ಧತಿಯಿದ್ದಿತು. ಅದು ಇನ್ನೂ ಇದೆ. ಹೀಗಾಗಿ ತಾರುಣ್ಯಾವಸ್ಥೆಯಲ್ಲಿ ಕಲಿಸಲು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದವು. ನಾನು ವಿಷಯಾಸಕ್ತಿಯ ಮೋಹದಿಂದ ಎಚ್ಚೆತ್ತಾಗ ಸಾರ್ವಜನಿಕ ಜೀವನದಲ್ಲಿ ನನ್ನ ಪ್ರವೇಶವಾಗಿ ಹೋಗಿತ್ತು. ಇದರಿಂದಾಗಿ ಕಲಿಸಲು ಹೆಚ್ಚು ಸಮಯ ಕೊಡುವ ಸ್ಥಿತಿಯಲ್ಲಿ ನಾನಿರಲಿಲ್ಲ. ಆದರೆ ನನ್ನ ಪ್ರೀತಿಯು ವಿಷಯಾಸಕ್ತಿಯಿಂದ

ದೂಷಿತವಾಗಿರದಿದ್ದರೆ ಕಸ್ತೂರಬಾಯಿಯು ಇಂದು ವಿದುಷಿಯಾಗಬಹುದಾಗಿತ್ತು. ಶುದ್ಧ ಪ್ರೇಮದ ಮುಂದೆ ಯಾವ ಮಾತೂ ಅಶಕ್ಯವಲ್ಲ. ನಾನು ಹೆಂಡತಿಯ ವಿಷಯದಲ್ಲಿ ವಿಷಯಾಸಕ್ತನಾಗಿದ್ದೆನು. ಈ ಆಸಕ್ತಿಯೊಂದಿಗೆ ನನ್ನಲ್ಲಿ ಕರ್ತವ್ಯ ಪರಿಣತಿಯು ಇಲ್ಲದೆ ಹೋಗಿದ್ದರೆ, ನಾನು ರೋಗಪೀಡಿತನಾಗಿ ಮರಣಕ್ಕೆ ತುತ್ತಾಗುತ್ತಿದ್ದೆನು; ಇಲ್ಲವೆ ಜಗತ್ತಿನಲ್ಲಿ ನನ್ನ ಬಾಳೇ ವ್ಯರ್ಥವಾಗುತ್ತಿತ್ತು. ಈ ಕರ್ತವ್ಯ ಪರಿಣತಿಯೇ ಕೆಲಮಟ್ಟಿಗೆ ನನ್ನನ್ನು ರಕ್ಷಿಸಿತು. ಇದಕ್ಕೆ ಇನ್ನೊಂದು ಕಾರಣವೂ ಇತ್ತು. ಒಳ್ಳೆಯ ನಿಷ್ಠೆಯಿದ್ದವರನ್ನು ಪರಮಾತ್ಮನೇ ರಕ್ಷಿಸುತ್ತಾನೆ. ಹಿಂದೂ ಕುಟುಂಬಗಳಲ್ಲಿ ಸಣ್ಣ ವಯಸ್ಸಿನ ಗಂಡ ಹೆಂಡಿರನ್ನು ಬಹಳ ಕಾಲದವರೆಗೆ ಕೂಡಿರಲು ತಂದೆ ತಾಯಿಗಳು ಬಿಡುವುದಿಲ್ಲ. ಹದಿಮೂರನೆಯ ವಯಸ್ಸಿನಿಂದ ಹದಿನೆಂಟನೆಯ ವಯಸ್ಸಿನವರೆಗಿನ ಅವಧಿಯಲ್ಲಿ ಹೀಗೆ ನಾವಿಬ್ಬರೂ ಕೂಡಿ ಒಟ್ಟಿಗಿದ್ದುದು ಮೂರು ವರ್ಷಗಳಿಗಿಂತ ಹೆಚ್ಚು ಆಗಲಾರದು. 18ನೆಯ ವಯಸ್ಸಿನಲ್ಲಿ ನಾನು ಇಂಗ್ಲೆಂಡಿಗೆ ಹೋದೆನು. ಆದುದರಿಂದ ದೀರ್ಘವೂ ಮಧುರವೂ ಆದ ವಿಯೋಗಕ್ಕೆ ಅನುವು ಸಿಕ್ಕಿತು. ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೂ ನಾವು ಆರು ತಿಂಗಳಿಗಿಂತ ಹೆಚ್ಚು ಕಾಲ ಕೂಡಿ ಇರಲಿಲ್ಲ. ಅಷ್ಟರಲ್ಲಿ ದಕ್ಷಿಣ ಆಫ್ರಿಕೆಗೆ ಹೋಗಲು ಕರೆ ಬಂದಿತು. ಈ ಅವಧಿಯಲ್ಲಿ ನನ್ನ ಕಣ್ಣುಗಳು ಪೂರ್ಣ ತೆರೆದವು.

○

ಪ್ರೌಢ ಶಾಲೆಯಲ್ಲಿ

ವಿವಾಹದ ಪರಿಣಾಮವಾಗಿ ನನ್ನ ಒಂದು ವರುಷ ವ್ಯರ್ಥವಾಯಿತು. ಆದರೆ ನನ್ನ ಅಭ್ಯಾಸವು ಹಾಗೆಯೇ ಮುಂದುವರೆಯಿತು. ಐದನೆಯ ಹಾಗೂ ಆರನೆಯ ಇಯತ್ತೆಗಳಲ್ಲಿ ಅನುಕ್ರಮವಾಗಿ 4 ಹಾಗೂ 10 ರೂಪಾಯಿಗಳ ಮಾಸಿಕ ಶಿಷ್ಯ ವೃತ್ತಿಗಳು ನನಗೆ ಸಿಕ್ಕಿದ್ದವು. ಈ ವಿದ್ಯಾರ್ಥಿ ವೇತನಗಳು ಸೌರಾಷ್ಟ್ರದ ವಿದ್ಯಾರ್ಥಿಗಳಲ್ಲಿ ಮೇಲಿನ ಕ್ರಮಾಂಕ ಪಡೆದವರಿಗಾಗಿಯೇ ಇದ್ದವು. ಆ ಕಾಲದಲ್ಲಿ 50 ವಿದ್ಯಾರ್ಥಿಗಳ ವರ್ಗದಲ್ಲಿ ಸೌರಾಷ್ಟ್ರದವರು ಹೆಚ್ಚು ಮಂದಿ ಇರುವುದು ಸಾಧ್ಯವಿರಲಿಲ್ಲ.

ನಾನು ನನ್ನ ಆಚಾರ ವಿಚಾರಗಳಲ್ಲಿ ಬಹಳ ಜಾಗರೂಕನಾಗಿರುತ್ತಿದ್ದೆನು. ಒಳ್ಳೆಯ ನಡತೆಯಲ್ಲಿ ನನ್ನಿಂದೇನಾದರೂ ತಪ್ಪಾದರೆ ನಾನು ಅಳುತ್ತಿದ್ದೆನು. ನಾನು ಮಾಡಿದ ಯಾವುದೇ ಕೆಲಸಕ್ಕಾಗಿ ಶಿಕ್ಷಕರು ನನ್ನನ್ನು ದೂರುವಂತಾದರೆ ಅಥವಾ ಅವನ ಮನಸ್ಸಿನಲ್ಲಿ ಅಂತಹ ವಿಚಾರ ಹುಟ್ಟುವಂತಾದರೂ, ಅದನ್ನು ಸಹಿಸುವುದು ನನ್ನಿಂದಾಗುತ್ತಿರಲಿಲ್ಲ.

ನಾನು ಏಳನೆಯ ಇಯತ್ತೆಯಲ್ಲಿದ್ದಾಗ ದೋರಾಬಜಿ ಏದಲಜಿಗಿಮಿ ಅವರು ಮುಖ್ಯೋಪಾಧ್ಯಾಯಕರಾಗಿದ್ದರು. ಅವರು ಮೇಲಿನ ತರಗತಿಯ ವಿದ್ಯಾರ್ಥಿಗಳಿಗೆ ವ್ಯಾಯಾಮವನ್ನೂ ಕ್ರಿಕೆಟ್ ಆಡುವುದನ್ನೂ ಕಡ್ಡಾಯವಾಗಿ ಮಾಡಿದ್ದರು. ಆದರೆ ನನಗೆ ಅವುಗಳಲ್ಲಿ ಅಭಿರುಚಿಯಿರಲಿಲ್ಲ. ಕಡ್ಡಾಯವನ್ನಾಗಿಸುವ ಮೊದಲು ನಾನು ವ್ಯಾಯಾಮಕ್ಕೆ ಎಂದೂ ಹೋಗುತ್ತಿರಲಿಲ್ಲ.

ಆದರೂ ವ್ಯಾಯಾಮಕ್ಕೆ ಹೋಗದಿದ್ದುದರಿಂದ ನನಗೆ ಯಾವ ಹಾನಿಯೂ ಆಗಲಿಲ್ಲ. ಇದಕ್ಕೂ ಕಾರಣವಿದೆ. ಶುದ್ಧ ಹವೆಯಲ್ಲಿ ತಿರುಗಾಡುವುದು ಒಳ್ಳೆಯದೆಂದು ನಾನು ಪುಸ್ತಕಗಳಲ್ಲಿ ಓದಿದ್ದೆನು. ಈ ಮಾತು ನನ್ನ ಮನಸ್ಸಿಗೆ ಹಿಡಿಸಿತು. ಅಂದಿನಿಂದ ತಿರುಗಾಡುವ ಅಭ್ಯಾಸವನ್ನಿಟ್ಟೆನು. ತಿರುಗಾಡುವುದೂ ಒಂದು ತರದ ವ್ಯಾಯಾಮವೇ ಆಗಿದೆ. ಇದರಿಂದಾಗಿ ನನ್ನ ಮೈಯು ಗಟ್ಟಿಮುಟ್ಟಾಯಿತು.

ತಂದೆಯವರ ಶುಶ್ರೂಷೆ ಮಾಡುವ ತೀವ್ರ ಇಚ್ಛೆಯೂ ವ್ಯಾಯಾಮದ ಅರುಚಿಗೆ ಇನ್ನೊಂದು ಕಾರಣವಾಗಿತ್ತು. ಶಾಲೆ ಬಿಡುತ್ತಲೇ ಮನೆಗೆ ಹೋಗಿ ಅವರ ಸೇವೆಯಲ್ಲಿ ಮಗ್ನನಾಗುತ್ತಿದ್ದೆನು. ಆದರೆ ವ್ಯಾಯಾಮವನ್ನು ಕಡ್ಡಾಯವನ್ನಾಗಿಸಿದಾಗ ಈ ಸೇವೆಯಲ್ಲಿ ವಿಘ್ನವುಂಟಾಯಿತು. ತಂದೆಯವರ ಸೇವೆಗೈಯುವುದಕ್ಕಾಗಿ ನನಗೆ ವ್ಯಾಯಾಮದಿಂದ ಬಿಡುವು ಕೊಡಬೇಕೆಂದು ನಾನು ಗಿಮಿ ಸಾಹೇಬರನ್ನು ಬಿನ್ನವಿಸಿದೆನು. ಆದರೆ ಅವರು ಬಿಡುವು ಕೊಡುವುದು ಹೇಗೆ?

ಶನಿವಾರದ ದಿನ ಒಮ್ಮೆ ಬೆಳಿಗ್ಗೆ ಶಾಲೆ ಇತ್ತು. ಸಂಜೆಯ ನಾಲ್ಕು ಗಂಟೆಗೆ ವ್ಯಾಯಾಮಕ್ಕಾಗಿ ಹೋಗಬೇಕಾಗಿತ್ತು. ನನ್ನ ಹತ್ತಿರ ಗಡಿಯಾರವಿರಲಿಲ್ಲ. ಮುಗಿಲಿನಲ್ಲಿ ಮೋಡಗಳಿದ್ದವು. ಇದರಿಂದ ನಾನು ಮೋಸಹೋದೆನು. ವ್ಯಾಯಾಮಕ್ಕೆ ಹೋಗಿ ಮುಟ್ಟುವಷ್ಟರಲ್ಲಿ, ಎಲ್ಲ ಹುಡುಗರೂ ಹೊರಟುಹೋಗಿದ್ದರು. ಮರುದಿನ ಗಿಮಿ ಸಾಹೇಬರು ನನ್ನ ಗೈರುಹಾಜರಿಯ ಕಾರಣವನ್ನು ಕೇಳಿದರು. ಆದ ನಿಜ ಸಂಗತಿಯನ್ನು ನಾನು ತಿಳಿಸಿದೆನು. ನನ್ನ ಹೇಳಿಕೆ ಅವರಿಗೆ ನಿಜವೆನಿಸಲಿಲ್ಲ. ನನಗೆ ಒಂದು ಆಣೆ ದಂಡ ವಿಧಿಸಿದರು. ಗುರುಗಳು ನಾನು ಹೇಳಿದ್ದು ಸುಳ್ಳೆಂದು ತಿಳಿದರಲ್ಲಾ ಎಂದು ನನಗೆ ಬಹಳ ದುಃಖವಾಯಿತು. ನಾನು ಸುಳ್ಳು ಹೇಳಲಿಲ್ಲವೆಂಬುದನ್ನು ಮನಗಾಣಿಸುವುದು ಹೇಗೆ? ಯಾವ ಉಪಾಯವೂ ತೋರಲಿಲ್ಲ.

ಮನಸ್ಸಿನಲ್ಲಿ ವ್ಯಥೆ ಪಡುತ್ತ ಹಾಗೆಯೇ ಉಳಿಯಬೇಕಾಯಿತು. ನಾನು ಅತ್ತೆನು. ಸತ್ಯವನ್ನು ನುಡಿಯುವವನೂ ಆಚರಿಸುವವನೂ ಎಚ್ಚರಗೇಡಿಯಾಗಿರಬಾರದೆನ್ನುವುದು ಅಂದು ನನಗೆ ತಿಳಿಯಿತು. ನನ್ನ ಶಿಕ್ಷಣದ ಅವಧಿಯಲ್ಲಿ ನನ್ನಿಂದಾದ ಅಜಾಗರೂಕತೆಯು ಇದೇ ಮೊದಲಿನದು, ಇದೇ ಕೊನೆಯದು. ಕೊನೆಗೆ ಹೇಗಾದರೂ ಮಾಡಿ ನನಗಾದ ದಂಡ ಕ್ಷಮಿಸಿಕೊಂಡೆನೆಂಬ ಬಗ್ಗೆ ಸ್ಪಷ್ಟವಾದ ನೆನಪು ನನಗೆ ಇದೆ.

ವ್ಯಾಯಾಮದಿಂದ ಬಿಡುವು ಸಿಕ್ಕಿತು. ತಂದೆಯವರು ಗಿಮಿ ಸಾಹೇಬರಿಗೆ ಬರೆದ ಪತ್ರವೇ ಇದಕ್ಕೆ ಕಾರಣ. ಒಂದು ತಪ್ಪಿನ ದುಷ್ಪರಿಣಾಮವನ್ನು ನಾನು ಇಂದಿಗೂ ಅನುಭವಿಸುತ್ತಿದ್ದೇನೆ. ಶಿಕ್ಷಣದಲ್ಲಿ ಸುಂದರ ಅಕ್ಷರಗಳು ಅವಶ್ಯವಿಲ್ಲವೆಂಬ ತಪ್ಪು ಕಲ್ಪನೆಯು ನನ್ನಲ್ಲಿ ವಿಲಾಯತಿಗೆ ಹೋಗುವವರೆಗೂ ಇತ್ತು. ಆದರೆ ಬೇರೆಯವರ ಮುತ್ತಿನಂತಹ ಅಕ್ಷರಗಳನ್ನು ನೋಡಿ ನನಗೆ ಪಶ್ಚಾತ್ತಾಪವಾಯಿತು. ಕೆಟ್ಟ ಅಕ್ಷರಗಳನ್ನು ಬರೆಯುವುದು ಅಪೂರ್ಣ ಶಿಕ್ಷಣದ ಗುರುತೆಂದು ತಿಳಿಯಬೇಕೆಂಬುದು ನನ್ನ ಲಕ್ಷ್ಯಕ್ಕೆ ಬಂದಿತು. ಹಿಂದಿನಿಂದ ನನ್ನ ಬರಹವನ್ನು ಸುಧಾರಿಸಲಿಕ್ಕೆ ಪ್ರಯತ್ನಿಸಿದೆನು. ಆದರೆ ಗಡಿಗೆಯು ಸುಟ್ಟಮೇಲೆ ಮಣ್ಣು ಹಚ್ಚಿದರೆ ಲಾಭವೇನು?

ಸುಂದರ ಅಕ್ಷರವು ಶಿಕ್ಷಣದ ಅವಶ್ಯಕವಾದ ಅಂಗವು. ಇದಕ್ಕಾಗಿ ಚಿತ್ರ ಕಲೆಯನ್ನು ಕಲಿಯಬೇಕು. ಮಕ್ಕಳಿಗೆ ಚಿತ್ರಕಲೆಯನ್ನು ಮೊದಲು ಕಲಿಸಬೇಕು. ಹಕ್ಕಿ ಮೊದಲಾದವುಗಳನ್ನು ನೋಡಿ ಮಕ್ಕಳು ಹೇಗೆ ಅವುಗಳನ್ನು ನೆನಪಿಟ್ಟುಕೊಳ್ಳುವರೋ, ಮತ್ತು ಅವುಗಳನ್ನು ಸುಲಭವಾಗಿ ಗುರುತಿಸುವರೋ, ಅದೇ ರೀತಿಯಲ್ಲಿ ಅಕ್ಷರಗಳನ್ನು ಗುರುತಿಸಲು ಕಲಿಯಬೇಕು. ಚಿತ್ರಕಲೆಯನ್ನು ಕಲಿತು ಚಿತ್ರಗಳನ್ನು ಬರೆಯಲು ಕಲಿತಾದ ಮೇಲೆ ಅಕ್ಷರಗಳನ್ನು ಬರೆಯಲು ಕಲಿತರೆ, ಅವರ ಅಕ್ಷರವು ಮುದ್ರಿತ ಅಕ್ಷರದಂತೆ ಸುಂದರವಾಗುವುದು.

ಈ ಕಾಲದ ವಿದ್ಯಾ ಜೀವನದ ಇನ್ನೊಂದು ಸಂಗತಿಯು ಉಲ್ಲೇಖನೀಯವಾಗಿದೆ. ಸಂಸ್ಕೃತದ ಶಿಕ್ಷಕರು ನಮ್ಮಿಂದ ನಿಷ್ಠುರವಾಗಿ ಕೆಲಸ ತೆಗೆದುಕೊಳ್ಳುತ್ತಿದ್ದರು. ಫಾರಸಿ ಭಾಷೆಯ ಶಿಕ್ಷಕರು ಮೃದು ಸ್ವಭಾವದವರಾಗಿದ್ದರು. ಫಾರಸಿ ಭಾಷೆಯು ಸುಲಭವಾಗಿದೆಯೆಂದು ವಿದ್ಯಾರ್ಥಿಗಳು ತಮ್ಮಲ್ಲಿ ಆಡಿಕೊಳ್ಳುತ್ತಿದ್ದರು. ಇದನ್ನು ಕೇಳಿ ನಾನೂ ಲುಬ್ಧನಾದೆನು. ನಾನು ಒಂದು ದಿನ ಫಾರಸಿ ಭಾಷೆಯ ವರ್ಗದಲ್ಲಿ ಹೋಗಿ ಕುಳಿತುಕೊಂಡೆನು. ಸಂಸ್ಕೃತ ಶಿಕ್ಷಕರು ನನ್ನನ್ನು ಕರೆದು ಕೇಳಿದರು. ನೀನು ಯಾರ ಮಗನಿರುವಿ? ಎಂಬುದನ್ನು ವಿಚಾರಿಸು. "ನಿನ್ನ ಸ್ವಂತ ಧರ್ಮದ ಭಾಷೆಯನ್ನು ಕಲಿಯುವುದು ಬೇಡವೇ? ನಿನಗೆ ತಿಳಿಯದುದನ್ನು ನನಗೆ ಕೇಳು. ಎಲ್ಲ ವಿದ್ಯಾರ್ಥಿಗಳಿಗೂ ಚೆನ್ನಾಗಿ ಸಂಸ್ಕೃತವನ್ನು ಕಲಿಸಬೇಕೆಂದೇ ನನ್ನ ಇಚ್ಛೆ. ಮುಂದೆ ಓದಿದಂತೆಲ್ಲ ನಿನಗೆ ಅದರಲ್ಲಿ ಅಭಿರುಚಿಯು ಹುಟ್ಟುವುದು. ನೋಡು, ಎದೆಗುಂದಬೇಡ. ನೀನು ಪುನಃ ನನ್ನ ವರ್ಗದಲ್ಲಿ ಬಂದು ಕುಳಿತುಕೊಳ್ಳು." ಶಿಕ್ಷಕರ ಪ್ರೇಮವನ್ನು ಕಡೆಗಣಿಸುವುದು ನನ್ನಿಂದಾಗಲಿಲ್ಲ. ಇಂದು ನಾನು ಕೃಷ್ಣಶಂಕರ ಪಾಂಡ್ಯರಿಗೆ ಕೃತಜ್ಞನಾಗಿದ್ದೇನೆ. ಯಾವುದೇ ಹಿಂದೂ ಬಾಲಕನು ಸಂಸ್ಕೃತವನ್ನು ಚೆನ್ನಾಗಿ ಕಲಿಯದೆ ಇರಕೂಡದೆಂದು ನನಗೆ ಅಂದಿನಿಂದ ಹೊಳೆಯಿತು.

ಉಚ್ಚ ಶಿಕ್ಷಣದಲ್ಲಿ ಮಾತೃಭಾಷೆಯ ನಂತರ ಹಿಂದಿ, ಸಂಸ್ಕೃತ, ಫಾರಸಿ, ಅರಬಿ ಹಾಗೂ ಇಂಗ್ಲೀಷ್ ಭಾಷೆಗಳಿಗೂ ಸ್ಥಾನವಿರಬೇಕು. ಇಷ್ಟೊಂದು ಭಾಷೆಗಳ ಸಂಖ್ಯೆಯಿಂದ ಯಾರೂ ಭಯಪಡುವುದು ಬೇಡ, ಹಿಂದಿ, ಸಂಸ್ಕೃತ, ಗುಜರಾತಿ ಇವು ಒಂದೇ ಭಾಷೆಯೆಂದು ತಿಳಿಯಬಹುದು. ಅದೇ ರೀತಿಯಲ್ಲಿ ಫಾರಸಿ, ಅರಬಿ ಭಾಷೆಗಳೂ ಒಂದೇ.

ದುಃಖದ ಪ್ರಸಂಗ-1

ನನ್ನ ಕಿರಿಯ ಅಣ್ಣನ ಮಿತ್ರನೊಂದಿಗೆ ನಾನು ಗೆಳೆತನ ಮಾಡಿದೆನು. ಅವನ ಸಹವಾಸವು ನನ್ನ ತಾಯಿ, ಹಿರಿಯ ಅಣ್ಣ ಹಾಗೂ ನನ್ನ ಹೆಂಡತಿ ಈ ಮೂವರಿಗೂ ಸಮ್ಮತವಿರಲಿಲ್ಲ. ಆದರೆ ನಾನು "ಅವನನ್ನು ಸುಧಾರಿಸಲಿಕ್ಕೆಂದು ಅವನೊಂದಿಗೆ ಸಂಬಂಧವನ್ನು ಬೆಳೆಸಿದ್ದೇನೆ. ನನ್ನನ್ನು ಕುರಿತು ತಾವು ಎಳ್ಳಷ್ಟೂ ಚಿಂತಿಸುವುದು ಬೇಡ" ಎಂದು ಹೇಳಿದೆನು.

ನನ್ನ ವಿಚಾರವು ಸರಿಯಾಗಿರಲಿಲ್ಲವೆಂಬುದು ನನಗೆ ಹಿಂದಿನಿಂದ ತಿಳಿದು ಬಂದಿದೆ. ಒಬ್ಬಾತನನ್ನು ಸುಧಾರಿಸುವುದಕ್ಕಾಗಿಯೇ ಯಾಕಾಗಲೊಲ್ಲದು, ನಾವು ಆಳ ನೀರಿನಲ್ಲಿ ಇಳಿಯುವುದು ತರವಲ್ಲ. ಯಾರನ್ನು ನಾವು ಸುಧಾರಿಸಲು ಬಯಸುತ್ತೇವೆಯೋ ಅವರೊಂದಿಗೆ ಗೆಳೆತನವಾಗುವುದು ಸಾಧ್ಯವೇ ಇಲ್ಲ. ಗೆಳೆತನದಲ್ಲಿ ಅದ್ವೈತ ಭಾವವಿರಬೇಕು. ಇಂತಹ ಗೆಳೆತನವು ಜಗತ್ತಿನಲ್ಲಿ ಕಾಣುವುದು ಅಪರೂಪ. ಸಮಾನಗುಣ ಉಳ್ಳವರಲ್ಲಿ ಗೆಳೆತನವು ಶೋಭಿಸುತ್ತದೆ. ಹಾಗೂ ಮಿತ್ರರಲ್ಲಿ ಒಬ್ಬರ ಪ್ರಭಾವವು ಇನ್ನೊಬ್ಬರ ಮೇಲೆ ಬೀಳದೆ ಇರುವುದಿಲ್ಲ. ಆದುದರಿಂದ ಗೆಳೆತನದಲ್ಲಿ ಸುಧಾರಣೆಗೆ ಸ್ವಲ್ಪ ಇಂಬು ಇದೆ. ಗಾಢವಾದ ಮಿತ್ರತ್ವವು ಅನಿಷ್ಟವಾಗಿರುವುದು. ಏಕೆಂದರೆ ಮನುಷ್ಯನು ದೋಷಗಳನ್ನು ಕೂಡಲೇ ಗ್ರಹಿಸುತ್ತಾನೆ. ಆದರೆ ಗುಣಗಳನ್ನು ಗ್ರಹಿಸಲಿಕ್ಕೆ ಪ್ರಯಾಸಪಡಬೇಕಾಗುತ್ತದೆ. ಪರಮಾತ್ಮನೊಂದಿಗೆ ಮಿತ್ರತ್ವವನ್ನು ಬಯಸುವವನು ಒಬ್ಬನೇ ಒಂಟಿಗನಾಗಿರಬೇಕು ಅಥವಾ ಇಡೀ ವಿಶ್ವದೊಂದಿಗೆ ಮಿತ್ರತ್ವವನ್ನು ಮಾಡಬೇಕು.

ನನ್ನ ಮಿತ್ರನು ನನಗೆ ಹೇಳಿದನು "ನಾವು ಭಾರತೀಯರು ಮಾಂಸವನ್ನು ತಿನ್ನುವುದಿಲ್ಲ. ಇದರಿಂದಾಗಿ ನಿಶ್ಶಕ್ತರಾಗಿದ್ದೇವೆ. ಇಂಗ್ಲೀಷರು ನಮ್ಮ ಮೇಲೆ ರಾಜ್ಯವಾಳುತ್ತಿರುವುದಕ್ಕೆ ಅವರ ಮಾಂಸಾಹಾರವೇ ಕಾರಣ. ನೋಡು, ನಮ್ಮ ಶಿಕ್ಷಕರು ಮಾಂಸಾಹಾರಿಗಳಾಗಿದ್ದಾರೆ. ಹೀಗೆ ದೊಡ್ಡ ದೊಡ್ಡ ಜನರು ಮಾಂಸವನ್ನು ತಿನ್ನುತ್ತಾರೆ; ನೀನೂ ಅದನ್ನು ತಿನ್ನಬೇಕು."

ಮಾಂಸ ತಿನ್ನುವುದು ಒಳ್ಳೆಯದೆಂದು ನಾನು ತಿಳಿಯತೊಡಗಿದೆ. ಅದರಿಂದ ನಾನು ಶಕ್ತಿವಂತನೂ ಧೈರ್ಯವುಳ್ಳವನೂ ಆಗುವೆನು. ಇಡೀ ದೇಶವೆ ಮಾಂಸಾಹಾರಿಯಾದರೆ ನಾವು ಇಂಗ್ಲೀಷರನ್ನು ಗೆಲ್ಲಬಲ್ಲೆವು ಎಂದು ಭಾವಿಸಿದೆನು.

ನಾವು ಮಾಂಸವನ್ನು ತಿನ್ನುವ ದಿನವನ್ನು ನಿಶ್ಚಯಿಸಿದೆವು. ನಾನು ತಂದೆ ತಾಯಿಗಳಲ್ಲಿ ಭಕ್ತಿಯುಳ್ಳವನಾಗಿದ್ದೆನು. ನನ್ನ ಮಾಂಸಾಹಾರದ ಸುದ್ದಿಯು ಅವರಿಗೆ ಗೊತ್ತಾದರೆ, ಅವರು ವ್ಯಥೆಪಟ್ಟು ಸಾಯುವರು. ತಿಳಿದೋ ತಿಳಿಯದೆಯೋ ನಾನು ಸತ್ಯ ಸೇವಕನಾಗಿದ್ದೆನು. ಮಾಂಸವನ್ನು ಸೇವಿಸಿದರೆ ತಂದೆ ತಾಯಿಗಳನ್ನು ವಂಚಿಸಲೇಬೇಕಾಗುವುದೆಂಬುದು ನನಗೆ ತಿಳಿಯುತ್ತಿದ್ದಿಲ್ಲವೆಂದು ಹೇಳಲಾರೆನು.

ನಾನು ಬಲಿಷ್ಠನಾಗಬೇಕು. ಇತರರೂ ಹೀಗಾಗುವಂತೆ ಪ್ರೇರಿಸಬೇಕು ಮತ್ತು ಬ್ರಿಟಿಷರನ್ನು ಓಡಿಸಿ ಭಾರತವನ್ನು ಸ್ವತಂತ್ರವನ್ನಾಗಿಸಬೇಕು ಎಂದು ನಾನು ಬಯಸುತ್ತಿದ್ದೆನು. ಈ ಸುಧಾರಣೆಯ ಉತ್ಸಾಹದಲ್ಲಿ ನಾನು ಅಂಧನಾದೆನು.

ಹೀಗೆಯೇ ಒಂದು ವರ್ಷ ಗತಿಸಿರಬೇಕು; ಅಷ್ಟರಲ್ಲಿ ಐದಾರು ಸಲ ನಾನು ಮಾಂಸವನ್ನು ತಿಂದಿರಬೇಕು. ಇಂತಹ ಭೋಜನಗಳಲ್ಲಿ ನಾನು

ಭಾಗವಹಿಸಿದಾಗ, ಮನೆಗೆ ಬಂದು ಊಟ ಮಾಡುವುದಾಗುತ್ತಿರಲಿಲ್ಲ. ತಾಯಿಯು ಊಟಕ್ಕೆ ಕರೆದಾಗ "ಇಂದು ಹಸಿವೆಯಿಲ್ಲ; ತಿಂದದ್ದು ಪಚನವಾಗಲಿಲ್ಲ" ಎಂದು ನೆವ ಹೇಳಬೇಕಾಗುತ್ತಿತ್ತು. ಹೀಗೆ ನೆವ ಹೇಳುವ ಪ್ರಸಂಗ ಬಂದಾಗಲೆಲ್ಲ ನನ್ನ ಮನಸ್ಸಿಗೆ ತೀವ್ರವಾದ ಆಘಾತವಾಗುತ್ತಿತ್ತು. ನಾನು ಸುಳ್ಳು ಹೇಳುತ್ತಿದ್ದೇನೆ. ಅದೂ ನನ್ನ ತಾಯಿಯ ಕೂಡ, ಎಂದು ನನಗೆ ತಿಳಿಯುತ್ತಿತ್ತು. ಹುಡುಗರು ಮಾಂಸಾಹಾರ ಮಾಡುತ್ತಿದ್ದಾರೆಂದು ತಂದೆ - ತಾಯಿಗಳಿಗೆ ತಿಳಿದದ್ದೇ ಆದರೆ, ಅವರ ಮೇಲೆ ವಿದ್ಯುತ್ಪ್ರಹಾರವಾಗುವುದೆಂಬ ವಿಚಾರಗಳು ನನ್ನ ಹೃದಯವನ್ನು ಚುಚ್ಚುತ್ತಿದ್ದವು.

ಆದುದರಿಂದ ಮಾಂಸಾಹಾರ ಸೇವಿಸುವುದು ಅವಶ್ಯವಿದ್ದರೂ ತಂದೆ-ತಾಯಿಗಳನ್ನು ವಂಚಿಸುವುದು ಮಾಂಸ ತಿನ್ನುವುದಕ್ಕಿಂತಲೂ ಹೆಚ್ಚು ಕೆಡುಕಾದುದು. ಆದುದರಿಂದ ತಂದೆ-ತಾಯಿಗಳು ಬದುಕಿರುವವರೆಗೆ ಈ ನಿಶ್ಚಯವನ್ನು ನಾನು ನನ್ನ ಮಿತ್ರನಿಗೂ ತಿಳಿಸಿದೆನು. ಆ ದಿನದಿಂದ ಬಿಟ್ಟ ಮಾಂಸಾಹಾರವು ಬಿಟ್ಟೇ ಹೋಯಿತು.

○

ುಃಖದ ಪ್ರಸಂಗ-2

ಈ ಮಿತ್ರನ ಗೆಳೆತನವು ನನ್ನನ್ನು ವ್ಯಭಿಚಾರಕ್ಕೂ ಎಳೆದುಬಿಡುತ್ತಿತ್ತು. ಮ್ಮೆ ಈ ಮಿತ್ರನು ನನ್ನನ್ನು ವೇಶ್ಯಾಭವನಕ್ಕೆ ಕರೆದುಕೊಂಡು ೋದನು. ಅವಶ್ಯವುಳ್ಳ ಸೂಚನೆಗಳನ್ನು ಕೊಟ್ಟು ಅವನು ಓರ್ವ ೇಶ್ಯೆಯ ಮನೆಗೆ ನನ್ನನ್ನು ಕಳಿಸಿದನು. ನಾನು ಮನೆಯನ್ನೇನೋ ್ರವೇಶಿಸಿಯಾಯಿತು. ಆದರೆ ಯಾರನ್ನು ದೇವರು ರಕ್ಷಿಸಲು ಚ್ಛಿಸುತ್ತಾನೆಯೋ ಅವನು ಸ್ವತಃ ಪತನವನ್ನು ಬಯಸಿದರೂ ೇವರು ಅವನನ್ನು ರಕ್ಷಿಸುತ್ತಾನೆ. ಆ ಪಾಪ ಕೂಪದಲ್ಲಿ ನನಗೆ ಗತ್ತೆಲ್ಲವೂ ಕತ್ತಲು ಕವಿದಂತೆ ತೋರತೊಡಗಿತು. ಒಂದು ಮಾತನ್ನೂ ಾಡಲು ಸಾಧ್ಯವಾಗಲಿಲ್ಲ. ಲಜ್ಜೆಯಿಂದ ಸ್ತಬ್ಧನಾಗಿ ಆಕೆಯ ಹತ್ತಿರ ಂಚದ ಮೇಲೆ ಕುಳಿತುಬಿಟ್ಟೆನು. ಆಕೆಗೆ ಬಹಳ ಸಿಟ್ಟು ಬಂದು ನ್ನನ್ನು ಬಯ್ದು ಬಾಗಿಲನ್ನು ತೋರಿಸಿಬಿಟ್ಟಳು.

ನನ್ನ ಗಂಡಸುತನಕ್ಕೆ ಕೊರತೆ ಬಂದಂತೆ ತೋರಿ, ಭೂಮಿಯು ಾಯಿ ತೆರೆದರೆ ಮಾಯವಾದೇನು ಎನಿಸಿತು. ಆದರೆ ಈ ರೀತಿಯಾಗಿ ುದ್ಧಾರ ಮಾಡಿದುದಕ್ಕಾಗಿ ನಾನು ಸದಾ ದೇವರ ಉಪಕಾರವನ್ನು ್ಮರಿಸುತ್ತಿದ್ದೇನೆ.

ಈ ಸ್ನೇಹಿತನ ಮಾತುಗಳನ್ನು ಕೇಳಿ, ನಾನು ನನ್ನ ಹೆಂಡತಿಗೆ ಹಳ ಸಂಕಟವನ್ನು ಮಾಡಿದ್ದೇನೆ. ಹೀಗೆ ಹಿಂಸೆ ಮಾಡುತ್ತಿದ್ದುದಕ್ಕೆ ಾನು ನನ್ನನ್ನೂ ಎಂದೂ ಕ್ಷಮಿಸುವುದಿಲ್ಲ. ಇಂತಹ ಕಷ್ಟವನ್ನು

ಹಿಂದೂ ಮಹಿಳೆಯರು ಮಾತ್ರ ಸಹಿಸುತ್ತಾರೆ. ಇದರಿಂದಲೇ ನಾನು ಯಾವಾಗಲೂ ಮಹಿಳೆಯು ಸಹನಶೀಲತೆಯ ಮೂರ್ತಿಯೆಂದು ಎಣಿಸುತ್ತೇನೆ. ನನಗೆ ಅಹಿಂಸಾ ತತ್ವದ ಸೂಕ್ತ ತಿಳಿವಳಿಕೆಯುಂಟಾದ ಮೇಲೆಯೇ ಪತ್ನಿಯ ಮೇಲಿನ ನನ್ನ ಸಂಶಯವು ಹರಿಯಿತು. ಆಗ ನನಗೆ 'ಪತ್ನಿಯು ಪತಿಯ ದಾಸಿಯಲ್ಲ; ಅವಳು ಆತನ ಸಹಧರ್ಮಚಾರಿಣಿ. ಅವನ ಸುಖದುಃಖಗಳಲ್ಲಿ ಸಮಭಾಗಿನಿ. ಒಳಿತು-ಕೆಡಕು ಮಾಡುವಲ್ಲಿ ಗಂಡನಿಗೆ ಇದ್ದಷ್ಟು ಸ್ವಾತಂತ್ರ್ಯವು ಹೆಂಡತಿಗೂ ಇದೆ' ಎಂದು ನನ್ನ ಅರಿವಿಗೆ ಬಂದಿತು.

ಕಳ್ಳತನ ಮತ್ತು ಪ್ರಾಯಶ್ಚಿತ್ತ

ನನ್ನ ಆಪ್ತನೊಬ್ಬನ ಸಹಾಯದಿಂದ ನನಗೆ ಬೀಡಿ ಸೇದುವ ಚಟವು ಹತ್ತಿತು. ನನ್ನ ಚಿಕ್ಕಪ್ಪನಿಗೆ ಇದರ ಚಟವಿತ್ತು. ಹೊಗೆಯನ್ನು ಬಿಡುವುದನ್ನು ನೋಡಿ ನನಗೂ ಹಾಗೆ ಮಾಡುವ ಇಚ್ಛೆಯಾಯಿತು. ಆದರೆ ನಮ್ಮ ಹತ್ತಿರವೇನೂ ದುಡ್ಡು ಇರಲಿಲ್ಲ. ಆದುದರಿಂದಲೇ ಚಿಕ್ಕಪ್ಪನು ಸೇದಿ ಒಗೆದ ಕೊರೆ ಚುಟ್ಟಗಳನ್ನು ಕದ್ದು ತರ ಹತ್ತಿದೆವು. ಆದರೆ ಆ ತುಂಡುಗಳು ಯಾವಾಗಲೂ ಸಿಗುತ್ತಿರಲಿಲ್ಲ. ಆದುದರಿಂದ ನೌಕರರ ಹಣದೊಳಗಿನಿಂದ ಒಂದೆರಡು ದುಡ್ಡುಗಳನ್ನು ಕದ್ದು ಬೀಡಿಗಳನ್ನು ಕೊಂಡುಕೊಳ್ಳತೊಡಗಿದೆವು. ಆದರೆ ಇದರಿಂದ ಸಮಾಧಾನವಾಗಲಿಲ್ಲ. ಹಿರಿಯರ ಅಪ್ಪಣೆಯಿಲ್ಲದೆ ಯಾವುದನ್ನೂ ಮಾಡಲಾಗದು ಎಂಬ ವಿಚಾರವು ಅಸಹ್ಯವಾಯಿತು. ನಾವು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದೆವು.

ಧತ್ತೂರಿ ಬೀಜಗಳನ್ನು ತಿನ್ನುವುದರಿಂದ ಸಾಯುತ್ತಾರೆಂದು ನಾವು ಕೇಳಿದ್ದೆವು. ಅಡವಿಯಲ್ಲಿ ತಿರುಗಾಡಿ ಬೀಜಗಳನ್ನು ತಂದೆವು. ಸಾಯಲು ಸಂಜೆಯ ಸಮಯವನ್ನು ಗೊತ್ತುಮಾಡಿದೆವು. ಕೇದಾರನಾಥ ದೇವಸ್ಥಾನದ ದೀಪ ಮಾಲೆಯಲ್ಲಿ ತುಪ್ಪವನ್ನು ಹಾಕಿ, ದೇವರ ದರ್ಶನ ಪಡೆದು ಏಕಾಂತ ಸ್ಥಳಕ್ಕೆ ಹೋದೆವು. ಆದರೆ ವಿಷವನ್ನು ತಿನ್ನುವ ಧೈರ್ಯವಾಗಲಿಲ್ಲ. ಮರಣಕ್ಕೆ ಅಂಜಿದೆವು. ರಾಮ ಮಂದಿರದಲ್ಲಿ ದೇವರ ದರ್ಶನ ಮಾಡಿಕೊಂಡು, ಮೌನವಾಗಿ ಕುಳಿತುಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದೆವು.

ಆತ್ಮಹತ್ಯೆಯ ವಿಚಾರ ಮಾಡುವುದು ಸುಲಭ, ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಸುಲಭವಲ್ಲ. ಆದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಯಾರಾದರೂ ಹೆದರಿಸಿದರೆ ಅದರ ಪರಿಣಾಮವು ನನ್ನ ಮೇಲೆ ಏನೂ ಆಗುವುದಿಲ್ಲವೆಂದರೂ ಅಡ್ಡಿಯಿಲ್ಲ.

ಇದಾದ ಮೇಲೆ ಬೀಡಿ ಸೇದುವ ಚಟವನ್ನು ಬಿಟ್ಟುಬಿಟ್ಟೆವು. ನಾನು ಯಾವಾಗಲೂ ಈ ಚಟವು ಅನಾಗರಿಕವಾದುದು, ಹಾನಿಕರವಾದುದು ಹಾಗೂ ಹೊಲಸಾದುದು ಎಂದು ತಿಳಿಯುತ್ತ ಬಂದಿದ್ದೇನೆ. ಉಗಿ ಬಂಡಿಯ ಡಬ್ಬಿಗಳಲ್ಲಿ ಬೀಡಿ ಹೊಗೆಯು ಹೊರಟಾಗಲೆಲ್ಲ ನನಗೆ ಅಲ್ಲಿ ಕುಳಿತುಕೊಳ್ಳಲಾಗುವುದಿಲ್ಲ. ನನ್ನ ಉಸಿರು ಕಟ್ಟುತ್ತದೆ.

ಬೇರೊಂದು ಕಳವನ್ನೂ ನಾನು ಮಾಡಿದ್ದೇನೆ. ಇದು ಮೊದಲಿನದಕ್ಕಿಂತಲೂ ಹೆಚ್ಚು ಗಂಭೀರವಾದುದೆಂದು ನನ್ನ ಎಣಿಕೆ. ನನ್ನ ಅಣ್ಣನ ಬಂಗಾರದ ಕಡಗದ ತುಂಡನ್ನು ಕದ್ದದ್ದೇ ಈ ಕಳ್ಳತನವು. ಅವನು ಸುಮಾರು 25 ರೂಪಾಯಿಗಳ ಸಾಲ ಮಾಡಿದ್ದನು. ಕಡಗವನ್ನು ಮುರಿದು ಅದನ್ನು ತೀರಿಸಿದೆವು. ಆದರೆ ನನಗೆ ಈ ಘಟನೆಯು ಅಸಹ್ಯವಾಯಿತು. ತಂದೆಯವರ ಎದುರು ತಪ್ಪನ್ನು ಒಪ್ಪಿಕೊಳ್ಳಬೇಕೆಂದು ಮನಸ್ಸು ಮಾಡಿದೆನು.

ನಾನು ಒಂದು ಪತ್ರವನ್ನು ಬರೆದು ತಪ್ಪನ್ನು ಒಪ್ಪಿಕೊಂಡು ಕ್ಷಮೆಯನ್ನು ಕೋರಬೇಕೆಂದು ನಿಶ್ಚಯಿಸಿದೆನು. ಓಲೆಯನ್ನು ಬರೆದು ಕಂಪಿಸುವ ಕೈಗಳಿಂದ ಅದನ್ನು ತಂದೆಯವರ ಕೈಯಲ್ಲಿ ಕೊಟ್ಟು ಅವರ ಮಂಚದ ಮುಂದೆ ಕುಳಿತುಕೊಂಡೆನು. ಅವರು ಪತ್ರವನ್ನು ಓದಿದರು. ಅವರ ಕಣ್ಣುಗಳಿಂದ ಮುತ್ತಿನಂತಹ ಹನಿಗಳು ಉದುರಿದವು. ಪತ್ರವು ಒದ್ದೆಯಾಯಿತು. ಕ್ಷಣಹೊತ್ತು ಅವರು ಕಣ್ಣುಗಳನ್ನು ಮುಚ್ಚಿಕೊಂಡರು. ಪತ್ರವನ್ನು ಹರಿದುಹಾಕಿದರು. ಪತ್ರವನ್ನು ಓದಲಿಕ್ಕೆಂದು ಎದ್ದು ಕುಳಿತವರು ಮತ್ತೆ ಒರಗಿದರು.

ನಾನೂ ಅತ್ತೆನು. ತಂದೆಯವರಿಗೆ ಎಷ್ಟು ದುಃಖವಾಗಿರಬೇಕು ಎಂಬುದರ ಕಲ್ಪನೆಯು ನನಗೆ ಬಂದಿತು. ಈ ಮುತ್ತಿನ ಬಿಂದುಗಳ ಪ್ರೇಮಬಾಣವು ನನ್ನನ್ನು ಚಿಂತನೆಗೆ ಹಚ್ಚಿತ್ತು. ನಾನು ಪರಿಶುದ್ಧನಾದೆನು.

'ರಾಮಬಾಣ ವಾಗ್ಯಾಂ ರೇ ಹೋೀಯ ತೇ ಜಾಣ' (ರಾಮಬಾಣದ ಅನುಭವವು ಯಾರಿಗಿದೆಯೋ ಅವರೇ ಆ ಶಕ್ತಿಯನ್ನು ಬಲ್ಲರು.)

ನನ್ನ ಮಟ್ಟಿಗೆ ಇದು ಅಹಿಂಸೆಯ ಮಾದರಿ ಪಾಠವಾಯಿತು. ಇಂತಹ ಅಹಿಂಸೆಯು ವ್ಯಾಪಕ ಸ್ವರೂಪವನ್ನು ತಾಳಿದಾಗ ಅದು ಯಾರನ್ನು ಸ್ಪರ್ಶಿಸುತ್ತದೆಯೋ ಅವರು ಪರಿವರ್ತನೆಗೊಳ್ಳುತ್ತಾರೆ. ಇಂತಹ ವ್ಯಾಪಕ ಅಹಿಂಸೆಯ ಬಲವನ್ನು ಅಳೆಯುವುದು ಸಾಧ್ಯವಿಲ್ಲ. ಮನುಷ್ಯನು ಅಧಿಕಾರಿ ಪುರುಷನ ಮುಂದೆ ಸಂತೋಷದಿಂದ ತಪ್ಪನ್ನು ಒಪ್ಪಿಕೊಳ್ಳುವುದು ಮತ್ತು ಅದನ್ನು ಪುನಃ ಎಂದೂ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವುದು ಅಂದರೆ ಶುದ್ಧವಾದ ಪ್ರಾಯಶ್ಚಿತ್ತವನ್ನು ಮಾಡಿದಂತಾಗುವುದು.

ತಂದೆಯವರ ನಿಧನ ಹಾಗೂ ನನ್ನ ನಾಚಿಕೆ

ತಂದೆಯವರು ತಮ್ಮ ಅನಾರೋಗ್ಯದ ಮೂಲಕ ಹಾಸುಗೆಯ ಮೇಲೆ ಒರಗಿಯೇ ಇರುತ್ತಿದ್ದರು. ನಾನು ಪರಿಚಾರಕನ ಕೆಲಸವನ್ನು ಮಾಡುತ್ತಿದ್ದೆನು. ಗಾಯವನ್ನು ತೊಳೆಯುವುದು, ಅದರಲ್ಲಿ ಔಷಧವನ್ನು ಹಾಕುವುದು, ಮುಲಾಮು ಹಚ್ಚುವುದು, ಔಷಧವನ್ನು ಕುಡಿಸುವುದು, ಪ್ರಸಂಗ ಬಿದ್ದಲ್ಲಿ ಮನೆಯಲ್ಲಿಯೇ ಮದ್ದನ್ನು ಸಿದ್ಧಗೊಳಿಸುವುದು. ಇವು ನನ್ನ ವಿಶೇಷ ಕೆಲಸಗಳಾಗಿದ್ದವು. ದಿನಾಲು ರಾತ್ರಿ ಅವರ ಕಾಲುಗಳನ್ನು ಒತ್ತುವುದು, ಅವರು ಹೋಗೆಂದಾಗ ಅಥವಾ ಅವರಿಗೆ ನಿದ್ದೆ ಹತ್ತಿದ ಮೇಲೆ ಹೋಗಿ ಮಲಗುವುದು. ಇದು ನನ್ನ ನಿಯಮವಾಗಿತ್ತು. ಈ ಸೇವೆಯು ನನಗೆ ಬಹಳ ಪ್ರಿಯವಾಗಿತ್ತು.

ರಾತ್ರಿಯ ಹೊತ್ತಿಗೆ ನಾನು ತಂದೆಯವರ ಕಾಲುಗಳನ್ನು ಒತ್ತುತ್ತಿದ್ದರೂ ನನ್ನ ಮನಸ್ಸು ಶಯನಗೃಹದತ್ತ ಹರಿದಾಡುತ್ತಿತ್ತು. ಅವರ ಸೇವೆಯಿಂದ ಬಿಡುವು ಸಿಕ್ಕಿದ ಕೂಡಲೇ ನನಗೆ ಆನಂದವಾಗುತ್ತಿತ್ತು. ತಂದೆಯವರಿಗೆ ನಮಸ್ಕರಿಸಿ ನೆಟ್ಟಗೆ ಶಯ್ಯಾಗಾರಕ್ಕೆ ನಡೆದುಬಿಡುತ್ತಿದ್ದೆನು. ಇದೇ ಕೊನೆಯ ರಾತ್ರಿಯಾಗುವುದೆಂದು ಯಾರೂ ತಿಳಿದಿರಲಿಲ್ಲ. ರಾತ್ರಿ 11 ಗಂಟೆಯಾಗಿರಬೇಕು. ನಾನು ಕಾಲುಗಳನ್ನು ಒತ್ತುತ್ತಿದ್ದೆನು. ಚಿಕ್ಕಪ್ಪನವರು ಹೇಳಿದರು: "ನೀನು ಹೋಗು; ಈಗ ನಾನು ಕುಳಿತುಕೊಳ್ಳುವೆನು." ನಾನು ಸಂತೋಷಪಟ್ಟು ನೆಟ್ಟಗೆ ಶಯನಗೃಹಕ್ಕೆ ನಡೆದುಬಿಟ್ಟೆನು. ಐದೇ ನಿಮಿಷಗಳು

ಸಂದಿರಬೇಕು; ಅಷ್ಟರಲ್ಲಿ ಸೇವಕನು ಕದವನ್ನು ತಟ್ಟಿದನು. ನಾನು ಗಾಬರಿಯಾದೆನು. "ಏಳಿರಿ, ತಂದೆಯವರ ಸ್ಥಿತಿಯು ಬಹಳ ಕೆಟ್ಟಿದೆ" ಎಂದು ಸೇವಕನು ಹೇಳಿದನು.

"ಏನು ಸುದ್ದಿ? ಹೇಳು" ಎಂದೆನು.

"ತಂದೆಯವರು ತೀರಿಕೊಂಡರು" ಎಂದು ಅವನೆಂದನು.

ತಂದೆಯವರು ಸನ್ನೆ ಮಾಡಿ ಲೇಖನ ಸಾಮಗ್ರಿಯನ್ನು ತರಿಸಿ "ಸಿದ್ಧತೆ ಮಾಡಿರಿ" ಎಂದು ಬರೆದರು. ಇಷ್ಟು ಬರೆದು ತಮ್ಮ ಕೈಗೆ ಕಟ್ಟಿದ ತಾಯತವನ್ನು ಹರಿದೊಗೆದರು; ಬಂಗಾರದ ಸರವನ್ನು ಕಿತ್ತೆಸೆದರು. ಅಷ್ಟರಲ್ಲಿ ಅವರ ಪ್ರಾಣ ಪಕ್ಷಿಯು ಹಾರಿ ಹೋಗಿತ್ತು.

ನಾನು ಬಹಳ ಲಜ್ಜಿತನೂ ದುಃಖಿತನೂ ಆದೆನು. ನಾನು ವಿಷಯಾಂಧನಾಗಿರದಿದ್ದರೆ, ಅಂತ್ಯ ಕಾಲದಲ್ಲಿ ಈ ವಿಯೋಗವು ನನ್ನ ಪಾಲಿಗೆ ಬರುತ್ತಿದ್ದಿಲ್ಲವಲ್ಲ. ನಾನು ಕೊನೆಯ ಗಳಿಗೆಯವರೆಗೂ ತಂದೆಯ ಪಾದಗಳನ್ನು ಒತ್ತುತ್ತಿರುತ್ತಿದ್ದೆನಲ್ಲ ಎಂದು ಮರುಗಿದೆನು.

ಧರ್ಮದ ಬೆಳಕು

ನಾನು ವೈಷ್ಣವ ಸಂಪ್ರದಾಯದಲ್ಲಿ ಹುಟ್ಟಿದವನಾದುದರಿಂದ ನನಗೆ ಹವೇಲಿಗೆ (ವೈಷ್ಣವ ಮಂದಿರಕ್ಕೆ) ಹೋಗುವ ಪ್ರಸಂಗವು ಮೇಲಿಂದ ಮೇಲೆ ಬರುತ್ತಿತ್ತು. ಆದರೆ ಅದರ ವಿಷಯಕ್ಕೆ ನನ್ನಲ್ಲಿ ಶ್ರದ್ಧೆ ಹುಟ್ಟಲಿಲ್ಲ. ಮಂದಿರದ ವೈಭವವು ನನ್ನ ಮನಸ್ಸಿಗೆ ಸರಿಬರಲಿಲ್ಲ. ಅಲ್ಲಿ ನಡೆಯುವ ಅನಾಚಾರಗಳನ್ನು ಕೇಳಿ ನನಗೆ ದುಃಖವಾಯಿತು. ಮಂದಿರದಿಂದ ನನಗೆ ಯಾವ ಪ್ರಯೋಜನವೂ ಆಗಲಿಲ್ಲ.

ಮಂದಿರದಲ್ಲಿ ದೊರೆಯದಿದ್ದ ವಸ್ತು ನನಗೆ ನನ್ನ ದಾಯಿಯಿಂದ ಸಿಕ್ಕಿತು. ನನಗಿನ್ನೂ ಅವಳ ಪ್ರೇಮದ ನೆನಪಿದೆ. ನಾನು ಭೂತ ಪಿಶಾಚಿಗಳಿಗೆ ಅಂಜುತ್ತಿದ್ದೆನು. ಇದಕ್ಕೆ ಔಷಧವು ರಾಮನಾಮವೆಂದು ನಮ್ಮ ದಾಯಿಯಾದ ರಂಭೆಯು ನನಗೆ ಹೇಳಿಕೊಟ್ಟಳು. ಇಂದು ರಾಮನಾಮವು ನನಗೊಂದು ಅಮೋಘ ಶಕ್ತಿಯಾಗಿದೆ. ಅದಕ್ಕೆ ರಂಭಾಬಾಯಿಯು ಬಿತ್ತಿದ ಬೀಜವೇ ಕಾರಣ ಎಂದು ನನ್ನ ನಂಬುಗೆ. ನನ್ನ ಚಿಕ್ಕಪ್ಪನ ಮಗನೊಬ್ಬನು ನಾವಿಬ್ಬರೂ ಅಣ್ಣ ತಮ್ಮಂದಿರಿಗೆ ರಾಮರಕ್ಷಾ ಸ್ತೋತ್ರವನ್ನು ಕಲಿಸುವ ಏರ್ಪಾಡು ಮಾಡಿದನು. ನಾವು ಪ್ರಾತಃಕಾಲದ ಸ್ನಾನವಾದ ಮೇಲೆ ದಿನಾಲು ಅದನ್ನು ಪಠಿಸುವ ನಿಯಮವನ್ನಿಟ್ಟುಕೊಂಡೆವು.

ನನ್ನ ಮನಸ್ಸಿನ ಮೇಲೆ ಆಳವಾದ ಪರಿಣಾಮವನ್ನು ಮಾಡಿದ ಸಂಗತಿಯೆಂದರೆ ರಾಮಾಯಣದ ಪಾರಾಯಣ.

ಪೋರಬಂದರಿನಲ್ಲಿದ್ದಾಗ ತಂದೆಯವರು ದಿನಾಲು ರಾತ್ರಿ ರಾಮದೇವರ ಗುಡಿಯಲ್ಲಿ ರಾಮಾಯಣವನ್ನು ಕೇಳುತ್ತಿದ್ದರು. ಕಥೆ ಹೇಳುವವರು ಬಿಲೇಶ್ವರದ ಲಾಧಾ ಮಹಾರಾಜರು. ಅವರಿಗೆ ಹಿರೇಬೇನೆ ಹತ್ತಿತ್ತೆಂದು ಜನರು ಅನ್ನುತ್ತಿದ್ದರು. ಅದಕ್ಕೆ ಅವರು ಯಾವ ಔಷಧೋಪಚಾರವನ್ನೂ ಮಾಡಲಿಲ್ಲ. ಅದರ ಬದಲು ಮಹಾದೇವರಿಗೆ ಏರಿಸಿದ ಬಿಲ್ವಪತ್ರಗಳನ್ನು ಕುಷ್ಟ ಹತ್ತಿದ ಸ್ಥಳದಲ್ಲಿ ಕಟ್ಟುತ್ತಿದ್ದರು. ಹಾಗೂ ರಾಮಾಯಣದ ಜಪವನ್ನು ಮಾಡುತ್ತಿದ್ದರು. ಇದರಿಂದ ಅವರ ಕುಷ್ಟರೋಗವು ಆಮೂಲಾಗ್ರವಾಗಿ ವಾಸಿಯಾಯಿತು. ಲಾಧಾ ಮಹಾರಾಜರ ಕಂಠವು ಮೃದುವಾಗಿತ್ತು. ತಾವು ಸ್ವತಃ ಭಕ್ತಿರಸದಲ್ಲಿ ಲೀನರಾಗುತ್ತಿದ್ದರಲ್ಲದೆ ಶ್ರೋತೃಗಳೂ ತಲ್ಲೀನರಾಗುವಂತೆ ಮಾಡುತ್ತಿದ್ದರು. ರಾಮಾಯಣದ ಮೇಲಿನ ನನ್ನ ಗಾಢವಾದ ಭಕ್ತಿಗೆ ಈ ನನ್ನ ರಾಮಾಯಣದ ಶ್ರವಣವೇ ತಳಹದಿಯಾಗಿದೆ. ಇಂದು ನಾನು ತುಳಸೀ ರಾಮಾಯಣವನ್ನು ಭಕ್ತಿ ಮಾರ್ಗದ ಒಂದು ಸರ್ವೋತ್ಕೃಷ್ಟ ಗ್ರಂಥವೆಂದು ತಿಳಿಯುತ್ತೇನೆ.

ರಾಜಕೋಟದಲ್ಲಿ ಪ್ರತಿ ಏಕಾದಶಿಗೂ ಭಾಗವತ ಪುರಾಣವು ನಡೆಯುತ್ತಿತ್ತು. ಆದರೆ ಪುರಾಣಿಕರು ಅದನ್ನು ರಸಭರಿತವಾಗಿ ಹೇಳುತ್ತಿರಲಿಲ್ಲ. ಭಾಗವತವು ಭಕ್ತಿರಸವನ್ನು ಹುಟ್ಟಿಸಬಲ್ಲ ಗ್ರಂಥವೆಂದು ನಾನು ಇಂದು ಹೇಳಬಲ್ಲೆನು.

ರಾಜಕೋಟದಲ್ಲಿ ನನಗೆ ಸಹಜವಾಗಿ ಎಲ್ಲ ಸಂಪ್ರದಾಯಗಳನ್ನೂ ಸಮಭಾವದಿಂದ ನೋಡುವ ಶಿಕ್ಷಣವು ದೊರೆಯಿತು. ಏಕೆಂದರೆ ತಂದೆ ತಾಯಿಗಳು ವಿಷ್ಣುವಿನ ದೇವಸ್ಥಾನಕ್ಕೂ, ಶಿವಾಲಯಕ್ಕೂ ಮತ್ತು ರಾಮದೇವರ ಗುಡಿಗೂ ಹೋಗುತ್ತಿದ್ದರು; ಅಲ್ಲದೆ ಜೊತೆಗೆ ನನ್ನನ್ನೂ ಕರೆದೊಯ್ಯುತ್ತಿದ್ದರು.

ಇದಲ್ಲದೆ ತಂದೆಯವರ ಬಳಿಗೆ ಜೈನ ಸಾಧುಗಳು ಒಬ್ಬರಿಲ್ಲೊಬ್ಬರು ಬರುತ್ತಿದ್ದರು. ತಂದೆಯವರು ಅವರಿಗೆ ಭಿಕ್ಷೆಯನ್ನೂ ಕೊಡುತ್ತಿದ್ದರು. ಇದೂ ಅಲ್ಲದೆ ತಂದೆಯವರಿಗೆ ಮುಸಲ್ಮಾನ ಹಾಗೂ ಪಾರಸಿ ಮಿತ್ರರೂ ಇದ್ದರು. ಅವರು ತಮ್ಮ ಧರ್ಮದ ವಿಷಯವಾಗಿ ಮಾತಾಡುತ್ತಿದ್ದರು. ಪಿತಾಜಿಯವರು ಅದನ್ನು ಕೇಳುತ್ತಿದ್ದರು. ಹೀಗಾಗಿ ನನ್ನ ಮನಸ್ಸಿನಲ್ಲಿ ಎಲ್ಲ ಧರ್ಮಗಳ ಬಗ್ಗೆ ಸಮಭಾವವು ಉತ್ಪನ್ನವಾಯಿತು.

ಇದಕ್ಕೆ ಕ್ರಿಶ್ಚಿಯನ್ ಧರ್ಮವು ಮಾತ್ರ ಅಪವಾದವಾಗಿತ್ತು. ಹೈಸ್ಕೂಲ್ ಹತ್ತಿರದ ಚೌಕಿನಲ್ಲಿ ನಿಂತು ವ್ಯಾಖ್ಯಾನಗಳನ್ನು ಕೊಡುತ್ತಿದ್ದ ಪಾದ್ರಿಗಳು ಹಿಂದೂ ದೇವತೆಗಳನ್ನು ನಿಂದಿಸುತ್ತಿದ್ದರು. ಇದು ನನಗೆ ಸಹನವಾಗುತ್ತಿರಲಿಲ್ಲ. ಇದೇ ಸಮಯಕ್ಕೆ ಒಬ್ಬ ಹಿಂದುವು ಕ್ರಿಶ್ಚಿಯನ್ ಆದ ಸುದ್ದಿಯನ್ನು ನಾನು ಕೇಳಿದೆನು. ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವ ಸಮಯದಲ್ಲಿ ಅವನಿಗೆ ಗೋಮಾಂಸವನ್ನು ತಿನ್ನಿಸಿದರೆಂದೂ ಮದ್ಯವನ್ನು ಕುಡಿಸಿದರೆಂದೂ ಮತ್ತು ಅವನು ಈಗ ಕೋಟು, ಪ್ಯಾಂಟ್, ಹ್ಯಾಟನ್ನು ಧರಿಸಿ, ಊರಲ್ಲಿ ಅಡ್ಡಾಡುತ್ತಿದ್ದಾನೆಂದೂ ಜನರು ಮಾತನಾಡುತ್ತಿದ್ದರು. ಇವೆಲ್ಲವೂ ನನ್ನ ಮನಸ್ಸಿಗೆ ಚುಚ್ಚತೊಡಗಿತು.

ಆದರೆ ಒಂದು ವಿಷಯವು ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿತು. ಅದೆಂದರೆ, ನೀತಿಯು ಜಗತ್ತಿನ ಆಧಾರ, ಈ ನೀತಿಯು ಸತ್ಯದಲ್ಲಿಯೇ ಅಡಕವಾಗಿದೆ. ಸತ್ಯ ಶೋಧನೆಯನ್ನು ಮಾಡಲೇಬೇಕಾಗುವುದು. ದಿನ ದಿನವೂ ಸತ್ಯದ ಮಹಿಮೆಯು ನನ್ನ ದೃಷ್ಟಿಯಲ್ಲಿ ಹೆಚ್ಚಾಗುತ್ತಾ ಬಂದಿತು. ಸತ್ಯದ ಲಕ್ಷಣವು ವಿಸ್ತಾರಗೊಳ್ಳುತ್ತ ಹೋಯಿತು. ಅದು ಇನ್ನೂ ವಿಸ್ತಾರವಾಗುತ್ತಲೇ ಇದೆ.

ಗುಜರಾಥಿಯಲ್ಲಿಯ ಒಂದು ಶ್ಲೋಕವು ನನ್ನ ಹೃದಯದಲ್ಲಿ ನಾಟಿತು. "ಅಪಕಾರಕ್ಕೆ ಅಪಕಾರವನ್ನು ಮಾಡದೆ ಉಪಕಾರವನ್ನು ಮಾಡಬೇಕು" ಎಂಬ ಮಾತು ನನ್ನ ಜೀವನಸೂತ್ರವಾಗಿ ಪರಿಣಮಿಸಿತು. ಅಪಕಾರಿಗೆ ಒಳಿತನ್ನು ಬಯಸುವುದು ಮತ್ತು ಒಳಿತನ್ನು ಮಾಡುವುದು ನನ್ನ ಪ್ರೀತಿಯ ವಿಷಯವಾಯಿತು. ಆ ವಿಷಯದಲ್ಲಿ ಅನೇಕ ಪ್ರಯೋಗಗಳನ್ನೂ ಮಾಡಿದೆನು. ನನ್ನ ಮನಸ್ಸಿನ ಮೇಲೆ ಪ್ರಭಾವವನ್ನು ಮಾಡಿದ ಆ ಚಮತ್ಕಾರಿಯಾದ ಕವನವು ಹೀಗಿದೆ.

ಬರಿ ನೀರನಿತ್ತವಗೆ ಮೃಷ್ಟಾನ್ನವನಿತ್ತು
ಅರೆನಮಿಸಿದಂಥವಗೆ ದೇಹವನೆ ಕೊಟ್ಟು ।
ಅರೆ ಕಾಸನಿತ್ತವಗೆ ವರಹಗಳ ನೀಡಿ
ಹರಣವಂ ಕಾಯ್ದವಗೆ ಹರಣವನೆ ಸಲಿಸಿ ॥
ಕಿರಿನೆರವನಿತ್ತರ್ಗೆ ಪಿರಿದಾಗಿ ಮಾರ್ಗುಡುವ
ಪರಿಯೆ ಅರಿದರ ತೆರನದೆಂದು ಅರಿಯಯ್ಯ ।
ಪಿರಿಬಗೆಯ ಸಂತಜನ ನರರೊಳಂತರವಿಡದೆ
ಹರುಷದಿಂ ಕೇಡುಗಳಿಗೊಳಿತನೆಸಗುವವರು ॥

(ನಮಗೆ ನೀರನ್ನು ಕೊಟ್ಟವನಿಗೆ ಅನ್ನವನ್ನು ಉಣಿಸಬೇಕು. ನಮ್ಮ ಮುಂದೆ ತಲೆಬಾಗುವವನಿಗೆ ನಾವು ಸಾಷ್ಟಾಂಗ ಪ್ರಣಾಮವನ್ನು ಮಾಡಬೇಕು. ತಾಮ್ರದ ದುಡ್ಡು ಕೊಡುವವನಿಗೆ ನಾವು ಬಂಗಾರದ ನಾಣ್ಯವನ್ನು ಕೊಡಬೇಕು. ನಮ್ಮ ಪ್ರಾಣವುಳಿಸಿದವನ ದುಃಖವನ್ನು ನೀಗಿಸಲು ನಾವು ಸಾಯಬೇಕು. ನಮಗೆ ಒಳಿತನ್ನು ಮಾಡಿದವನಿಗೆ ಕಾಯಾ ವಾಚಾ ಮನಸಾ ಹತ್ತುಪಟ್ಟು ಒಳಿತನ್ನು ಮಾಡಬೇಕು. ಕೆಡಕು ಮಾಡಿದವನಿಗೆ ಹಿತವನ್ನು ಮಾಡಿದವನು ವಿಶ್ವ ವಿಜಯಿಯಾಗುತ್ತಾನೆ.)

ವಿಲಾಯತಿಗೆ ಹೋಗುವ ಸಿದ್ಧತೆ

ನಾನು 1887ನೆಯ ಇಸವಿಯಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದೆನು. ಪರೀಕ್ಷೆಯು ಅಹಮ್ಮದಾಬಾದದಲ್ಲಿ ನಡೆಯಿತು. ನಾನು ರಾಜಕೋಟದಿಂದ ಅಹಮ್ಮದಾಬಾದ್‌ಗೆ ಒಬ್ಬೊಂಟಿಗನಾಗಿ ಪ್ರವಾಸ ಮಾಡಿದುದು ಇದೇ ಮೊದಲನೆಯ ಸಲ.

ಭಾವನಗರದಲ್ಲಿಯ ಶಾಮಲದಾಸ ಕಾಲೇಜಿನಲ್ಲಿ ಮೊದಲನೆಯ 'ಟರ್ಮ್' ನ್ನು ಮುಗಿಸಿ ನಾನು ಮನೆಗೆ ಬಂದೆನು.

ಮಾವಜೀ ದವೆ ಅವರು ಈ ಬಿಡುವಿನಲ್ಲಿ ಮನೆಗೆ ಬಂದಿದ್ದರು. ನಾನು ಶಾಮಲದಾಸ ಕಾಲೇಜಿನಲ್ಲಿ ಓದುತ್ತಿರುವುದನ್ನು ಅವರು ನಮ್ಮ ತಾಯಿಗೆ ಹೇಳಿದರು "ಈಗ ಕಾಲ ಬದಲಾಗಿದೆ. ಕಬಾ ಗಾಂಧಿಯವರ ಪೀಠವನ್ನೇರಲು ನಿಮ್ಮಲ್ಲಿ ಯಾರಾದರೂ ಇಚ್ಛಿಸುತ್ತಿದ್ದರೆ, ಶಿಕ್ಷಣ ಪಡೆದ ಹೊರತು ಅದು ಸಾಧ್ಯವಿಲ್ಲ. ವಿಲಾಯತಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ನೀವು ಮೋಹನನನ್ನು ಕಳಿಸಬೇಕು. ಅಲ್ಲಿಯ ಶಿಕ್ಷಣವು ಸುಲಭವಾಗಿದೆಯೆಂದು ಕೇವಲರಾಯನು (ಮಾವಜಿ ದವೇಯ ಮಗ) ಅನ್ನುತ್ತಾನೆ."

ಅಲ್ಲದೆ, ಅವರು ಮತ್ತೆ ನನ್ನ ಕಡೆಗೆ ಹೊರಳಿ "ನೀನು ಇಲ್ಲಿ ಕಲಿಯುವುದಕ್ಕಿಂತ ವಿಲಾಯಿತಿಗೆ ಏಕೆ ಹೋಗಬಾರದು?" ಎಂದು ನನ್ನನ್ನು ಕೇಳಿದರು.

ಇದು ನನಗೆ ಮನ ಒಪ್ಪುವ ಒಳ್ಳೆಯ ಸಲಹೆಯಾಗಿತ್ತು. ನಾನೆಂದೆ "ವಿಲಾಯಿತಿಗೆ ಕಳುಹಿಸಿದರೆ ಬಹಳ ಒಳಿತು; ನನಗೆ ವೈದ್ಯಕೀಯ ಅಭ್ಯಾಸವನ್ನು ಮಾಡಲು ಕಳುಹಿಸಿಕೊಡಬಾರದೇಕೆ?"

"ವೈದ್ಯಕೀಯ ಪರೀಕ್ಷೆ ಕೊಟ್ಟು ದಿವಾಣನಾಗುವುದು ಸಾಧ್ಯವಿಲ್ಲ. ಇದಕ್ಕಾಗಿ ಬ್ಯಾರಿಸ್ಟರನಾಗುವುದರಲ್ಲಿಯೇ ಜಾಣತನವಿದೆ."

ನಾನು ಗಾಳಿ ಗೋಪುರವನ್ನು ಕಟ್ಟತೊಡಗಿದೆನು. ಆದರೆ ಹಣದ ವ್ಯವಸ್ಥೆಯೇನು? ಅಣ್ಣನವರು ಒಂದು ವಿಚಾರವನ್ನು ಸೂಚಿಸಿದರು. "ಪೋರಬಂದರ ರಾಜ್ಯದ ಮೇಲೆ ನಮ್ಮ ಹಕ್ಕು ಇದೆ. ಶಾಸಕರಾದ (ಎಡ್ಮಿನಿಸ್ಟ್ರೇಟರ) ಲೇಲಿ ಸಾಹೇಬರು ರಾಜ್ಯದ ಪರವಾಗಿ ನಿನಗೆ ಕೆಲವು ಮಟ್ಟಿಗೆ ಸಹಾಯವನ್ನು ಮಾಡಬಹುದು."

ನಾನು ಪೋರಬಂದರಕ್ಕೆ ಹೋಗಲು ಸಿದ್ಧನಾದೆನು. ಆ ಕಾಲದಲ್ಲಿ ರೈಲು ದಾರಿ ಇರಲಿಲ್ಲ. ಎತ್ತಿನ ಬಂಡಿಯಲ್ಲಿ ಐದು ದಿನಗಳ ಹಾದಿ ಇತ್ತು. ದೋರಾಜಿಯ ತನಕ ಹೋಗಲು ನಾನು ಎತ್ತಿನ ಬಂಡಿಯನ್ನು ಬಾಡಿಗೆ ಹಿಡಿದೆನು. ಒಂದು ದಿನ ಮುಂಚಿತವಾಗಿಯೇ ಮುಟ್ಟಲೆಂದು ಒಂಟೆಯನ್ನು ಗೊತ್ತುಮಾಡಿದೆನು.

ಪೋರಬಂದರವನ್ನು ಮುಟ್ಟಿದ್ದಾಯಿತು. ಲೇಲಿ ಸಾಹೇಬರನ್ನು ಭೆಟ್ಟಿಯಾದೆನು. ಅವರು "ಮೊದಲ ಬಿ.ಎ. ಪಾಸಾಗು; ಆಮೇಲೆ ನನ್ನನ್ನು ಭೆಟ್ಟಿಯಾಗು. ಈಗಲೇ ಯಾವ ಸಹಾಯವನ್ನೂ ಕೊಡುವುದು ಸಾಧ್ಯವಿಲ್ಲ" ಎಂದು ಅಂದರು.

ಪೋರಬಂದರದಿಂದ ರಾಜಕೋಟಕ್ಕೆ ಬಂದು ನಡೆದುದೆಲ್ಲವನ್ನೂ ತಿಳಿಸಿದೆನು. ಹೆಂಡತಿಯ ಆಭರಣಗಳನ್ನು ಮಾರಿಬಿಡಬೇಕೆಂದೂ ಸೂಚಿಸಿದೆನು. ಆದರೆ ಅಣ್ಣನವರು ಒಂದಿಲ್ಲೊಂದು ರೀತಿಯಿಂದ ಹಣದ ವ್ಯವಸ್ಥೆಯನ್ನು ಮಾಡುವ ಹೊಣೆ ಹೊತ್ತರು.

ಆದರೆ ತಾಯಿಯವರು ಸಮ್ಮತಿ ಕೊಡುವುದೆಂತು? ನವ ಯುವಕರು ವಿಲಾಯಿತಿಗೆ ಹೋಗಿ ಕೆಡುತ್ತಾರೆಂದು ಒಬ್ಬನು ಹೇಳಿದನು. ಅವರು ಮಾಂಸವನ್ನು ತಿನ್ನಲು ಕಲಿಯುತ್ತಾರೆಂದು ಇನ್ನೊಬ್ಬನು ನುಡಿದರು. ಅಲ್ಲಿ ಮದ್ಯವನ್ನು ಕುಡಿಯದ ಹೊರತು ನಡೆಯುವ ಹಾಗಿಲ್ಲವೆಂದು ಮಗುದೊಬ್ಬರು ನುಡಿದರು. "ಈ ಮೂರು ಸಂಗತಿಗಳಿಂದ ದೂರವಿರುವೆ" ಎಂದು ನಾನು ಆಶ್ವಾಸನ ಕೊಟ್ಟೆನು.

ತಾಯಿಯವರೆಂದರು "ನನಗೆ ನಿನ್ನಲ್ಲಿ ವಿಶ್ವಾಸವಿದೆ. ಆದರೆ ನಾನು ಏನು ಮಾಡಬೇಕು, ಏನು ಮಾಡಬಾರದು ಎಂಬುದು ನನಗೆ ಹೊಳೆಯದು. ಒಳ್ಳೇದು; ಬೇಚರಜಿ ಮಹಾರಾಜರನ್ನು ಕೇಳೋಣ."

ಬೇಚರಜಿ ಮಹಾರಾಜರು ವೈಶ್ಯರಿದ್ದವರು ಜೈನ ಸಾಧುಗಳಾಗಿ ಪರಿವರ್ತನೆ ಹೊಂದಿದ್ದರು. ಅವರೆಂದರು "ನಾನು ಇವನ ಕಡೆಯಿಂದ ಈ ಮೂರು ಸಂಗತಿಗಳನ್ನು ಕುರಿತು ಪ್ರತಿಜ್ಞೆ ಮಾಡಿಸುತ್ತೇನೆ. ಅನಂತರ ಹೋಗಗೊಡಲು ಏನೂ ಅಡ್ಡಿಯಿಲ್ಲ" ನಾನು ಮಾಂಸ, ಮದ್ಯ ಮತ್ತು ಸ್ತ್ರೀಯರಿಂದ ದೂರವಿರುವ ಪ್ರತಿಜ್ಞೆಯನ್ನು ಮಾಡಿದೆನು. ಆಗ ಮಾತಾಜಿಯವರು ಅಪ್ಪಣೆಯನ್ನು ದಯಪಾಲಿಸಿದರು.

ಹಿರಿಯರ ಆಶೀರ್ವಾದವನ್ನು ಪಡೆದುಕೊಂಡು ನಾನು ಮುಂಬಯಿಗೆ ಬಂದೆನು. ನಾನು ಮುಂಬಯಿಗೆ ಹೋದದ್ದು ಇದೇ ಮೊದಲನೆಯ ಸಲವಾದುದರಿಂದ ಅಣ್ಣನವರೂ ನನ್ನ ಜೊತೆಗೆ ಬಂದರು.

ಜಾತಿ ಬಹಿಷ್ಕಾರ

ಇಷ್ಟರಲ್ಲಿ ನಮ್ಮ ಜಾತಿಯಲ್ಲಿ ಗಲಿಬಿಲಿ ಉಂಟಾಯಿತು. ಪಂಚಾಯತವು ಕೂಡಿತು. ಅಲ್ಲಿ ಜಾತಿ ಪ್ರಮುಖ ಸೆಟ್ಟಿ ಸಾವುಕಾರರು ನನಗೆಂದರು: "ನೀವು ಇಂಗ್ಲೆಂಡಿಗೆ ಹೋಗುವುದು ಸರಿಯಾದ ವಿಚಾರವಲ್ಲವೆಂದು ಪಂಚರ ಮತವಿದೆ. ನಮ್ಮ ಧರ್ಮದಲ್ಲಿ ಸಮುದ್ರ ಪ್ರವಾಸವು ನಿಷಿದ್ಧವಿದೆ. ಮೇಲಾಗಿ ವಿಲಾಯತಿಯಲ್ಲಿ ಧರ್ಮದ ಪಾಲನೆಯು ಸರಿಯಾಗಿ ಆಗುವುದಿಲ್ಲವೆಂದು ನಾವು ಕೇಳಿದ್ದೇವೆ."

ಇದಕ್ಕೆ ಉತ್ತರವಾಗಿ ನಾನು "ವಿಲಾಯತಿಗೆ ಹೋಗುವುದೇನೂ ಅಧರ್ಮವಲ್ಲ, ನನಗೆ ಅಲ್ಲಿ ಹೋಗಿ ಕೇವಲ ವಿದ್ಯಾಭ್ಯಾಸವನ್ನು ಮಾಡುವುದಿದೆ. ಮೇಲಾಗಿ ತಾವು ಭಯಪಡುವ ವಿಷಯಗಳನ್ನು ಕುರಿತು ನಾನು ತಾಯಿಯ ಸಮಕ್ಷಮದಲ್ಲಿ ಪ್ರತಿಜ್ಞೆ ಮಾಡಿದ್ದೇನೆ" ಎಂದೆನು.

ಕೊನೆಗೆ ಶೇಠಜಿಯವರ ನಿರ್ಣಯವು ಹೊರಬಿತ್ತು. "ಈ ಹುಡುಗನನ್ನು ಇಂದಿನಿಂದ ಜಾತಿ ಬಹಿಷ್ಕೃತನೆಂದು ತಿಳಿಯತಕ್ಕದ್ದು; ಅವನಿಗೆ ಸಹಾಯ ಮಾಡುವವರು, ಬೀಳ್ಕೊಡಲು ಹೋಗುವವರು ಜಾತಿಯ ವಿರುದ್ಧ ಅಪರಾಧ ಮಾಡಿದಂತೆ ಆಗುವುದಲ್ಲದೆ, ಇಂಥವರಿಗೆ ಒಂದು ಕಾಲು ರೂಪಾಯಿ ಜುಲ್ಮಾನೆ ವಿಧಿಸಲಾಗುವುದು."

ಈ ನಿರ್ಣಯದಿಂದ ನನ್ನ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. 1888 ನೆಯ ಇಸವಿಯ ಸೆಪ್ಟೆಂಬರ್ 4ನೆಯ ತಾರೀಖಿನ ದಿವಸ ನಾನು ಮುಂಬಯಿ ಬಂದರವನ್ನು ಬಿಟ್ಟೆನು. ❍

ಕೊನೆಗೆ ವಿಲಾಯತಿಯಲ್ಲಿ

ಯಾವ ಸುಖ ದುಃಖಗಳೂ ತಲೆದೋರದೆ ನನ್ನ ಪ್ರಯಾಣವು ಕೊನೆಗೊಂಡಿತು. ಜುನಾಗಡದ ತ್ರ್ಯಂಬಕಲಾಲ ಮುಜುಮದಾರ ಮತ್ತು ನಾನು ಸೌದೆಂಪ್ಟನ್ ಬಂದರಕ್ಕೆ ಬಂದು ಮುಟ್ಟಿದೆವು.

ಸೌದೆಂಪ್ಟನ್‌ದಿಂದ ನಾನು ಡಾಕ್ಟರ್ ಪ್ರಾಣಜೀವನ ಮೆಹತಾ ಅವರಿಗೆ ತಂತಿ ಕಳಿಸಿದೆನು. ಅವರು ಬಂದರು. ಅವರು ಪ್ರೀತಿಯಿಂದ ನನಗೆ ಬಹಳ ನಗೆ ಚಟಾಕಿಯಾಡಿದರು. ಅವರು ನಗುನಗುತ್ತಲೇ ವಿಲಾಯತಿಯ ಬಗ್ಗೆ ಅನೇಕ ಸಂಗತಿಗಳನ್ನು ನನಗೆ ತಿಳಿಸಿದರು. "ವಿಲಾಯತಿಯಲ್ಲಿ ಬೇರೆಯವರ ಒಡವೆಗಳನ್ನು ಮುಟ್ಟದಿರು. ಪರಿಚಯವಾದ ನಂತರ ಹಿಂದುಸ್ತಾನದಲ್ಲಿ ಸಹಜವಾಗಿ ಕೇಳಬಹುದಾದಂಥ ಮಾತುಗಳನ್ನು ಇಲ್ಲಿ ಕೇಳಬಾರದು. ದೊಡ್ಡ ದೊಡ್ಡ ಮಾತುಗಳನ್ನಾಡಬಾರದು. ಹಿಂದೂಸ್ತಾನದಲ್ಲಿ ಇಂಗ್ಲೀಷರ ಹತ್ತಿರ ಮಾತನಾಡುವಾಗ ಉಪಯೋಗಿಸುವ 'ಸರ್' ಶಬ್ದವು ಇಲ್ಲಿ ಅನಾವಶ್ಯಕವಾದುದು. ಇಲ್ಲಿ ಸೇವಕನು ಮಾತ್ರ ಒಡೆಯನನ್ನು ಇಲ್ಲವೆ ಹಿರಿಯ ಅಧಿಕಾರಿಯನ್ನು ಉದ್ದೇಶಿಸಿ 'ಸರ್' ಎನ್ನುವುದುಂಟು."

ನನ್ನ ಅಭಿರುಚಿ

ನನ್ನ ಊಟದ ಸಮಸ್ಯೆಯು ಬಹಳ ಬಿಕ್ಕಟ್ಟಿನದಾಯಿತು. ಉಪ್ಪು-ಖಾರವಿಲ್ಲದ ಹುಳಿ ಸಾರು ನನಗೆ ಸೇರುತ್ತಿರಲಿಲ್ಲ. ಬಡ ಯಜಮಾನಿಯು ನಿನಗಾಗಿ ಬೇಯಿಸುವುದಾದರೂ ಏನು? ಬೆಳಿಗ್ಗೆ ತಯಾರಿಸುತ್ತಿದ್ದ ಓಟಧಾನ್ಯದ ಅಂಬಲಿಯಿಂದೇನೊ ಹೊಟ್ಟೆ ತುಂಬುತ್ತಿತ್ತು. ಆದರೆ ಮಧ್ಯಾಹ್ನದ ಹಾಗೂ ರಾತ್ರಿಯ ಊಟವನ್ನು ಅರೆ ಹೊಟ್ಟೆ ಉಂಡು ಏಳಬೇಕಾಗುತ್ತಿತ್ತು. ಹಸಿವೆ ಇಂಗುತ್ತಿರಲಿಲ್ಲ. ಗೆಳೆಯರು ಮಾಂಸಾಹಾರದ ಬಗ್ಗೆ ಆಗ್ರಹ ಮಾಡುತ್ತಲೇ ಇದ್ದರು. ಆದರೆ ನಾನೆಂದೂ ನನ್ನ ನಿರ್ಧಾರದಿಂದ ಹಿಂಜರಿಯಲಿಲ್ಲ. ಮೂವತ್ತಾರು ರೋಗಗಳ ಮೇಲೆ ಒಂದೇ ಔಷಧವಾದ 'ನ' ಕಾರವೇ ನನ್ನ ಹತ್ತಿರವಿತ್ತು. ಮಿತ್ರರು ತಿಳುವಳಿಕೆ ಕೊಡುತ್ತ ಹೋದ ಹಾಗೆಲ್ಲ ನನ್ನ ನಿಶ್ಚಯವು ದೃಢವಾಗುತ್ತ ಹೋಗುತ್ತಿತ್ತು. ನನ್ನನ್ನು ಕಾಪಾಡಬೇಕೆಂದು ದಿನಾಲೂ ದೇವರಲ್ಲಿ ಪ್ರಾರ್ಥಿಸುತ್ತಿದ್ದೆನು; ನನ್ನ ಯಾಚನೆಯೂ ಫಲಿಸುತ್ತಿತ್ತು. ಆಗ ದೇವರೆಂದರೇನು ಎಂಬುದು ನನಗೆ ತಿಳಿಯುತ್ತಿದ್ದಿಲ್ಲ. ಆದರೆ ನಮ್ಮ ದಾಯಿಯಾದ ರಂಭೆಯು ಹುಟ್ಟಿಸಿದ ಶ್ರದ್ಧೆಯು ತನ್ನ ಕೆಲಸವನ್ನು ಮಾಡುತ್ತಿತ್ತು.

ಈಗ ಡಾ॥ ಮೆಹತಾ ಮತ್ತು ಬಂಧು ದಲಪತರಾಯ ಶುಕ್ಲ ಅವರು ಯಾವುದಾದರೊಂದು ಕುಟುಂಬದಲ್ಲಿ ನನ್ನನ್ನು ಇರಿಸಬೇಕೆಂದು ವಿಚಾರ ಮಾಡಿದರು. ಬಂಧು ಶುಕ್ಲನು ವೆಸ್ಟಕೇನ್ಸಿಂಗ್ಟನ್‌ನಲ್ಲಿ ಒಬ್ಬ ಆಂಗ್ಲೋ-ಇಂಡಿಯನ್‌ನ ಮನೆಯನ್ನು ಹುಡುಕಿದನು; ಅಲ್ಲಿಯೇ ನಾನು ತಳವೂರಿದೆನು.

ಇನ್ನೂ ಅಭ್ಯಾಸವು ಪ್ರಾರಂಭವಾಗಿರಲಿಲ್ಲ. ಶುಕ್ಲರ ಹೇಳಿಕೆಯ ಮೇರೆಗೆ ವರ್ತಮಾನ ಪತ್ರಗಳನ್ನು ಓದುತ್ತಿದ್ದೆನು.

ನಾನು ಅಡ್ಡಾಡಲಿಕ್ಕೆ ಹೋಗಲಿಕ್ಕೆ ಪ್ರಾರಂಭಿಸಿದೆನು. ನಾನು ಶಾಕಾಹಾರಿ ಊಟವನ್ನು ಒದಗಿಸುವ ಭೋಜನಾಲಯದ ಶೋಧನೆಯಲ್ಲಿದ್ದೆನು. ಇದಕ್ಕಾಗಿ ದಿನಾಲೂ 10–12 ಮೈಲುಗಳಷ್ಟು ತಿರುಗಾಡುತ್ತಿದ್ದೆನು. ಹೀಗೆ ಅಲೆದಾಡುತ್ತಿರುವಲ್ಲಿ ಒಂದು ದಿನ ನಾನು ಫೇರಿಂಗ್ಡನ್ ಬೀದಿಗೆ ಬಂದು ಮುಟ್ಟಿದೆನು. ಅಲ್ಲಿ ಶಾಕಾಹಾರಿ ಭೋಜನಾಲಯದ ಹೆಸರನ್ನು ಓದಿದೆನು. ಹರ್ಷಭರಿತನಾಗಿ ಒಳಗೆ ಹೋಗುವಷ್ಟರಲ್ಲಿ ಬಾಗಿಲಿನ ಹತ್ತಿರ ಗಾಜಿನ ಕಿಟಕಿಯಲ್ಲಿ ಮಾರಾಟಕ್ಕಾಗಿ ಇಟ್ಟ ಪುಸ್ತಕಗಳನ್ನು ನೋಡಿದೆನು. ಅವುಗಳಲ್ಲಿ ಸಾಲ್ಟ ಅವರು ಬರೆದ "ಶಾಕಾಹಾರದ ಸಮರ್ಥನೆ" ಎಂಬ ಪುಸ್ತಕದ ಮೇಲೆ ನನ್ನ ದೃಷ್ಟಿಯು ಹರಿಯಿತು. ಅದನ್ನು ಒಂದು ಶಿಲಿಂಗ್‌ಗೆ ಕೊಂಡುಕೊಂಡು ಊಟ ಮಾಡಲು ಕುಳಿತುಕೊಂಡೆನು. ವಿಲಾಯಿತಿಗೆ ಬಂದ ಮೇಲೆ ನಾನು ಹೊಟ್ಟೆ ತುಂಬ ಊಟ ಮಾಡಿದುದು ಇದೇ ಮೊದಲನೆಯ ಸಲ. ದೇವರು ನನ್ನ ಹಸಿವೆಯನ್ನು ಹಿಂಗಿಸಿದನು. ನಾನು ಸಾಲ್ಟನ ಪುಸ್ತಕವನ್ನು ಓದಿದೆನು. ನನ್ನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಯಿತು. ಈಗ ನಾನು ಸ್ವಯಂ ಪ್ರೇರಣೆಯಿಂದ ಮನಃಪೂರ್ವಕವಾಗಿ ಶಾಕಾಹಾರದ ಸಮರ್ಥಕನಾದೆನು. ನಾನು ಸ್ವತಃ ಶಾಕಾಹಾರಿಯಾಗುವುದಲ್ಲದೆ, ಇತರರನ್ನೂ ಹಾಗೆ ಪರಿವರ್ತಿಸಬೇಕೆಂಬುದೇ ನನ್ನ ಕರ್ತವ್ಯವೆಂದು ಬಗೆದೆನು.

'ಸಭ್ಯ' ವೇಷದಲ್ಲಿ

ಸಾಲ್ಟನ ಪುಸ್ತಕದಿಂದ ಆಹಾರದ ವಿಷಯದಲ್ಲಿ ಹೆಚ್ಚೆಚ್ಚು ಪುಸ್ತಕಗಳನ್ನು ಓದುವ ನನ್ನ ಉತ್ಸುಕತೆಯು ತೀವ್ರವಾಯಿತು. ಇಂತಹ ಪುಸ್ತಕಗಳಲ್ಲಿ ಸಿಕ್ಕಿರುವುಗಳಷ್ಟನ್ನೂ ಕೊಂಡುಕೊಂಡು ಓದಿದೆನು. ಇವುಗಳಲ್ಲಿ ಹಾವರ್ಡ ವಿಲಿಯಮ್ಸ್ ಅವರು 'ಆಹಾರ ನೀತಿ' ಮತ್ತು ಡಾ. ಎನಾ ಕಿಂಗ್ಸ್‌ಫರ್ಡ ಅವರ 'ಆಹಾರದ ಉತ್ತಮ ರೀತಿ' ಇವೂ ಇದ್ದವು. ಅಲ್ಲದೆ ಡಾ. ಎಲಿನ್ಸನ್ ಅವರ ಆರೋಗ್ಯ ವಿಷಯಕವಾದ ಲೇಖನಗಳೂ ಬಹಳ ಸಹಾಯಕವಾದವು. ಇವುಗಳಲ್ಲಿ ಔಷಧವನ್ನು ಕೊಡುವುದರ ಬದಲು ಆಹಾರದಲ್ಲಿ ಬದಲಾವಣೆಗಳನ್ನು ಮಾಡಿ ರೋಗಿಗಳನ್ನು ಗುಣಪಡಿಸುವ ವಿಧಾನದ ಸಮರ್ಥನೆಯಿದೆ. ಈ ಪುಸ್ತಕಗಳನ್ನು ಓದುವುದರಿಂದಾಗಿ ನನ್ನ ಜೀವನದಲ್ಲಿ ಆಹಾರದ ಪ್ರಯೋಗಗಳಿಗೆ ಮಹತ್ವದ ಸ್ಥಾನವು ಸಿಕ್ಕಿತು. ಮೊದ ಮೊದಲು ಅವುಗಳಲ್ಲಿ ಆರೋಗ್ಯ ದೃಷ್ಟಿಗೇ ಪ್ರಾಧಾನ್ಯವಿತ್ತು. ಬರ ಬರುತ್ತ ಧಾರ್ಮಿಕ ದೃಷ್ಟಿಯು ಎಲ್ಲವನ್ನು ಆವರಿಸಿತು.

ನಾನು 'ಕಾಡು ಮನುಷ್ಯ' ನಾಗಿ ಇರಬಾರದೆಂದು ನಿಶ್ಚಯಿಸಿದೆನು. ಸಭ್ಯ ಗೃಹಸ್ಥರ ಲಕ್ಷಣಗಳನ್ನು ಅಳವಡಿಸಿಕೊಂಡು ಬೇರೆ ಉಪಾಯಗಳಿಂದ ಸಮಾಜದಲ್ಲಿ ವ್ಯವಹರಿಸಲು ಯೋಗ್ಯನಾಗಿ ಅನ್ನಾಹಾರದ ಬಗೆಗೆ ಕಾಣುವ ನನ್ನ ವೈಚಿತ್ರ್ಯವನ್ನು ಮರೆಸಬೇಕೆಂದು ನಿರ್ಧರಿಸಿದೆನು.

ನಾನು ಸಭ್ಯ ಗೃಹಸ್ಥರ ಲಕ್ಷಣವನ್ನು ಕಲಿಯುವ ಹಾದಿಯನ್ನೇನೋ ರೂಪಿಸಿಯಾಯಿತು. ಆದರೆ ಅದು ನನಗೆ ನಿಲುಕದಂತಹದೂ ಮತ್ತು ಬಹಳ ಇಕ್ಕಟ್ಟಿನದೂ ಆಗಿತ್ತು. 'ಆರ್ಮಿ ಮತ್ತು ನೇವಿ ಸ್ಟೋರ್'ನಲ್ಲಿ ಉಡುಪುಗಳನ್ನು ಮಾಡಿಸಿಕೊಂಡೆನು. ಬಾಂಡ ಸ್ಟ್ರೀಟ್‌ನಲ್ಲಿ ಷೋಕಿ ಜನರ ಬಟ್ಟೆಗಳು ಹೊಲೆಯಲ್ಪಡುತ್ತಿದ್ದುವು. ಅಲ್ಲಿ ಸಂಧ್ಯಾಕಾಲದ ಉಡುಪೊಂದನ್ನು ಹೊಲಿಸಿದೆನು. ನನ್ನ ಭೋಳೆ ಅಣ್ಣನ ಕಡೆಯಿಂದ ಎರಡೂ ಜೇಬುಗಳಲ್ಲಿ ತೂಗಿಬಿಡಲು ಆಗುವಂತಹ ಬಂಗಾರದ ಸರಪಳಿಯನ್ನೂ ತರಿಸಿದೆನು. ಟಾಯ್ ಕಟ್ಟುವ ಕಲೆಯನ್ನೂ ಕಲಿತುಕೊಂಡೆನು. ಸ್ವದೇಶದಲ್ಲಿದ್ದಾಗ ಕೂದಲು ಕತ್ತರಿಸುವ ಸಮಯದಲ್ಲಿ ಮಾತ್ರ ನಾನು ಕನ್ನಡಿಯಲ್ಲಿ ನೋಡುತ್ತಿದ್ದೆನು. ಇಲ್ಲಿಯಂತೂ ನಿಲುಗನ್ನಡಿ ಮುಂದೆ ನಿಂತು ಟಾಯ್ ಕಟ್ಟುವುದರಲ್ಲಿ, ಕೂದಲು ಬಾಚಿಕೊಳ್ಳುವುದರಲ್ಲಿ 10 ನಿಮಿಷಗಳು ಕಳೆದುಹೋಗುತ್ತಿದ್ದವು.

ಆದರೆ ಇಷ್ಟು ವಯ್ಯಾರವು ಸಾಕೆನಿಸಲಿಲ್ಲ. 'ಸಭ್ಯ ಗೃಹಸ್ಥ' ನೆನಿಸಿಕೊಳ್ಳುವವನಿಗೆ ನೃತ್ಯ' ಕಲೆಯ ಅರಿವು ಇರಬೇಕು; ಫ್ರೆಂಚ್ ಭಾಷೆಯ ಜ್ಞಾನವೂ ಉತ್ತಮವಾಗಿರಬೇಕು; ಇಂಪಾದ ವ್ಯಾಖ್ಯಾನಗಳನ್ನು ಕೊಡುವುದರಲ್ಲಿಯೂ ಅವನು ನಿಪುಣನಾಗಿರಬೇಕು. ಅಂತೆಯೇ ನಾನು ನೃತ್ಯದ ಶಾಲೆಯನ್ನು ಸೇರಿದೆನು. ಇದಕ್ಕೆ ಸುಮಾರು ಮೂರು ಪೌಂಡು ಕೊಟ್ಟಿರಬೇಕು. ವಯೋಲಿನ್ ಬಾರಿಸಲು ಕಲಿತರೆ ತಾಳ ಸ್ವರಗಳ ಜ್ಞಾನವಾಗುವುದೆಂದು ಬಗೆದು ಮೂರು ಪೌಂಡು ಕೊಟ್ಟು ವಯೋಲಿನ್ ಕೊಂಡುಕೊಂಡೆನು. ಅದನ್ನು ಕಲಿಯುವುದಕ್ಕಾಗಿ ಶುಲ್ಕವನ್ನು ಕೊಟ್ಟೆನು. ವ್ಯಾಖ್ಯಾನ ಕಲೆಯನ್ನು ಹಸ್ತಗತ ಮಾಡಲಿಕ್ಕೆ ಮತ್ತೊಬ್ಬ ಶಿಕ್ಷಕನ ಮನೆಯನ್ನು ಹುಡುಕಿ ತೆಗೆದೆನು. ಬೇಲ್ಲ್‌ನ 'ಸ್ಟ್ಯಾಂಡರ್ಡ್ ಇಲೊಕ್ಯೂಷನಿಷ್ಟ' ಎಂಬ ಪುಸ್ತಕವನ್ನು ಕೊಂಡೆನು.

ಈ ಬೇಲ್ ಸಾಹೇಬನು ನನ್ನ ಕಿವಿಯಲ್ಲಿ 'ಬೇಲ್' ಗಂಟೆ ಬಾರಿಸಿದನು; ನಾನು ಎಚ್ಚೆತ್ತೆನು! ನನ್ನ ಇಡೀ ಆಯುಷ್ಯವನ್ನೇನೂ ನಾನು ಇಂಗ್ಲೆಂಡಿನಲ್ಲಿ ಕಳೆಯುವುದಿರಲಿಲ್ಲ. ವ್ಯಾಖ್ಯಾನ ಕೊಡುವುದನ್ನು ಕಲಿತು ನಾನು ಏನು ಮಾಡಬಹುದಿತ್ತು? ಕುಣಿತವನ್ನು ಕಲಿತು ನಾನು 'ಸಭ್ಯ ಗೃಹಸ್ಥ"ನಾಗುವ ಬಗೆ ಹೇಗೆ? ವಯೋಲಿನ್ ಅಂತೂ ಸ್ವದೇಶದಲ್ಲಿಯೇ ಕಲಿಯಬಹುದು. ನಾನು ವಿದ್ಯಾರ್ಥಿಯಾಗಿದ್ದೇನೆ. ನಾನು ವಿದ್ಯಾಧನವನ್ನು ವರ್ಧಿಸಿಕೊಳ್ಳಬೇಕಾಗಿದೆ. ನನ್ನ ಸದಾಚಾರಗಳಿಂದ ನಾನು 'ಸಭ್ಯ ಗೃಹಸ್ಥರೆನ್ನಿಸಿಕೊಳ್ಳುವುದು ಸಾಧ್ಯವಾದರೆ ಒಳಿತು, ಇಲ್ಲದಿದ್ದರೆ ನಾನು ಈ ಮೋಹವನ್ನು ಬಿಟ್ಟುಕೊಡಬೇಕು.

ತದನಂತರ ನಾನು ವ್ಯಾಖ್ಯಾನ, ಕುಣಿತ, ವಯೋಲಿನ್ ಕಲಿಯುವುದನ್ನು ಬಿಟ್ಟುಬಿಟ್ಟೆನು. ವಯೋಲಿನ್ ಮಾರಿಬಿಟ್ಟೆನು. 'ಸಭ್ಯ ಗೃಹಸ್ಥ'ನಾಗುವ ನನ್ನ ಹುಚ್ಚು ಸುಮಾರು ಮೂರು ತಿಂಗಳುಗಳಷ್ಟು ಕಾಲ ನಡೆದಿರಬಹುದು. ಆದರೆ ಉಡುಪುಗಳ ವೈಯಾರವು ಮಾತ್ರ ಅನೇಕ ವರ್ಷಗಳವರೆಗೆ ನಡೆಯಿತು. ಅದರೂ ನಾನು ಇಷ್ಟರಲ್ಲಿಯೇ ನಿಜವಾದ ವಿದ್ಯಾರ್ಥಿಯಾಗಿದ್ದೆನು.

ಪರಿವರ್ತನೆ

ಈ ಸಮ್ಮೋಹನಾವಸ್ಥೆಯಲ್ಲಿಯೂ ನಾನು ಕೆಲಮಟ್ಟಿಗೆ ಜಾಗರೂಕನಾಗಿಯೇ ಇದ್ದೆನು. ಪ್ರತಿಯೊಂದು ಕಾಸಿನ ಲೆಕ್ಕವನ್ನೂ ಇಡುತ್ತಿದ್ದೆನು. ತಿಳುವಳಿಕೆಯಿಂದ ವೆಚ್ಚ ಮಾಡುತ್ತಿದ್ದೆನು. ಪ್ರತಿ ತಿಂಗಳಿಗೂ 15 ಪೌಂಡುಗಳಿಗಿಂತ ಹೆಚ್ಚು ಖರ್ಚು ಮಾಡಬಾರದೆಂದು ನಿರ್ಧರಿಸಿದೆನು. ಬಸ್ ಬಾಡಿಗೆ, ಅಂಚೆ ವೆಚ್ಚವನ್ನು ಸಹ ಬರೆದಿಡುತ್ತಿದ್ದೆನು; ಅಲ್ಲದೆ ರಾತ್ರಿ ಮಲಗುವ ಪೂರ್ವದಲ್ಲಿ ಲೆಕ್ಕದ ತಾಳೆ ನೋಡುತ್ತಿದ್ದೆನು. ಈ ರೂಢಿಯು ಕೊನೆಯವರೆಗೂ ಉಳಿಯಿತು. ಇದರಿಂದಾಗಿ ಸಾರ್ವಜನಿಕ ಕಾರ್ಯಗಳಲ್ಲಿ ನನ್ನ ಮುಖಾಂತರ ವೆಚ್ಚವಾದ ಲಕ್ಷಾವಧಿ ರೂಪಾಯಿಗಳನ್ನು ಮಿತ ವ್ಯಯದಿಂದ ಖರ್ಚು ಮಾಡುವುದು ಸಾಧ್ಯವಾಯಿತು. ಅಲ್ಲದೆ ನನ್ನ ಮೇಲ್ವಿಚಾರಣೆಯಲ್ಲಿ ನಡೆದ ಕೆಲಸಗಳ ಬಗ್ಗೆ ಸಾಲ ಮಾಡುವ ಪ್ರಸಂಗ ನನಗೆ ಬರಲಿಲ್ಲ.

ಈಗ ನಾನು ವೆಚ್ಚವನ್ನು ಅರ್ಧಕ್ಕಿಳಿಸಬೇಕೆಂದು ವಿಚಾರ ಮಾಡಿದೆನು. ಲೆಕ್ಕವನ್ನು ನೋಡಲಾಗಿ ಗಾಡಿ ಬಾಡಿಗೆಯ ಖರ್ಚು ಸಾಕಷ್ಟು ಆಗುತ್ತಿತ್ತೆಂದು ಕಂಡುಬಂದಿತು. ಮೇಲಾಗಿ ಬೇರೆಯವರ ಮನೆಯಲ್ಲಿದ್ದುದರಿಂದ ಪ್ರತಿ ವಾರವೂ ಒಂದಿಲ್ಲೊಂದು ರೀತಿಯಾದ ವೆಚ್ಚ ಮಾಡುವ ಪ್ರಸಂಗವು ನನಗೆ ಬರುತ್ತಿತ್ತು. ಆದುದರಿಂದ ಪ್ರತ್ಯೇಕವಾದ ಕೋಣೆಯನ್ನು ಹಿಡಿಯಬೇಕೆಂದು ನಿಶ್ಚಯಿಸಿದೆನು. ನನ್ನ ಕೆಲಸದ ಸ್ಥಳಕ್ಕೆ ಅರ್ಧ ತಾಸಿನಲ್ಲಿ ನಡೆದು ಹೋಗಲು ಅನುಕೂಲವಾಗುವಂತಹ ಮನೆಯನ್ನೇ ಹಿಡಿದೆನು. ಇದರಿಂದ

ಗಾಡಿಯ ಬಾಡಿಗೆಯನ್ನು ತೆರುವುದು ತಪ್ಪಿತು; ತಿರುಗಾಡಲಿಕ್ಕೆ ವ್ಯಯಿಸಬೇಕಾದ ಸಮಯವೂ ಉಳಿಯಿತು; ಕೆಲಸದ ಸ್ಥಳಕ್ಕೆ ನಡೆದು ಹೋಗುವುದರಿಂದ ತಿರುಗಾಟವೂ ಆದಂತಾಯಿತು. ಈ ತೆರದಲ್ಲಿ ದಿನವೂ 8-10 ಮೈಲು ತಿರುಗಾಟವು ಸಹಜವಾಗಿ ಆಗುತ್ತಿತ್ತು. ಮುಖ್ಯವಾಗಿ ಇದೊಂದೇ ಕಾರಣದಿಂದ ವಿಲಾಯತಿಯಲ್ಲಿ ಇದ್ದಷ್ಟು ಕಾಲ ನಾನು ಬಹುಶಃ ಕಾಯಿಲೆ ಬೀಳುವ ಪ್ರಸಂಗವು ಬರಲಿಲ್ಲ; ಮೈಕಟ್ಟು ಸುದೃಢವಾಯಿತು.

ಬ್ಯಾರಿಸ್ಟರ ಪರೀಕ್ಷೆಗೆ ಬಹಳಷ್ಟು ಅಭ್ಯಾಸ ಮಾಡುವ ಅವಶ್ಯಕತೆ ಇರಲಿಲ್ಲವೆಂದು ನನಗೆ ಗೊತ್ತಿತ್ತು. ಆದುದರಿಂದ ನಾನು ನಿಶ್ಚಿಂತನಾಗಿದ್ದೆನು. ನನ್ನ ಅಪಕ್ವವಾದ ಇಂಗ್ಲಿಷ್ ಭಾಷೆಯ ಬಗ್ಗೆ ನನಗೆ ಕೆಡಕೆನಿಸುತ್ತಿತ್ತು. ಒಬ್ಬ ಗೆಳೆಯ ಸೂಚಿಸಿದರು: "ಲಂಡನ್ನಿನ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಪ್ರಯತ್ನಪಡುವುದಕ್ಕಾಗಿ ನೀನು ಸಾಕಷ್ಟು ಪರಿಶ್ರಮ ಮಾಡಬೇಕಾಗುವುದು; ನಿನ್ನ ಸಾಮಾನ್ಯ ಜ್ಞಾನವೂ ಹೆಚ್ಚುವುದು." ಈ ಸೂಚನೆಯು ನನಗೆ ಸಮ್ಮತವಾಯಿತು. ಆದರೆ ಪರೀಕ್ಷೆಯ ವಿಷಯ ಪಟ್ಟಿಯನ್ನು ನೋಡಿ ನನಗೆ ಗಾಬರಿಯಾಯಿತು. ಲ್ಯಾಟಿನ್ ಹಾಗೂ ಇನ್ನೊಂದು ಭಾಷೆ ಇವು ಅನಿವಾರ್ಯವಾಗಿದ್ದವು. ಲ್ಯಾಟಿನ್ ಅವಶ್ಯವಾಗಿ ಕಲಿಯಬೇಕು. ನಾನು ಈ ಮೊದಲು ಪ್ರಾರಂಭಿಸಿದ ಫ್ರೆಂಚ್ ಭಾಷೆಯ ಅಭ್ಯಾಸವನ್ನೂ ಮುಗಿಸಬೇಕಾಗಿತ್ತು! ಆದುದರಿಂದ ಫ್ರೆಂಚ್ ಭಾಷೆಯನ್ನು ಎರಡನೆಯ ಭಾಷೆಯನ್ನಾಗಿ ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿದೆನು.

ನನ್ನ ಮನೆತನದ ಬಡತನಕ್ಕೆ ಶೋಭಿಸುವಂತಹ ಸರಳತನವು ನನ್ನ ಜೀವನದಲ್ಲಿ ಇನ್ನೂ ಬರಲಿಲ್ಲವೆಂಬ ವಿಚಾರವು ನನ್ನನ್ನು ಕಾಡುತ್ತಿತ್ತು. ನನಗಿಂತಲೂ ಮಿಗಿಲಾಗಿ ಸರಳ ಜೀವನವನ್ನು ನಡೆಸುತ್ತಿದ್ದವರನ್ನೂ ನಾನು ನೋಡುತ್ತಿದ್ದೆನು. ಒಬ್ಬ ವಿದ್ಯಾರ್ಥಿಯು ಲಂಡನ್ನಿನ ಬಡವರ ಕೇರಿಯಲ್ಲಿ ವಾರಕ್ಕೆ 2 ಶಿಲಿಂಗುಗಳನ್ನು ಕೊಟ್ಟು

ಒಂದು ಕೋಣೆಯಲ್ಲಿರುತ್ತಿದ್ದು, ಎರಡು ಪೇನ್ಸುಗಳಲ್ಲಿ ಕೋಕೊ ಹಾಗೂ ರೊಟ್ಟಿಯನ್ನು ತಿಂದು ಜೀವಿಸುತ್ತಿದ್ದನು. ನನ್ನಿಂದ ಹೀಗೆ ಇರಲು ಆಗುತ್ತಿದ್ದಿಲ್ಲ. ಆದರೆ ಎರಡು ಕೋಣೆಗಳ ಬದಲು ಒಂದರಿಂದಲೇ ಕೆಲಸವಾಗುವಂತಿದೆಯೆಂದೂ ಅರ್ಧ ಅಡುಗೆಯನ್ನು ನಾನೇ ಮಾಡಿಕೊಳ್ಳುವುದು ಸಾಧ್ಯವಿದೆಯೆಂದೂ ನನಗೆ ತೋರಿತು. ಈ ವ್ಯವಸ್ಥೆಯಿಂದ ತಿಂಗಳಿಗೆ 4–5 ಪೌಂಡುಗಳಲ್ಲಿ ನನ್ನ ಕಾರ್ಯವಾಗುವಂತಿತ್ತು. ವಾರಕ್ಕೆ ಎಂಟು ಶಿಲಿಂಗುಗಳನ್ನು ಕೊಡುವುದನ್ನು ಗೊತ್ತುಮಾಡಿ ಒಂದು ಕೋಣೆಯನ್ನು ಹಿಡಿದೆನು. ಗ್ಯಾಸಿನ ಒಲೆಯನ್ನು ಕೊಂಡುಕೊಂಡು ಮುಂಜಾವದ ಅಡುಗೆಯನ್ನು ಮನೆಯಲ್ಲಿಯೇ ಮಾಡುವುದನ್ನು ಪ್ರಾರಂಭಿಸಿದೆನು. ಅಡುಗೆಗೆ 20 ನಿಮಿಷಗಳಿಗಿಂತಲೂ ಹೆಚ್ಚು ಸಮಯ ಹಿಡಿಯುತ್ತಿರಲಿಲ್ಲ. ಅಂಬಲಿಯನ್ನು ತಯಾರಿಸಲು ಮತ್ತು ಕೋಕೋ ಬಗ್ಗೆ ನೀರನ್ನು ಕುದಿಸಲು ಎಷ್ಟು ಸಮಯ ಹಿಡಿದೀತು? ಮಧ್ಯಾಹ್ನದ ಭೋಜನವನ್ನು ಹೊರಗೆ ಮಾಡುತ್ತಿದ್ದೆನು. ಹಾಗೂ ರಾತ್ರಿ ಕೋಕೋ ಮತ್ತು ರೊಟ್ಟಿಯನ್ನು ಮಾಡಿಕೊಳ್ಳುತ್ತಿದ್ದೆನು. ಹೀಗೆ ದಿನಾಲು 1–1 ಶಿಲಿಂಗುಗಳಲ್ಲಿ ನನ್ನ ಊಟವಾಗುತ್ತಿತ್ತು.

ಈ ರೀತಿ ಸರಳತನದಿಂದ ಇರುವುದರಿಂದ ನನ್ನ ಜೀವನವು ನೀರಸವಾಗಿತ್ತೆಂದು ಓದುಗರು ತಿಳಿಯಬಾರದು. ಇದಕ್ಕೆ ವಿರುದ್ಧವಾಗಿ ನನ್ನ ಜೀವನವು ಇನ್ನಷ್ಟು ಸರಳವಾಯಿತು. ನನ್ನ ಆತ್ಮಾನಂದಕ್ಕೆ ಪಾರವೇ ಉಳಿಯಲಿಲ್ಲ.

ಆಹಾರದ ಪ್ರಯೋಗಗಳು

ಶಾಕಾಹಾರಕ್ಕೆ ಸಂಬಂಧಿಸಿದ ಪುಸ್ತಕಗಳಲ್ಲಿ ಲೇಖಕರು ಒಳ್ಳೆಯ ಪರಿಶೋಧನೆಯಿಂದ ವಿಚಾರ ಮಾಡಿದುದು ನನಗೆ ಕಂಡುಬಂದಿತು. ಮಾನವನಿಗೆ ಪಶುಪಕ್ಷಿಗಳ ಮೇಲಿನ ಅಧಿಕಾರವು ಪ್ರಾಪ್ತವಾದುದು ಅವುಗಳನ್ನು ಕೊಂದು ತಿನ್ನುವುದಕ್ಕಾಗಿರದೆ, ಅವುಗಳನ್ನು ಕಾಪಾಡಲಿಕ್ಕೆ ಎಂಬುದನ್ನು ಅವರು ನೈತಿಕ ದೃಷ್ಟಿಯಿಂದ ತೋರಿಸಿಕೊಟ್ಟಿರುವರು. ಮೇಲಾಗಿ ತಿನ್ನುವುದು ಬದುಕಿರುವುದಕ್ಕೆ ಹೊರತು ಭೋಗಕ್ಕಲ್ಲ. ಇದಕ್ಕಾಗಿ ಕೆಲವರಂತೂ ಮಾಂಸವನ್ನಷ್ಟೇ ಅಲ್ಲ; ತತ್ತಿ, ಹಾಲನ್ನೂ ತ್ಯಜಿಸಬೇಕೆಂದು ಸೂಚಿಸಿದರು. ವಿಜ್ಞಾನದ ಹಾಗೂ ಮನುಷ್ಯನ ಶರೀರ ರಚನೆಯ ದೃಷ್ಟಿಯಿಂದ ಮನುಷ್ಯನ ಆಹಾರವನ್ನು ಬೇಯಿಸುವ ಅವಶ್ಯಕತೆಯಿಲ್ಲವೆಂಬ ಅನುಮಾನವನ್ನೂ ಕೆಲವರು ಹೊರಡಿಸಿದರು. ಅವರ ದೃಷ್ಟಿಯಲ್ಲಿ ಬೇಳೆ, ಹಣ್ಣುಗಳನ್ನಷ್ಟೇ ತಿನ್ನಬಹುದು. ಹಾಲನ್ನು ಕುಡಿಯುವುದೇ ಇದ್ದಲ್ಲಿ ತಾಯಿಯ ಹಾಲನ್ನು ಮಾತ್ರ ಕುಡಿಯಬಹುದು.

ಹಲ್ಲುಗಳು ಬಂದ ಮೇಲಂತೂ ಅಗಿದು ತಿನ್ನಲು ಆಗುವಂತಹ ಆಹಾರವನ್ನೇ ಸೇವಿಸಬೇಕು. ವೈದ್ಯಕೀಯ ದೃಷ್ಟಿಯಲ್ಲಿ ಮೆಣಸು-ಮಸಾಲೆಗಳು ತ್ಯಾಜ್ಯವೆಂದೂ ಆರ್ಥಿಕ ದೃಷ್ಟಿಯಲ್ಲಿ ಅನ್ನವೇ ಅಗ್ಗವಾದ ಆಹಾರವೆಂದೂ ಅವರು ಗೊತ್ತುಮಾಡಿದರು. ಈ ನಾಲ್ಕೂ ದೃಷ್ಟಿಕೋನಗಳ ಪರಿಣಾಮವು ನನ್ನ ಮೇಲಾಯಿತು. ಶಾಕಾಹಾರದ ಭೋಜನಾಲಯಗಳಲ್ಲಿ ಈ ನಾಲ್ಕು ದೃಷ್ಟಿಯ ಜನರೂ ನನಗೆ ಭೆಟ್ಟಿಯಾಗುತ್ತಿದ್ದರು. ವಿಲಾಯತಿಯಲ್ಲಿ ಈ ವಿಚಾರದ ಜನರ ಆ ಒಂದು ಸಂಸ್ಥೆಯೂ ಇದ್ದಿತು. ಅವರು ಒಂದು ಸಾಪ್ತಾಹಿಕವನ್ನೂ

ನಡೆಸುತ್ತಿದ್ದರು. ನಾನು ಅದಕ್ಕೆ ಚಂದಾದಾರನಾದೆನು. ಅವರ ಸಂಸ್ಥೆಯ ಸದಸ್ಯನೂ ಆದೆನು. ನಾನು ಆಹಾರದ ಪ್ರಯೋಗಗಳನ್ನು ಮಾಡುವುದರಲ್ಲಿ ತೊಡಗಿದೆನು.

ಮನೆಯಿಂದ ಮಿಠಾಯಿ–ಮಸಾಲೆಗಳನ್ನು ತರಿಸುವುದನ್ನು ಬಿಟ್ಟುಬಿಟ್ಟೆನು. ಮನಸ್ಸಿನ ದಿಕ್ಕನ್ನು ಬದಲಿಸಿದೆನು. ಇದರಿಂದಾಗಿ ಮಸಾಲೆಯ ಮೋಹವು ಕಡಿಮೆಯಾಯಿತು. ಮೊದಲು ಅರುಚಿಕರವೆನ್ನಿಸುತ್ತಿದ್ದ ಮಸಾಲೆ ಹಾಕದ ಕಾಯಿ ಪಲ್ಲೆಯು, ಈಗ ಕೇವಲ ಬೇಯಿಸಿದರೂ ರುಚಿಕರವೆನ್ನಿಸತೊಡಗಿತು. ರುಚಿಯ ನಿಜವಾದ ಉಗಮಸ್ಥಾನವು ನಾಲಗೆಯಾಗಿರದೆ ಮನಸ್ಸೇ ಆಗಿದೆಯೆಂಬುದನ್ನು ನಾನು ಮನಗಂಡೆನು.

ಚಹಾ ಕಾಫಿಗಳು ಹಾನಿಕರವಾಗಿವೆಯೆಂದು ಕೋಕೋವನ್ನು ಪುರಸ್ಕರಿಸುವ ಒಂದು ಪಂಗಡವು ಆ ಕಾಲದಲ್ಲಿತ್ತು. ಶರೀರ ಯಾತ್ರೆಯನ್ನು ಸಾಗಿಸಲು ಬೇಕಾದ ವಸ್ತುಗಳನ್ನಷ್ಟೇ ತಿನ್ನಬೇಕೆಂದು ನನ್ನ ಮನವರಿಕೆಯಾಗಿತ್ತು. ಇದಕ್ಕಾಗಿ ಮುಖ್ಯವಾಗಿ ಚಹಾ ಕಾಫಿಗಳನ್ನು ತೊರೆದು ಈ ಜನರು ಅವುಗಳ ಬದಲಾಗಿ ಕೋಕೋ ಕುಡಿಯುತ್ತಿದ್ದರು.

ಭೋಜನಾಲಯದಲ್ಲಿ ಎರಡು ವಿಭಾಗಗಳಿದ್ದವು. ಒಂದರಲ್ಲಿ ತಿಂದಷ್ಟು ಪದಾರ್ಥಗಳ ಬೆಲೆ ತೆರಬೇಕಾಗುತ್ತಿತ್ತು. ಇದರಲ್ಲಿ ಪ್ರತಿ ಸಲ ಒಂದೆರಡು ಶಿಲಿಂಗುಗಳಷ್ಟು ಖರ್ಚು ಬರುತ್ತಿತ್ತು. ಎರಡನೆಯ ವಿಭಾಗದಲ್ಲಿ ಆರು ಪೇನ್ಸುಗಳಲ್ಲಿ ಮೂರು ಜೀನಸುಗಳು ಹಾಗೂ ರೊಟ್ಟಿಯ ತುಂಡು ಸಿಗುತ್ತಿದ್ದವು. ನನಗೆ ಬಹಳ ಮಿತವ್ಯಯವನ್ನು ಸಾಧಿಸಬೇಕೆಂದಾಗ ನಾನು 6 ಪೇನ್ಸುಗಳ ವಿಭಾಗದಲ್ಲಿ ಊಟ ಮಾಡುತ್ತಿದ್ದೆನು.

ಹಾಲಿನ ಕೆನೆ, ಹಾಲು ಹಾಗೂ ತತ್ತಿಗಳನ್ನು ತೆಗೆದುಕೊಳ್ಳುವ ಪ್ರಯೋಗವು ಉಲ್ಲೇಖನೀಯವಾಗಿದೆ. ಪಿಷ್ಟವಿಲ್ಲದ ಪದಾರ್ಥಗಳನ್ನು ತಿನ್ನಬೇಕೆಂದು ಸಮರ್ಥಿಸುವವರು, ತತ್ತಿಗಳನ್ನು ಬಹಳವಾಗಿ ಶ್ಲಾಘಿಸುತ್ತಿದ್ದರಲ್ಲದೆ, ಅವು ಮಾಂಸಾಹಾರವಲ್ಲವೆಂದು ಸಿದ್ಧ

ಮಾಡಿದರು. ತತ್ತಿಗಳನ್ನು ತಿನ್ನುವುದರಿಂದ ಯಾವ ಜೀವಂತ ಪ್ರಾಣಿಯೂ ಕಷ್ಟಕ್ಕೀಡಾಗುವಂತಿರಲಿಲ್ಲವೇನೋ ನಿಜ. ಈ ತರ್ಕ ಸರಣಿಯ ಸೆಳವಿಗೆ ಸಿಕ್ಕು, ತಾಯಿಯ ಮುಂದೆ ನಾನು ಅನ್ಯಥಾ ಪ್ರತಿಜ್ಞೆ ಮಾಡಿದ್ದರೂ ಕೂಡ ತತ್ತಿಯನ್ನು ತಿಂದೆನು. ನನ್ನ ಭ್ರಾಂತಿಯು ಸ್ವಲ್ಪ ಕಾಲ ಮಾತ್ರ ಬಾಳಿತು. ಪ್ರತಿಜ್ಞೆಗೆ ಹೊಸ ಅರ್ಥವನ್ನು ಹಚ್ಚುವ ಅಧಿಕಾರವು ನನಗಿರಲಿಲ್ಲ. ಪ್ರತಿಜ್ಞೆ ಮಾಡಿಸಿದವನಿಗೆ ಇಷ್ಟವಿದ್ದ ಅರ್ಥವೇ ಸರಿಯಾದುದು. ಹೀಗೆ ಪ್ರತಿಜ್ಞೆಯ ರಹಸ್ಯವು ನನಗೆ ಹೊಳೆದಾಕ್ಷಣ ನಾನು ತತ್ತಿಗಳನ್ನು ತಿನ್ನುವುದನ್ನು ಬಿಟ್ಟುಬಿಟ್ಟೆನು.

ಆದರೆ ಇದರಿಂದ ನನಗೆ ಕಷ್ಟವಾಯಿತು. ಏಕೆಂದರೆ ಶಾಕಾಹಾರದ ಭೋಜನಾಲಯದಲ್ಲಿಯೂ ಬಹಳಷ್ಟು ಪದಾರ್ಥಗಳಲ್ಲಿ ತತ್ತಿಯನ್ನು ಸೇರಿಸುತ್ತಿದ್ದರು. ಆದರೆ ಒಂದು ತರದ ರಗಳೆಯೂ ನನಗೆ ತಪ್ಪಿತು. ಏಕೆಂದರೆ ನಾನು ಕೆಲವು ಸಾದಾ ಜೀನಸುಗಳನ್ನಷ್ಟೇ ತೆಗೆದುಕೊಳ್ಳಬೇಕಾಯಿತು. ಮತ್ತೊಂದು ರೀತಿಯಿಂದ ವಿಚಾರ ಮಾಡಿದರೆ ನನ್ನ ಮನಸ್ಸಿಗೆ ಸ್ವಲ್ಪ ಆಘಾತವಾಯಿತೆಂದೇ ಹೇಳಬೇಕು; ಏಕೆಂದರೆ ನಾಲಿಗೆಗೆ ಬಹಳ ರುಚಿಕರವೆನ್ನಿಸುವ ಅನೇಕ ಪದಾರ್ಥಗಳನ್ನು ಬಿಡಬೇಕಾಗಿ ಬಂದಿತು. ಆದರೆ ಈ ಆಘಾತವು ಕ್ಷಣಿಕವಾದದ್ದಿತ್ತು. ಪ್ರತಿಜ್ಞಾ ಪಾಲನೆಯ ಸರಳ, ಸೂಕ್ಷ್ಮ ಹಾಗೂ ಶಾಶ್ವತವಾದ ಸವಿಯು ಈ ಕ್ಷಣಿಕವಾದ ಆಸ್ವಾದನೆಗಿಂತಲೂ ನನಗೆ ಹೆಚ್ಚು ಪ್ರಿಯವೆನ್ನಿಸತೊಡಗಿತು.

ಈ ಅಧ್ಯಾಯವನ್ನು ಮುಗಿಸುವ ಮೊದಲು ಪ್ರತಿಜ್ಞೆಯ ಅರ್ಥವನ್ನು ಕುರಿತು ಕೆಲವೊಂದು ಸಂಗತಿಗಳನ್ನು ಹೇಳುವುದು ಅವಶ್ಯವಿದೆ. ನನ್ನ ಪ್ರತಿಜ್ಞೆಯು ತಾಯಿಯ ಕೂಡ ಮಾಡಿಕೊಂಡ ಒಂದು ಒಡಂಬಡಿಕೆಯಾಗಿತ್ತು. ಜಗತ್ತಿನೊಳಗೆ ಬಹುಶಃ ಯಾವತ್ತೂ ಜಗಳಗಳು, ಒಪ್ಪಂದಗಳ ಅರ್ಥದ ಎಳೆದಾಟದಿಂದಲೇ ಸಂಭವಿಸುತ್ತವೆ. ಸ್ವಾರ್ಥವು ಎಲ್ಲರನ್ನೂ ಅಂಧರನ್ನಾಗಿ ಮಾಡುತ್ತದೆ. ಅರಸರಿಂದ ಹಿಡಿದು ಭಿಕ್ಷುಕರವರೆಗೆ ಎಲ್ಲರೂ ಒಡಂಬಡಿಕೆಯ ಅರ್ಥವನ್ನು ತಮ್ಮ ಮನಸ್ಸಿಗೆ ಬಂದಂತೆ ಮಾಡಿ, ತಮ್ಮನ್ನೂ ಜಗತ್ತನ್ನೂ ಈಶ್ವರನನ್ನೂ

ವಂಚಿಸುತ್ತಾರೆ. ಪ್ರತಿಪಕ್ಷಿಯು ನಮ್ಮ ಮಾತಿಗೆ ಹಚ್ಚಿದ ಅರ್ಥವೇ ಸರಿಯಾದುದು. ಇದುವೇ ಸುವರ್ಣ ನ್ಯಾಯ. ನಮ್ಮ ಮನಸ್ಸಿನೊಳಗಿನ ಅರ್ಥವು ತಪ್ಪಾದುದೂ ಅಪೂರ್ಣವಾದುದೂ ಎಂದು ತಿಳಿಯಬೇಕು. ಎರಡು ಅರ್ಥಗಳಾಗುವ ಸಂಭವವಿದ್ದಲ್ಲಿ ಬಲಹೀನ ಪಕ್ಷಕ್ಕೆ ಸಮ್ಮತವಾದ ಅರ್ಥವೇ ಸರಿಯಾದುದೆಂದು ತಿಳಿಯುವುದೇ ಎರಡನೆಯ ಸುವರ್ಣ ನ್ಯಾಯವು. ಈ ಎರಡೂ ಸುವರ್ಣ ಮಾರ್ಗಗಳನ್ನು ಹಿಡಿಯದೆ ಇರುವುದೇ ಅಧರ್ಮಕ್ಕೆ ಕಾರಣವಾಗುತ್ತದೆ. ಅಸತ್ಯವೇ ಇಂತಹ ಅನ್ಯಾಯಕ್ಕೆ ಮೂಲವು.

ಸತ್ಯದ ಹಾದಿ ತುಳಿಯಬಯಸುವವನಿಗೆ ಈ ಸುವರ್ಣಮಾರ್ಗವು ಸಹಜವಾಗಿ ಸಿಗುತ್ತದೆ. ಅವನು ಶಾಸ್ತ್ರ ಗ್ರಂಥಗಳನ್ನು ತಿರುವಿಹಾಕುವ ಅವಶ್ಯಕತೆಯಿಲ್ಲ.

ವಿಲಾಯತಿಯಲ್ಲಿ ನನ್ನ ಪ್ರಯೋಗಗಳು ಆರ್ಥಿಕ ಹಾಗೂ ಆರೋಗ್ಯ ದೃಷ್ಟಿಯಿಂದ ನಡೆಯುತ್ತಿದ್ದವು. ಧಾರ್ಮಿಕ ದೃಷ್ಟಿಯಿಂದ ಕಡುತರವಾದ ಪ್ರಯೋಗಗಳು ನಡೆದುದು ದಕ್ಷಿಣ ಆಫ್ರಿಕೆಯಲ್ಲಿ. ಆದರೆ ಇದರ ಬೀಜಾರೋಪಣವೂ ವಿಲಾಯತಿಯಲ್ಲಿಯೇ ಆಯಿತು.

'ಹೊಸದಾಗಿ ಮುಸಲ್ಮಾನನಾದವನು ಕರೆಯನ್ನು ಅಬ್ಬರದಿಂದ ಕೊಡುತ್ತಾನೆ' ಎಂಬ ಗಾದೆಯ ಮಾತು ಪ್ರಸಿದ್ಧವಿದೆ. ಇದರಂತೆ ನಾನು ನಾನಿದ್ದ ಓಣಿಯಲ್ಲಿ ಒಂದು ಶಾಕಾಹಾರಿಗಳ ಸಂಘವನ್ನು ಸ್ಥಾಪಿಸಬೇಕೆಂದು ವಿಚಾರ ಮಾಡಿದೆನು. ಆ ಕೇರಿಯಲ್ಲಿರುತ್ತಿದ್ದ ಸರ್ ಎಡ್ವಿನ್ ಅರ್ನಾಲ್ಡ್ ಅವರು ಇದಕ್ಕೆ ಉಪಾಧ್ಯಕ್ಷರಾದರು. ಡಾ॥ ಓಲ್ಡಫೀಲ್ಡ ಅವರು ಅಧ್ಯಕ್ಷರಾದರು. ನಾನು ಕಾರ್ಯದರ್ಶಿಯಾದೆನು. ಇದರಿಂದಾಗಿ ಸಂಸ್ಥೆಗಳ ರಚನೆ ಹಾಗೂ ಅವುಗಳನ್ನು ನಡೆಸುವಲ್ಲಿ ಸ್ವಲ್ಪ ಅನುಭವವು ನನಗೆ ದೊರಕಿತು.

○

ಲಜ್ಜೆ-ನನ್ನ ರಕ್ಷಾ ಕವಚ

ಶಾಕಾಹಾರ ಮಂಡಲದ ಸಮಿತಿಗೆ ನಾನೇನೋ ಚುನಾಯಿತನಾದೆನು. ಅದಕ್ಕೆ ನಾನು ಉಪಸ್ಥಿತನಿರುತ್ತಿದ್ದೆನಾದರೂ ಮಾತನಾಡಲು ಬಾಯಿ ತೆರೆಯುತ್ತಿರಲಿಲ್ಲ. ಬಹಳ ದಿನಗಳವರೆಗೆ ಹೀಗೇ ನಡೆಯಿತು. ಆದರೆ ಕಡೆಗೆ ಸಮಿತಿಯಲ್ಲಿ ಒಂದು ಗಂಭೀರ ವಿಷಯವು ತಲೆಯೆತ್ತಿತ್ತು. ಅದರಲ್ಲಿ ಭಾಗವಹಿಸದಿರುವುದೆಂದರೆ ಅನ್ಯಾಯಕ್ಕೆ ಆಸ್ಪದವಿತ್ತಂತೆ ಎಂದು ನನಗೆ ತೋರಿತು.

ಮಿ॥ ಹಿಲ್ಸ ಅವರು ಮಂಡಲದ ಅಧ್ಯಕ್ಷರಾಗಿದ್ದರು. ಅವರ ಸಮಿತಿಯಲ್ಲಿ ಡಾ॥ ಎಲಿನ್ಸನ್ ಅವರೂ ಇದ್ದರು. ಈ ಕಾಲದಲ್ಲಿ ಸಂತತಿ ನಿಯಮನಕ್ಕಾಗಿ ಕೃತ್ರಿಮ ಸಾಧನಗಳನ್ನು ಉಪಯೋಗಿಸಬೇಕೆಂಬ ಆಂದೋಲನವು ನಡೆದಿತ್ತು. ಡಾ॥ ಎಲಿನ್ಸನ್ನರು ಉಪಾಯಗಳ ಬೆಂಬಲಿಗರಾಗಿದ್ದರು. ಆದುದರಿಂದ ಇಂತಹ ಸಮಾನ ವಿಘಾತಕ ವಿಚಾರಗಳುಳ್ಳವರು ಮಂಡಲದಲ್ಲಿರಕೂಡದೆಂದು ಮಿ॥ ಹಿಲ್ಸ ಅವರ ಅಭಿಪ್ರಾಯವಾಗಿತ್ತು. ಡಾ॥ ಎಲಿಯಸ್ಸನ್‌ರ ಕೃತಕ ಉಪಾಯಗಳ ವಿಚಾರವು ನನಗೂ ಭಯಂಕರವೆನ್ನಿಸಿತು. ಈ ವಿಷಯದಲ್ಲಿ ಮಿ॥ ಹಿಲ್ಸರ ವಿರೋಧವು ಸರಿಯಾದ ನೀತಿಯೆಂದು ನನ್ನ ಭಾವನೆ. ಆದರೆ ಶುದ್ಧ ನೀತಿಯನ್ನು ಒಪ್ಪಿಕೊಳ್ಳದ ಒಬ್ಬನನ್ನು ಶಾಕಾಹಾರ ಮಂಡಲದಿಂದ ಹೊರದೂಡುವುದು ಸರ್ವಥಾ ಅನ್ಯಾಯದ್ದು ಎಂದು ನನಗನಿಸಿತು. ಆದರೆ ನನಗೆ ಮಾತಾಡಲಾಗಲಿಲ್ಲ. ನನ್ನ ಈ ಮುಖಹೇಡಿತನವು ವಿಲಾಯತಿಯಲ್ಲಿರುವವರೆಗೂ ಹಾಗೆಯೇ ಉಳಿಯಿತು.

ವಿಲಾಯತಿಯನ್ನು ಬೀಳ್ಕೊಡುವಾಗ ಸಾರ್ವಜನಿಕ ಭಾಷಣ ಕೊಡುವ ಕೊನೆಯ ಪ್ರಯತ್ನವನ್ನು ನಾನು ಮಾಡಬೇಕಾಗಿ ಬಂದಿತು. ಶಾಕಾಹಾರಿ ಗೆಳೆಯರನ್ನು ಭೋಜನಾಲಯದಲ್ಲಿ ನಾನು ಭೋಜನಕ್ಕೆಂದು ಆಹ್ವಾನಿಸಿದೆನು. ಅಲ್ಲಿ ಭಾಷಣ ಮಾಡುವ ನನ್ನ ಸರತಿ ಬಂದಿತು. ನಾನು ಎದ್ದು ನಿಂತೆನು. ನಾನು ಬಹಳ ವಿಚಾರ ಮಾಡಿ ಮಾತನಾಡುವ ಸಿದ್ಧತೆಯನ್ನು ಮಾಡಿಕೊಂಡು ಹೋಗಿದ್ದೆನು. ಆದರೆ ಮೊದಲನೆಯ ವಾಕ್ಯದಿಂದ ಮುಂದುವರಿಯಲು ಸಾಧ್ಯವಾಗಲಿಲ್ಲ. ವಿಚಾರ ಮಾಡಿದ್ದೆಲ್ಲವೂ ಮರೆತುಹೋಯಿತು. ವಿನೋದಪೂರ್ಣ ಭಾಷಣ ಮಾಡಬೇಕೆಂದಿದ್ದ ನಾನೇ ಹಾಸ್ಯಕ್ಕೆ ಗುರಿಯಾದೆನು. "ಸಭ್ಯ ಗೃಹಸ್ಥರೇ, ತಾವು ನನ್ನ ಆಮಂತ್ರಣವನ್ನು ಸ್ವೀಕರಿಸಿದ್ದಕ್ಕಾಗಿ ನಾನು ತಮ್ಮೆಲ್ಲರ ಆಭಾರಿಯಾಗಿದ್ದೇನೆ" ಎಂದಿಷ್ಟೇ ಹೇಳಿ ನಾನು ಕುಳಿತುಕೊಳ್ಳಬೇಕಾಯಿತು.

ಈ ಮುಖಹೇಡಿತನ ಅಥವಾ ನಾಚಿಕೆಯ ಸ್ವಭಾವವು ದಕ್ಷಿಣ ಆಫ್ರಿಕೆಗೆ ಹೋದ ಮೇಲೆಯೇ ನನ್ನಿಂದ ತೊಲಗಿತು. ಅದು ಸಂಪೂರ್ಣ ತೊಲಗಿದೆಯೆಂದು ಈ ಹೊತ್ತೂ ಹೇಳಲಾರೆನು.

ಆದರೆ ಈ ಅಂಜುಬುರುಕತನದಿಂದ ನನ್ನ ಫಜೀತಿ ಮಾತ್ರ ಆಯಿತಲ್ಲದೆ ಇನ್ನಾವ ಹಾನಿಯೂ ಆಗಲಿಲ್ಲ. ಕೊಂಚ ಲಾಭವೂ ಆಗಿರಬೇಕೆಂದು ನನಗೆ ಈಗ ಎನಿಸುತ್ತದೆ. ಮಾತನಾಡಲು ಸಂಕೋಚವೆನಿಸುತ್ತಿದ್ದುದರಿಂದ ಮೊದಲು ನನಗೆ ದುಃಖವಾಗುತ್ತಿತ್ತು. ಈಗ ಸುಖವೆನಿಸುತ್ತದೆ. ಇದರಿಂದಾಗಿ ದೊಡ್ಡ ಲಾಭವೆಂದರೆ ನಾನು ಶಬ್ದಗಳ ಮಿತವ್ಯಯವನ್ನು ಕಲಿತೆನು. ವಿಚಾರಗಳನ್ನು ನನ್ನ ಅಂಕಿತದಲ್ಲಿಟ್ಟುಕೊಳ್ಳುವ ಅಭ್ಯಾಸವು ಸಹಜವಾಗಿ ಆಯಿತು. ತನ್ನ ಮಾತಿನಲ್ಲಾಗಲಿ, ಬರಹದಲ್ಲಾಗಲಿ ವಿಚಾರ ಮಾಡದೆ, ತೂಗದೆ ಯಾವ ಶಬ್ದವೂ ಹೊರಡುವುದು ಕ್ವಚಿತ್ತಾಗಿ. ನನ್ನ ಭಾಷಣ ಅಥವಾ ಲೇಖನದ ಯಾವ ಭಾಗವನ್ನೂ ಕುರಿತು ನಾಚಿಕೆಪಡಬೇಕಾದ ಅಥವಾ

ಪಶ್ಚಾತ್ತಾಪಪಡಬೇಕಾದ ಪ್ರಸಂಗ ಬಂದುದು ನನಗೆ ನೆನಪಿಲ್ಲ. ಇದರಿಂದಾಗಿ ನಾನು ಅನೇಕ ಪ್ರಸಂಗಗಳಿಂದ ಪಾರಾದೆನಲ್ಲದೆ, ವೃಥಾ ಕಾಲಹರಣವೂ ತಪ್ಪಿತು.

ಸತ್ಯದ ಆರಾಧಕನು ಮೌನವನ್ನವಲಂಬಿಸುವುದು ಉಚಿತವೆಂಬ ಮಾತೂ ನನಗೆ ಅನುಭವದಿಂದ ಹೊಳೆಯಿತು. ಅನೇಕ ಸಲ ಮನುಷ್ಯನು ತಿಳಿದೋ ತಿಳಿಯದೆಯೋ ಸತ್ಯಸಂಗತಿಯನ್ನೇ ಅತಿಶಯೋಕ್ತಿ ಮಾಡಿ ಹೇಳುತ್ತಾನೆ; ಅಥವಾ ಹೇಳಲು ಯೋಗ್ಯವಾದ ಮಾತನ್ನು ಮರೆಮಾಡುತ್ತಾನೆ. ಇಲ್ಲವೆ ಅನ್ಯ ರೀತಿಯಲ್ಲಿ ಹೇಳುತ್ತಾನೆ. ಇಂತಹ ಸಂಕಟದಿಂದ ಪಾರಾಗಲು ಮಿತಭಾಷಿಯಾಗುವುದು ಅವಶ್ಯವಿದೆ. ಮಿತಭಾಷಿಯಾದವನು ವಿಚಾರ ಮಾಡದೆ ಮಾತನಾಡುವುದಿಲ್ಲ. ಅವನು ತನ್ನ ಪ್ರತಿಯೊಂದು ಶಬ್ದವನ್ನೂ ತೂಗಿ ನೋಡುತ್ತಾನೆ. ಬಹಳ ಸಲ ಮನುಷ್ಯನು ಮಾತನಾಡಲು ಆತುರವುಳ್ಳವನಾಗುತ್ತಾನೆ. "ನಾನೂ ಮಾತನಾಡಲು ಇಚ್ಛಿಸುತ್ತೇನೆ" ಎಂಬರ್ಥದ ಚೀಟಿಗಳು ಯಾವ ಸಭಾಧ್ಯಕ್ಷನ ಕಡೆಗೆ ಬರುವುದಿಲ್ಲ? ಆದರೆ ಭಾಷಣಕಾರನಿಗೆ ಕೊಟ್ಟ ಸಮಯವು ಸಾಕಾಗುವುದಿಲ್ಲ. ಇನ್ನಷ್ಟು ಸಮಯವನ್ನು ಬೇಡುತ್ತಾನೆ. ಅಪ್ಪಣೆ ಪಡೆಯದೆ ಮಾತನಾಡುತ್ತಲೇ ಇರುತ್ತಾನೆ. ಇದರಿಂದ ಜನರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಬಹಳಷ್ಟು ಸಮಯವು ವ್ಯರ್ಥ ಹೋಗುವುದನ್ನು ನಾವು ಕಾಣುತ್ತೇವೆ. ಆದಕಾರಣ ಆರಂಭಕ್ಕೆ ನನ್ನ ಅಂಜುಬುರುಕತನದಿಂದ ನನಗೆ ತೊಂದರೆಯಾಗುತ್ತಿದ್ದರೂ ಈಗ ನನಗೆ ಅದರ ನೆನಪು ಆನಂದವನ್ನೀಯುತ್ತದೆ. ಈ ಲಜ್ಜಾಶೀಲತೆಯು ನನ್ನ ರಕ್ಷಾಕವಚವಾಗಿತ್ತು. ಇದರಿಂದಾಗಿ ನನ್ನ ವಿಚಾರಗಳು ಪಕ್ವವಾಗಲು ಅವಕಾಶವು ಸಿಕ್ಕಿತು. ನನ್ನ ಸತ್ಯದ ಆರಾಧನೆಯಲ್ಲಿ ಇದರಿಂದ ನನಗೆ ಬಲು ಸಹಾಯವಾಯಿತು.

ಅಸತ್ಯವೆಂಬ ವಿಷ

ನಾಲ್ವತ್ತು ವರ್ಷಗಳ ಕೆಳಗೆ ವಿಲಾಯತಿಗೆ ಹೋಗುವವರ ಸಂಖ್ಯೆಯು ಇಂದಿನದಕ್ಕಿಂತ ಕಡಿಮೆಯಿತ್ತು. ವಿವಾಹಿತರಾಗಿದ್ದರೂ ತಾವು ಅವಿವಾಹಿತರಾಗಿದ್ದೇವೆಯೆಂದು ಹೇಳುವ ರೂಢಿಯೂ ಇಂಥ ಜನರಲ್ಲಿತ್ತು. ಹೀಗೆ ಮದುವೆಯಾದ ಸಂಗತಿಯನ್ನು ಬಚ್ಚಿಡಲಿಕ್ಕೆ ಒಂದು ಕಾರಣವೆಂದರೆ, ಯಾರ ಕುಟುಂಬದಲ್ಲಿ ಅವರು ಇರುತ್ತಿದ್ದರೋ ಅವರಲ್ಲಿಯ ತರುಣಿಯರೊಂದಿಗೆ ತಿರುಗಾಡುವ ಹಾಗೂ ಹಾಸ್ಯ ವಿನೋದ ಮಾಡುವ ಸ್ವಾತಂತ್ರ್ಯವು ವಿವಾಹಿತರೆಂದು ಹೇಳಿದ್ದರೆ ಅವರಿಗೆ ಸಿಗುತ್ತಿದ್ದಿಲ್ಲ. ಈ ಆಮೋದ –ಪ್ರಮೋದವು ಬಹುಶಃ ನಿರ್ದೋಷವಾಗಿರುತ್ತಿತ್ತು. ನಮ್ಮ ದೃಷ್ಟಿಯಲ್ಲಿ ತ್ಯಾಜ್ಯವಾದ ಇಂಥ ಸಹಚರ್ಯವು ಇಂಗ್ಲೀಷರಿಗೆ ನಿರ್ದೋಷವೆನಿಸುತ್ತಿದ್ದುದರಿಂದ, ನಮ್ಮ ಯುವಕರು ಸುಳ್ಳು ಹೇಳಲು ಹಿಂಜರಿಯುತ್ತಿದ್ದಿಲ್ಲ. ಈ ಬಲೆಯಲ್ಲಿ ನಾನೂ ಮೋಸಹೋದೆನು. ಈ ಸುಳ್ಳು ಬ್ರಹ್ಮಚರ್ಯದ ಸವಿಯನ್ನು ನಾನೂ ನೋಡಿದೆನು.

ಆಗ ನನ್ನ ಅಂಜುಬುರುಕತನವೂ ಮೌನವೂ ನನ್ನನ್ನು ಬಹಳವಾಗಿ ಕಾಪಾಡಿದವು. ನಾನೇ ಮಾತನಾಡಲು ಹಿಂಜರಿಯುತ್ತಿದ್ದಾಗ, ಯಾವಳೇ ತರುಣಿಯು ನನ್ನೊಡನೆ ತಾನೇ ಮಾತನಾಡುವುದೆಂತು? ಯಾವ ತರುಣಿಯೂ ನನ್ನೊಡನೆ ಕ್ವಚಿತ್ತಾಗಿ ಅಡ್ಡಾಡಲು ಹೊರಡುತ್ತಿದ್ದಳು?

ನಾನು ನಾಚುಗುಳಿಯಾಗಿದ್ದಂತೆ ಪುಕ್ಕನೂ ಆಗಿದ್ದೆನು. ವೇಂಟನೋರದಲ್ಲಿಯ ಮನೆಯ ಯಜಮಾನಿಯ ಮಗಳು ಸುತ್ತಮುತ್ತಲಿನ ಸುಂದರವಾದ ಬೆಟ್ಟಗಳ ಮೇಲೆ ಅಡ್ಡಾಡಲು ನನ್ನನ್ನು

ಕರೆದುಕೊಂಡು ಹೋಗುತ್ತಿದ್ದಳು. ನನ್ನ ನಡಿಗೆಯೇನೂ ಮಂದವಾಗಿರಲಿಲ್ಲ. ಆದರೆ ಅವಳ ನಡಿಗೆಯು ನನ್ನದಕ್ಕಿಂತಲೂ ತೀವ್ರವಾಗಿತ್ತು. ಅವಳು ಪಕ್ಕಿಯಂತೆ ಹಾರುತ್ತ ಹೋಗುತ್ತಿದ್ದಳು. ನಾನು ಯಾವಾಗ ಮನೆ ಮುಟ್ಟುವೆನೋ ಎಂದು ಯೋಚಿಸುತ್ತಿದ್ದೆನು. ಅಷ್ಟರಲ್ಲಿ ನಾವು ಒಂದು ಗುಡ್ಡದ ಶಿಖರವನ್ನು ಏರಿ ನಿಂತೆವು. ಇನ್ನು ತಿರುಗಿ ಇಳಿಯುವ ಬಗೆ ಹೇಗೆ? ಅಷ್ಟರಲ್ಲಿಯೇ ಎತ್ತರ ಹಿಮ್ಮಡಿಯ ಬೂಟುಗಳಿದ್ದರೂ ಈ 20–25 ವರ್ಷದ ತರುಣಿಯು ಬಾಣ ಬಿಟ್ಟಂತೆ ಸರ್ರನೆ ಕೆಳಗಿಳಿದು ಹೋದಳು. ಈಗ ಕೆಳಗಿಳಿಯುವುದು ಹೇಗೆ ಎಂಬ ವಿಚಾರದಲ್ಲಿಯೇ ನಾನು ಇನ್ನೂ ಇದ್ದೆನು. ಇಷ್ಟರಲ್ಲಿ ಅವಳು ಕೆಳಗಿಳಿದು ಕಳಕಳನೆ ನಗುತ್ತ ನನ್ನನ್ನು ಹುರಿದುಂಬಿಸುತ್ತಿದ್ದಳು. "ಮೇಲೆ ಬಂದು ಕೈ ಹಿಡಿದು ಕೆಳಗಿಳಿಸಲೇನು?" ಎಂದು ಕೇಳಿದಳು. ನಾನು ಅಷ್ಟು ಒಳ್ಳೆಯವನೆಂದು ತೋರಿಸಿಕೊಳ್ಳುವುದು ಹೇಗೆ? ಸಾವಕಾಶವಾಗಿ ಕಾಲುಗಳನ್ನು ಇಡುತ್ತ ಕೆಲವು ಕಡೆಗಳಲ್ಲಿ ಅಂಬೆಗಾಲಿಡುತ್ತ ಅಂತೂ ಕೆಳಗೆ ಇಳಿದೆನು. ಅವಳು ಮೋಜಿನಲ್ಲಿ 'ಶಾಬಾಸ್' ಎನ್ನುತ್ತಲೇ ಮೊದಲೇ ನಾಚಿಕೆಪಟ್ಟ ನಾನು ಇನ್ನಷ್ಟು ನಾಚುವಂತೆ ಮಾಡಿದಳು.

ಆದರೆ ಪ್ರತಿಯೊಂದು ಸ್ಥಳದಲ್ಲಿಯೂ ನಾನು ಈ ರೀತಿ ರಕ್ಷಿಸಲ್ಪಡುವುದು ಹೇಗೆ? ಪರಮಾತ್ಮನೇ ನನ್ನ ಅಂತರಂಗದೊಳಗಿನ ಅಸತ್ಯದ ವಿಷವನ್ನು ಹೊರದೂಡುವವನಿದ್ದನು. ಬ್ರಾಯಿಟನ್ ಭೋಜನ ಗೃಹದಲ್ಲಿ ಓರ್ವ ಮುದುಕಿಯೊಡನೆ ನನ್ನ ಪರಿಚಯವಾಯಿತು. ಅವಳು ಲಂಡನಿನಲ್ಲಿ ಪ್ರತಿ ಭಾನುವಾರವೂ ನನ್ನನ್ನು ಊಟಕ್ಕೆ ಆಮಂತ್ರಿಸುತ್ತಿದ್ದಳು. ನನ್ನ ನಾಚಿಕೆಯನ್ನು ಹೊಡೆದೋಡಿಸುತ್ತಿದ್ದಳು. ತರುಣಿಯರೊಂದಿಗೆ ಪರಿಚಯ ಮಾಡಿಕೊಟ್ಟು, ಅವರೊಡನೆ ಮಾತನಾಡಲು ಹುರಿದುಂಬಿಸುತ್ತಿದ್ದಳು. ಒಬ್ಬ ಹೆಣ್ಣು ಮಗಳು ಅವರ ಮನೆಯಲ್ಲಿ ವಾಸವಾಗಿದ್ದಳು. ಅವಳೊಡನೆ ನನ್ನನ್ನು ಬಹಳ ಮಾತನಾಡಿಸ ಹಚ್ಚುತ್ತಿದ್ದಳು. ಒಮ್ಮೊಮ್ಮೆ ನಮ್ಮಿಬ್ಬರನ್ನೇ ಏಕಾಂತದಲ್ಲಿ ಬಿಟ್ಟು ಹೋಗುತ್ತಿದ್ದಳು.

"ಈಗೇನು ಮಾಡಲಿ? ನಾನು ವಿವಾಹಿತನಾಗಿದ್ದ ಸುದ್ದಿಯನ್ನು ಮೊದಲೇ ಈ ಮುದುಕಿಗೆ ಹೇಳಿಬಿಟ್ಟರೆ ಒಳಿತಾಗುತ್ತಿತ್ತು. ನಾನು

ಯಾರನ್ನಾದರೂ ಮದುವೆಯಾಗಬೇಕೆಂದು ಅವಳ ವಿಚಾರವಿರಬಹುದೇ? ಇನ್ನೂ ಕೈಮೀರಿ ಹೋಗಿಲ್ಲ. ಸಮಯವಿದೆ; ಸತ್ಯವನ್ನು ಹೇಳಿಬಿಡುವುದರಿಂದ ಹೆಚ್ಚಿನ ಸಂಕಟದಲ್ಲಿ ಬೀಳಲಿಕ್ಕಿಲ್ಲ" ಹೀಗೆ ವಿಚಾರ ಮಾಡಿ ನಾನು ಅವಳಿಗೊಂದು ಕಾಗದ ಬರೆದನು.

"ನಾನು ತಮ್ಮನ್ನು ಭೇಟಿಯಾದಂದಿನಿಂದ ಮಗನಂತೆ ನನ್ನನ್ನು ಕಂಡಿದ್ದೀರಿ. ನಾನು ವಿವಾಹವಾಗಿದ್ದ ಸಂಗತಿಯನ್ನು ತಮ್ಮ ಕಡೆಯಿಂದ ಬಚ್ಚಿಟ್ಟ ಬಗ್ಗೆ ನನಗೆ ವ್ಯಸನವಾಗುತ್ತದೆ. ಆದರೆ ಸತ್ಯವನ್ನು ಹೇಳುವ ಧೈರ್ಯವನ್ನು ದೇವರು ನನಗೆ ಈಗ ಕೊಟ್ಟಿದ್ದಾನೆ. ಇದರಿಂದ ನನಗೆ ಆನಂದವಾಗಿದೆ. ತಾವು ದಯವಿಟ್ಟು ನನ್ನನ್ನು ಕ್ಷಮಿಸುವಿರಲ್ಲವೇ? ನನಗೆ ತಾವು ಪರಿಚಯ ಮಾಡಿಕೊಟ್ಟ ತಂಗಿಯೊಡನೆ ನಾನು ಯಾವ ಅನುಚಿತ ವರ್ತನೆಯನ್ನೂ ಮಾಡಿಲ್ಲವೆಂದು ವಿಶ್ವಾಸದಿಂದ ಹೇಳಬಲ್ಲೆ. ಯಾವ ಅನುಚಿತ ಮಾತನ್ನೂ ಆಡಲಿಲ್ಲವೆಂದೂ ನಾನು ಚೆನ್ನಾಗಿ ಬಲ್ಲೆನು.

ತಮ್ಮ ಪ್ರೀತಿಯ ಬಗ್ಗೆ ನಾನು ಯಾವಾಗಲು ಋಣಿಯಾಗಿದ್ದೇನೆ. ಇದನ್ನೆಲ್ಲಾ ತಿಳಿಸಿದ ಮೇಲೆ ನಾನು ತಮ್ಮಲ್ಲಿ ಬರಲು ಇನ್ನೂ ಯೋಗ್ಯನೆಂದು ತಿಳಿದಲ್ಲಿ ಅದು ತಮ್ಮ ವಿಶ್ವಾಸದ ಹೊಸ ಕುರುಹೆಂದು ತಿಳಿಯುವೆನು; ಹಾಗೂ ಅದಕ್ಕೆ ಅರ್ಹನಾಗಲು ಪ್ರಯತ್ನಿಸುವೆನು."

ಈ ಪತ್ರವನ್ನು ಕಳಿಸಿಕೊಟ್ಟ ಮೇಲೆ ನನ್ನ ಮನಸ್ಸಿನ ಮೇಲಿನ ದೊಡ್ಡ ಭಾರವು ಇಳಿಸಿದಂತಾಯಿತು. ಅದಕ್ಕೆ ಈ ಕೆಳಗಿನಂತೆ ಅವಳಿಂದ ಉತ್ತರವು ಬಂದಿತು.

"ನೀವು ಮನಸ್ಸು ಬಿಚ್ಚಿ ಬರೆದ ಪತ್ರವು ತಲುಪಿತು. ಅದನ್ನು ಓದಿ, ನಮಗಿಬ್ಬರಿಗೂ ಸಂತೋಷವಾಯಿತಲ್ಲದೆ ಹೊಟ್ಟೆ ತುಂಬ ನಗುವೂ ಬಂದಿತು. ನಮ್ಮ ಈ ತೆರನಾದ ಅಸತ್ಯವು ಕ್ಷಮ್ಯವಾಗಿದೆ. ತಾವು ಸತ್ಯ ಸಂಗತಿಯನ್ನು ಬರೆದು ತಿಳಿಸಿದುದು ಒಳಿತಾಯಿತು. ನಮ್ಮ ಗೆಳೆತನದಲ್ಲಿ ಕುಂದುಂಟಾಗಲಿಲ್ಲವೆಂಬ ಬಗ್ಗೆ ವಿಶ್ವಾಸವಿರಲಿ."

ಧರ್ಮದ ಪರಿಚಯ

ಇಬ್ಬರು ಥಿಯೋಸೊಫಿಸ್ಟ ಬಂಧುಗಳ ಜೊತೆಗೆ ನಾನು ಗೀತೆಯನ್ನು ಓದಲು ಪ್ರಾರಂಭಿಸಿದೆನು. ಎರಡನೆಯ ಅಧ್ಯಾಯದೊಳಗಿನ

ಧ್ಯಾಯತೋ ವಿಷಯಾನ್ ಪುಂಸಃ
ಸಂಗಸ್ತೇ ಷೂಪಜಾಯತೆ ।
ಸಂಗಾತ್ಸಂಜಾಯತೇ ಕಾಮಃ
ಕಾಮಾತ್ ಕ್ರೋಧೋಭಿಜಾಯತೇ ॥
ಕ್ರೋಧಾದ್ಭವತಿ ಸಮ್ಮೋಹಃ
ಸಮ್ಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶಃ
ಬುದ್ಧಿನಾಶಾತ್ ಪ್ರಣಶ್ಯತಿ ॥

ಈ ಎರಡೂ ಶ್ಲೋಕಗಳಿಂದ ನನ್ನ ಮನಸ್ಸಿನ ಮೇಲೆ ಆಳವಾದ ಪರಿಣಾಮವಾಯಿತು. ಅವುಗಳ ಧ್ವನಿಯು ಕಿವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಗೀತೆಯು ಅಮೂಲ್ಯ ಗ್ರಂಥವೆಂದು ಆಗ ನನಗೆ ಮನವರಿಕೆಯಾಯಿತು. ಆ ಭಾವನೆಯು ದಿನ ದಿನವೂ ದೃಢವಾಗುತ್ತ ಹೋಯಿತು. ಇಂದು ನಾನು ಅದು ತತ್ವಜ್ಞಾನದ ಸರ್ವೋತ್ಕೃಷ್ಟ ಗ್ರಂಥವೆಂದು ತಿಳಿಯುತ್ತೇನೆ. ನಿರಾಶೆಯ ಗಳಿಗೆಗಳಲ್ಲಿ ಈ ಗ್ರಂಥವು ನನಗೆ ಅಮೂಲ್ಯವಾದ ಸಹಾಯವನ್ನು ಮಾಡಿದೆ. ಬಹುಶಃ ಇದರ ಎಲ್ಲ ಇಂಗ್ಲೀಷ್ ಅನುವಾದಗಳನ್ನೂ ನಾನು ಓದಿರುವೆನು. ಆದರೆ ಎಡ್ವಿನ್ ಅರ್ನಾಲ್ಡ್ ಅವರ ಅನುವಾದವು ಎಲ್ಲವುಗಳಲ್ಲಿ ಶ್ರೇಷ್ಠವಾದುದೆಂದು ನನಗೆ

ಅನಿಸುತ್ತದೆ. ಆ ಕಾಲದಲ್ಲಿ ಗೀತೆಯ ಅಧ್ಯಯನವನ್ನು ನಾನು ಮಾಡಿದೆನೆಂದು ಮಾತ್ರ ಹೇಳಲಾರೆನು. ಅದರ ನಿತ್ಯ ಪಾಠವನ್ನು ಕೆಲ ವರುಷಗಳ ನಂತರ ಪ್ರಾರಂಭಿಸಿದೆನು.

ಈ ಥಿಯಾಸೊಫಿಸ್ಟ ಬಂಧುಗಳೇ ನನಗೆ ಅರ್ನಾಲ್ಡ್ 'ಬುದ್ಧಚರಿತೆ'ಯನ್ನೋದಲು ಸಲಹೆ ಕೊಟ್ಟರು. ಅದನ್ನು ನಾನು ಗೀತೆಗಿಂತಲೂ ಹೆಚ್ಚಿನ ಆಸಕ್ತಿಯಿಂದ ಓದಿದೆನು.

ಈ ಸಹೋದರರು ಮ್ಯಾಡಮ್ ಬ್ಲಾವಟ್‌ಸ್ಕಿ ಮತ್ತು ಮಿಸೆಸ್ ಆನಿಬೆಸೆಂಟ್ ಅವರ ಭೆಟ್ಟಿಯನ್ನು ಮಾಡಿಸಿದರು. ನಾನೂ ಥಿಯಾಸೋಫಿ ಸಂಸ್ಥೆಯನ್ನು ಸೇರಬೇಕೆಂದು ಹೇಳಿದರು. ಆಗ ನಾನು "ನನಗೆ ಧರ್ಮದ ಯಾವ ಜ್ಞಾನವೂ ಇಲ್ಲ. ಆದುದರಿಂದ ಯಾವ ಸಂಪ್ರದಾಯವನ್ನೂ ಸೇರಲು ನಾನು ಬಯಸುವುದಿಲ್ಲ" ಎಂದು ಹೇಳಿದೆನು. ಮೆಡಮ್ ಬ್ಲಾವಟ್‌ಸ್ಕಿ ಅವರ 'ಕೀ ಟು ಫಿಲಾಸಫಿ' ಈ ಪುಸ್ತಕವನ್ನು ನಾನು ಓದಿದೆನು. ಇದರಿಂದಾಗಿ ನನಗೆ ಹಿಂದೂ ಧರ್ಮದ ಪುಸ್ತಕಗಳನ್ನು ಓದುವ ಬಯಕೆಯಾಯಿತು. ಹಿಂದೂ ಧರ್ಮವು ಅಂಧ ಶ್ರದ್ಧೆಯಿಂದ ತುಂಬಿರುವುದೆಂದು ಪಾದ್ರಿ ಜನರು ಹೇಳುತ್ತಿದ್ದ ತಪ್ಪು ಅಭಿಪ್ರಾಯವು ನನ್ನ ಮನಸ್ಸಿನಿಂದ ಹೊರಟುಹೋಯಿತು.

ಓರ್ವ ಒಳ್ಳೆಯ ಕ್ರಿಶ್ಚಿಯನ್ ಮಿತ್ರನು ನಾನು ಬೈಬಲ್ ಓದಬೇಕೆಂದು ಉತ್ತೇಜಿಸಿದರು. ನಾನು ಅದನ್ನೂ ಓದಲು ಪ್ರಾರಂಭಿಸಿದೆನು. ಆದರೆ 'ಹಳೆಯ ಒಡಂಬಡಿಕೆಯನ್ನು' ಓದುವುದಾಗಲಿಲ್ಲ. 'ಜೇನಿಸಿಸ್'ದ (ಸೃಷ್ಟಿ ಉತ್ಪತ್ತಿ) ಮುಂದಿನ ಪ್ರಕರಣಗಳನ್ನು ಓದುತ್ತಿದ್ದ ಹಾಗೆ ನನಗೆ ನಿದ್ದೆ ಬರತೊಡಗಿತು. 'ನಂಬರ್ಸ' ಎಂಬ ಹೆಸರಿನ ಪ್ರಕರಣವನ್ನು ಓದಿ ಅರುಚಿಯುಂಟಾಯಿತು.

ಆದರೆ 'ಹೊಸ ಒಡಂಬಡಿಕೆ'ಯನ್ನು ಓದಿದ ಕೂಡಲೆ ನನ್ನ ಮೇಲೆ ಬಹಳ ಪರಿಣಾಮವಾಯಿತು. ಏಸುವಿನ 'ಗಿರಿ ಪ್ರವಚನದ' ಪರಿಣಾಮವು ಬಹಳ ಒಳ್ಳೆಯದಾಯಿತು. ಅದು ನೇರವಾಗಿ ನನ್ನ ಹೃದಯವನ್ನು ಮುಟ್ಟಿತು. "ದುಷ್ಕೃತ್ಯಿಯನ್ನು ಹಿಂಸೆಯಿಂದ ಪ್ರತಿಭಟಿಸಬೇಡ. ನಿನ್ನ ಅಂಗಿಯನ್ನು ಬೇಡಿದವನಿಗೆ ನಿಲುವಂಗಿಯನ್ನೇ ಕೊಟ್ಟುಬಿಡು. ನಿನ್ನ ಬಲ ಗಲ್ಲದ ಮೇಲೆ ಹೊಡೆದವನಿಗೆ ಎಡ ಗಲ್ಲವನ್ನೂ ಮುಂದೆ ಮಾಡು" ಎಂಬುದನ್ನು ಓದಿ ನನಗೆ ಹಿಡಿಸಲಾರದಷ್ಟು ಆನಂದವಾಯಿತು. ಈ ಅಮೋಘವಾದ ವಾಕ್ಯವನ್ನು ಓದಿ ನನಗೆ "ಒಂದು ಬೊಗಸೆ ನೀರಿನ ಸಮೀಚೀನ ಊಟವನ್ನು ಕೊಡು" ಎಂಬ ಶಾಮಲಭಟ್ಟರ ಗೀತವೇ ನೆನಪಾಯಿತು. ನನ್ನ ಎಳೆಯ ಮನಸ್ಸು ಗೀತೆ, ಬುದ್ಧ ಚರಿತೆ ಮತ್ತು ಗಿರಿ ಪ್ರವಚನಗಳಲ್ಲಿಯ ಉಪದೇಶವನ್ನು ಒಂದುಗೂಡಿಸಲು ಯತ್ನಿಸಿತು. ತ್ಯಾಗವೇ ಧರ್ಮದ ಅತ್ಯುಚ್ಚ ರೂಪವೆಂದು ನನಗೆ ಮನದಟ್ಟಾಯಿತು.

ಒಬ್ಬ ಮಿತ್ರರು ಕಾರ್ಲಾಯಿಲನ "ವಿಭೂತಿಗಳು ಮತ್ತು ವಿಭೂತಿ ಪೂಜೆ" ಎನ್ನುವ ಪುಸ್ತಕವನ್ನು ಓದುವ ಸಲಹೆಯನ್ನಿತ್ತರು. ಅದರಲ್ಲಿಯ ಪೈಗಂಬರರದ ವಿಷಯದಲ್ಲಿದ್ದ ಭಾಗವನ್ನು ಓದಿ, ಅವರ ಮಹಿಮೆ, ಶೌರ್ಯ ಮತ್ತು ತಪಶ್ಚರ್ಯೆಗಳ ಪರಿಚಯವು ನನಗಾಯಿತು.

ನಾಸ್ತಿಕತೆಯ ವಿಷಯದಲ್ಲಿಯೂ ಏನೂ ತಿಳಿದುಕೊಳ್ಳದೆ ಇರುವುದು ಹೇಗೆ? ಬ್ರೆಡ್‌ಲೊನನ್ನು ನಾಸ್ತಿಕನೆಂದೂ ಕರೆಯುತ್ತಿದ್ದರು. ಆದುದರಿಂದ ಅವನ ವಿಷಯದಲ್ಲಿಯೂ ಒಂದು ಪುಸ್ತಕವನ್ನು ಓದಿದೆನು. ಇದರಿಂದ ನನ್ನ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಯಾಕೆಂದರೆ ನಾಸ್ತಿಕತೆಯೆಂಬ ಮರುಭೂಮಿಯನ್ನು ನಾನು ಇಷ್ಟರಲ್ಲಿಯೇ ದಾಟಿದ್ದೆನು.

ನಿರ್ಬಲಕೇ ಬಲರಾಮ

ನಿರ್ಬಲರಿಗೆ ರಾಮನೇ ಆಶ್ರಯ. ಬೌದ್ಧಧರ್ಮದ ಜ್ಞಾನವೂ ಮನುಷ್ಯನನ್ನು ಕಾಪಾಡಲು ಸಾಕೆನಿಸುವುದಿಲ್ಲ. ನಾಸ್ತಿಕನು ತಾನು ಬದುಕಿದರೆ ಏನೋ ಪಾರಾದೆನೆಂದು ಹೇಳುತ್ತಾನೆ. ಆಸ್ತಿಕನು ಈಶ್ವರನೇ ತನ್ನನ್ನು ಕಾಪಾಡಿದನೆಂದು ಹೇಳುವನು. ಪರಿಣಾಮದ ಮೇಲಿಂದ ಸಂಯಮದಿಂದಾಗಿ ಈಶ್ವರನು ಹೃದಯದಲ್ಲಿ ಪ್ರಕಟವಾಗುತ್ತಾನೆಂದು ಅವನು ಊಹಿಸುತ್ತಾನೆ. ಆದರೆ ರಕ್ಷಿಸಲ್ಪಡುವ ಕಾಲಕ್ಕೆ ಸಂಯಮವೇ ಬದುಕಿಸುತ್ತದೆಯೋ ಬೇರೆ ಯಾವುದಾದರೂ ಶಕ್ತಿ ಇದೆಯೋ ಎಂಬುದು ಅವನಿಗೆ ಗೊತ್ತಿರುವುದಿಲ್ಲ. ಸಂಯಮ ಶಕ್ತಿಯ ಬಗ್ಗೆ ಹೆಮ್ಮೆಪಡುವವನು ಭ್ರಷ್ಟನಾಗುತ್ತಾನೆ. ಆ ಅನುಭವವು ಯಾರಿಗಿಲ್ಲ? ಇಂಥ ಸಮಯದಲ್ಲಿ ಧರ್ಮ ಜ್ಞಾನವೂ ವ್ಯರ್ಥವೆಂದು ಗೊತ್ತಾಗುತ್ತದೆ.

ವೈಚಾರಿಕ ಧರ್ಮಜ್ಞಾನವೂ ನಿರರ್ಥಕವಾದುದೆಂಬುದರ ಅನುಭವವು ನನಗೆ ವಿಲಾಯತಿಯಲ್ಲಾಯಿತು. ಅದು ಹೀಗೆ; 1890ರ ಸುಮಾರಿಗೆ ಶಾಕಾಹಾರಿಗಳದೊಂದು ಸಮ್ಮೇಳನವು ಪೋರ್ಟ್ಸ್‌ಮಥ್‌ನಲ್ಲಿ ನಡೆಯಿತು. ಇದಕ್ಕೆ ನನಗೂ ಇನ್ನೊಬ್ಬ ಭಾರತೀಯ ಮಿತ್ರನಿಗೂ ಆಮಂತ್ರಣವಿತ್ತು. ನಾವು ಅಲ್ಲಿಗೆ ಹೋದೆವು. ನಮ್ಮನ್ನು ಓರ್ವ ಮಹಿಳೆಯ ಮನೆಯಲ್ಲಿ ಇಳಿಸಿದ್ದರು.

ಅಲ್ಲಿ ರಾತ್ರಿಯ ಊಟವಾದ ಮೇಲೆ ನಾವು ಇಸ್ಪೀಟು ಆಡಲು ಕುಳಿತುಕೊಂಡೆವು. ವಿಲಾಯತಿಯಲ್ಲಿ ಕುಲೀನರ ಮನೆತನಗಳಲ್ಲಿಯೂ ಗೃಹಿಣಿಯರು ಅಥಿತಿಗಳೊಂದಿಗೆ ಈ ರೀತಿಯಲ್ಲಿ ಇಸ್ಪೀಟು ಆಡುವುದುಂಟು. ಆ ಸಮಯದಲ್ಲಿ ಎಲ್ಲರೂ ವಿನೋದವನ್ನು ಮಾಡುವುದುಂಟು. ಆದರೆ ನಮ್ಮ ಆಟದಲ್ಲಿ ಹೊಲಸು ವಿನೋದಕ್ಕೆ

ಪ್ರಾರಂಭವಾಯಿತು. ಇಂಥ ವಿನೋದದಲ್ಲಿ ನನ್ನ ಮಿತ್ರನು ಪಾರಂಗತನಿದ್ದನೆಂಬ ಕಲ್ಪನೆ ನನಗಿರಲಿಲ್ಲ. ನನಗೂ ಈ ವಿನೋದದಲ್ಲಿ ಅಭಿರುಚಿಯುಂಟಾಯಿತು. ನಾನೂ ಅದರಲ್ಲಿ ಭಾಗವಹಿಸತೊಡಗಿದೆನು. ವಿನೋದವಾಣಿಯು ಅಶ್ಲೀಲ ಚೇಷ್ಟೆಯಲ್ಲಿ ರೂಪಾಂತರ ಹೊಂದುವ ಸಮಯವೂ ಬಂದಿತು. ನನ್ನ ಮಿತ್ರನೂ ಮತ್ತು ನಮ್ಮ ಯಜಮಾನತಿಯೂ ಇಂಥ ಹೇಸಿ ನಗೆಚಟಾಕಿಯನ್ನು ಪ್ರಾರಂಭಿಸಿದರು. ನಾನು ನನ್ನ ಇಸ್ಪೀಟು ಎಲೆಗಳನ್ನು ಮರೆತುಬಿಟ್ಟು ಮೇರೆಯನ್ನು ಮೀರುವುದರಲ್ಲಿದ್ದೆ. ಆದರೆ ಅಷ್ಟರಲ್ಲಿಯೇ, ನನ್ನ ಸನ್ಮಿತ್ರನ ಹೃದಯದಲ್ಲಿಯ ಈಶ್ವರನು ಜಾಗೃತನಾಗಿ ಅವನು "ಏನು ಕಲಿ ಪ್ರವೇಶಿಸಿದೆ ಹುಡುಗಾ ನಿನ್ನಲ್ಲಿ? ಹೂಂ ತೀವ್ರ ಎಲೆ ಚೆಲ್ಲು" ಎಂದನು.

ನನಗೆ ನಾಚಿಕೆಯೆನಿಸಿತು. ನನಗೆ ಎಚ್ಚರಿಕೆ ದೊರಕಿದಂತಾಗಿ ನನ್ನ ತಾಯಿಯ ಎದುರು ಮಾಡಿದ ಪ್ರತಿಜ್ಞೆಯ ಸ್ಮರಣೆಯುಂಟಾಗಿ ನಾನು ಆ ಕೋಣೆಯಿಂದ ಪಲಾಯನ ಹೇಳಿದೆನು. ನಡುಗುತ್ತಲೇ ನಾನು ನನ್ನ ಕೋಣೆಯನ್ನು ಮುಟ್ಟಿದೆನು. ನನ್ನ ಹೃದಯವು ಹೊಡೆದುಕೊಳ್ಳುತ್ತಲಿತ್ತು. ಬೇಟೆಗಾರನ ಕೈಯಿಂದ ತಪ್ಪಿಸಿಕೊಂಡ ಪ್ರಾಣಿಯಂತೆ ನನ್ನ ಸ್ಥಿತಿಯಾಗಿತ್ತು.

ಪರಸ್ತ್ರೀಯನ್ನು ನೋಡಿ ವಿಕಾರವಶನಾಗುವ ಪ್ರಸಂಗವು ನನ್ನ ಜೀವನದಲ್ಲಿ ಇದೇ ಮೊದಲನೆಯದಾಗಿತ್ತು. ರಾತ್ರಿಯೆಲ್ಲ ನನಗೆ ನಿದ್ದೆ ಹತ್ತಲಿಲ್ಲ. ಅನೇಕ ವಿಚಾರಗಳು ನನ್ನನ್ನು ಆವರಿಸಿದವು. ಮನೆಯನ್ನು ಬಿಡಲೇ? ಓಡಿಹೋಗಲೇ? ನಾನು ಎಲ್ಲಿದ್ದೇನೆ? ನಾನು ಜಾಗ್ರತೆ ವಹಿಸದಿದ್ದರೆ ನನ್ನ ಗತಿಯೇನಾಗುವುದು? ನಾನು ಎಚ್ಚರಿಕೆಯಿಂದ ನಡೆಯಲು ನಿರ್ಧರಿಸಿದೆನು. ಮನೆಯನ್ನಷ್ಟೇ ಅಲ್ಲ ಪೋರ್ಟ್ಸಮಥವನ್ನು ಕೂಡಲೇ ಬಿಟ್ಟುಹೋಗಬೇಕೆಂದು ವಿಚಾರ ಮಾಡಿದೆನು. ಮರುದಿನವೇ ಪೋರ್ಟ್ಸಮಥವನ್ನು ಬಿಟ್ಟು ಹೊರಟೆನು.

ಈಶ್ವರನೇ ನನ್ನನ್ನು ಕಾಪಾಡಿದನೆಂದು ನಾನು ಲೌಕಿಕ ರೀತಿಯಲ್ಲಿ ತಿಳಿದುಕೊಂಡೆನು. ಆದರೆ ಜೀವನದ ವಿವಿಧ ಕ್ಷೇತ್ರಗಳಲ್ಲಿ ಇಂಥ

ಅನುಭವಗಳು ಬರುತ್ತವೆ. ಆಧ್ಯಾತ್ಮಿಕ ಸನ್ನಿವೇಶಗಳಲ್ಲಿ, ವಕೀಲಿಯಲ್ಲಿ, ಸಂಸ್ಥೆಗಳನ್ನು ನಡೆಸುವಲ್ಲಿ, ರಾಜಕೀಯ ವ್ಯವಹಾರಗಳಲ್ಲಿ ಈಶ್ವರನೇ ನನ್ನನ್ನು ಕಾಪಾಡಿದ್ದಾನೆಂದು ನಾನು ಹೇಳಬಲ್ಲೆನು. ಇಲ್ಲಿಯವರೆಗೆ ನನಗೆ ಧರ್ಮದ ಇಲ್ಲವೆ ಪರಮಾತ್ಮನ ತಿರುಳಾಗಲೀ ಅಥವಾ ಅವನು ಸಾಕ್ಷೀ ಪುರುಷನಾಗಿ ನಮ್ಮಲ್ಲಿ ಹೇಗೆ ಕೆಲಸ ಮಾಡುತ್ತಾನೆಂಬುದರ ಅರಿವಾಗಲೀ ಇರಲಿಲ್ಲ. ಈ ಪ್ರಸಂಗದಲ್ಲಿ ಹೇಗೋ ದೇವರೇ ನನ್ನನ್ನು ಸಂರಕ್ಷಿಸಿದನೆಂಬ ಅಸ್ಪಷ್ಟ ಭಾವನೆಯು ನನ್ನಲ್ಲುಂಟಾಯಿತು. ಇಂಥ ಎಲ್ಲ ಕಠಿಣ ಸಂದರ್ಭಗಳಲ್ಲಿಯೂ ಪರಮಾತ್ಮನು ನನ್ನನ್ನು ಸಂರಕ್ಷಿಸಿದ್ದಾನೆ. ಎಲ್ಲ ಆಶೆಗಳೂ ಕೊನೆಗೊಂಡಾಗ, "ಸಹಾಯಕರು ಕೈಬಿಟ್ಟು, ಸಮಾಧಾನವು ಇಲ್ಲದಿದ್ದಾಗ" ಎಲ್ಲಿಂದಲೋ ಏನೋ ಯಾವಾಗಲೂ ಸಹಾಯವು ಬರುತ್ತಿದೆ. ಪ್ರಣಿಪಾತ, ಪೂಜೆ, ಪ್ರಾರ್ಥನೆಗಳು ಮೂಢ ನಂಬಿಕೆಗಳಲ್ಲ, ತಿನ್ನುವುದು, ಕುಡಿಯುವುದು, ಕೂಡುವುದು ಮತ್ತು ನಡೆದಾಡುವ ಕ್ರಿಯೆಗಳಿಗಿಂತ ಅವು ಹೆಚ್ಚು ಸತ್ಯಪೂರ್ಣವಾದ ಕ್ರಿಯೆಗಳಾಗಿವೆ. ಅವೇ ನಿಜವಾದ ಸತ್ಯಾಂಶಗಳಾಗಿದ್ದು, ಉಳಿದವೆಲ್ಲ ಅಸತ್ಯಗಳೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ಇಂಥ ಪ್ರಾರ್ಥನೆಯು ಬರಿಯ ವಾಣಿಯ ವೈಭವವಲ್ಲ. ಅದರ ಮೂಲವು ಕಂಠದಲ್ಲಿಲ್ಲ, ಹೃದಯದಲ್ಲಿದೆ. ಆದುದರಿಂದ ನಾವು ಹೃದಯವನ್ನು ನಿರ್ಮಲವಾಗಿರಿಸಿದರೆ, ಹೃದಯದ ತಂತಿಗಳೊಂದಿಗೆ ಸ್ವರ ಗೂಡಿಸಿದರೆ, ಹೊರಡುವ ಧ್ವನಿಯು ಗಗನಗಾಮಿಯಾಗಿ ಪರಿಣಮಿಸುತ್ತದೆ. ಇದಕ್ಕಾಗಿ ನಾಲಗೆಯ ಅವಶ್ಯಕತೆಯಿಲ್ಲ. ಅದು ಸ್ವಾಭಾವಿಕವಾಗಿಯೇ ಅದ್ಭುತವಾದ ಸಂಗತಿಯಾಗಿದೆ. ವಿಕಾರರೂಪವಾದ ಕೊಳೆಯನ್ನು ತೊಳೆದುಹಾಕುವಲ್ಲಿ ಹಾರ್ದಿಕ ಉಪಾಸನೆಯ ರಾಮಬಾಣದ ಉಪಾಯವೆಂಬುದರಲ್ಲಿ ನನಗೆ ಸಂದೇಹವಿಲ್ಲ. ಆದರೆ ಇಂತಹ ಪ್ರಸಾದವನ್ನು ಪಡೆಯಬೇಕಾದರೆ ನಮ್ಮಲ್ಲಿ ಸಂಪೂರ್ಣ ನಮ್ರತೆ ಇರಬೇಕಾದುದು ಅತ್ಯವಶ್ಯ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2. 10.
1869	
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896
	ಮತ್ತು 1901
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ	
ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899
	ಮತ್ತು 1906
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906
	ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913

ಭಾರತಕ್ಕೆ ಆಗಮನ	1915
ಸಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪ್ ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00

24.	ಸ್ವಾತಂತ್ರ್ಯ	25-00
25.	ಅಸ್ಪೃಶ್ಯತೆ	30-00
26.	ಒಳ್ಳೆಯ ಜೀವನ	25-00
27.	ಪ್ರಾರ್ಥನೆ	25-00
28.	ಗಾಂಧೀ ಮತ್ತು ಕರ್ನಾಟಕ	200-00
29.	ಸತ್ಯ	30-00
30.	ವಿದ್ಯಾರ್ಥಿಗಳಿಗಾಗಿ	30-00
31.	ಸರ್ವೋದಯ	30-00
32.	ಖಾದಿ ಗ್ರಾಮೋದ್ಯೋಗ	30-00
33.	ನನ್ನ ಬಾಲ್ಯದ ನೆನಪುಗಳು	30-00
34.	ಗ್ರಾಮರಾಜ್ಯ ಆಡಳಿತ	5-00
35.	ನನ್ನ ಕನಸಿನ ಸ್ವರಾಜ್ಯ	5-00
36.	ಗಾಂಧೀ ಮತ್ತು ಹಾಸ್ಯ	20-00
37.	ನನ್ನ ಆದರ್ಶಗ್ರಾಮ	5-00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48-00
39.	ಸತ್ಯಾಗ್ರಹಿ	40-00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
43.	ಸತ್ಯಾಗ್ರಹ	5-00
44.	ಹಿಂದ್ ಸ್ವರಾಜ್	5-00
45.	ಆರೋಗ್ಯ	5-00

46. ಮಹಾತ್ಮ ಗಾಂಧಿ ಪ್ರಸ್ತುತತೆ	10–00
47. ಬಹುರೂಪಿ ಗಾಂಧಿ	10–00
48. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
49. ಕೃತಯುಗಿ ವಿನೋಬಾ ಭಾವೆ	15–00
50. ಮೋಹನ ತರಂಗ	40–00
51. ನಮ್ಮ ಗಾಂಧಿ ತಾತ	5–00
52. ಗೀತಾ ಪ್ರವಚನ	80–00
53. ಜೆ.ಪಿ. ಜೀವನ ಹಾದಿ	45–00
54. ಗಣ್ಯರು ಕಂಡಂತೆ ಗಾಂಧಿ	20.0
55. ಗೀತಾಮಾತೆ	80.00
56. ಲೋಕ ಚಿಂತಕರು	145.00
57. ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
58. ಮಹದೇವ ದೇಸಾಯಿ	63.00
59. ಸಮಾಜವಾದ : ಗಾಂಧೀ ದೃಷ್ಟಿಕೋನ	15.00
60. ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
61. Temple & Mosque	10–00
62. Rastrapita Mahatma Gandhi	25–00
63. Swarajya of My Dreams	5–00
64. Gandhi My Grand Father	5–00
65. Grand Pa Gandhi	5–00
66. Relevance of Gandhi	20–00
67. Vinoba Sage of the age	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08–05–1915
● ಬೆಳಗಾವಿ	ದಿ. 27–04–1916 ರಿಂದ ದಿ. 01–05–1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05–05–1918 ರಿಂದ ದಿ. 06–05–1918 ರವರೆಗೆ
● ಕಾಸರಗೋಡು	ದಿ. 19–08–1920
● ಮಂಗಳೂರು	ದಿ. 20–08–1920
● ಬೆಂಗಳೂರು	ದಿ. 21–08–1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08–11–1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09–11–1920
● ಧಾರವಾಡ	ದಿ. 10–11–1920
● ಹುಬ್ಬಳ್ಳಿ, ಗದಗ	ದಿ. 11–11–1920
● ಸಾಂಗಲಿ	ದಿ. 12–11–1920
● ಬಾಗಲಕೋಟೆ	ದಿ. 27–05–1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28–05–1921
● ಬಳ್ಳಾರಿ	ದಿ. 30–09–1921
● ಬೆಳಗಾವಿ	ದಿ. 21–12–1924 ರಿಂದ ದಿ. 30–12–1924 ರವರೆಗೆ
● ಗುಲ್ಬರ್ಗಾ	ದಿ. 22–02–1927 ರಿಂದ ದಿ. 23–02–1927 ರವರೆಗೆ
● ನಿಪ್ಪಾಣಿ	ದಿ. 27–03–1927 ರಿಂದ ದಿ. 31–03–1927 ರವರೆಗೆ

• ಬೆಳಗಾವಿ	ದಿ. 01-04-1927 ದಿ. 18-04-1027 ರಿಂದ ದಿ. 19-04-1927ರವರೆಗೆ
• ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
• ತುಮಕೂರು	ದಿ. 14-07-1927
• ತುಮಕೂರು, ಮಧುಗಿರಿ	ದಿ. 15-07-1927
• ತುಮಕೂರು	ದಿ. 16-07-1927
• ಬೆಂಗಳೂರು	ದಿ. 17-07-1927
• ಬೆಂಗಳೂರು	ದಿ. 18-07-1927
• ಮೈಸೂರು	ದಿ.19-07-1927 ರಿಂದ ದಿ. 21-07-1927 ರವರೆಗೆ
• ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
• ಮೈಸೂರು	ದಿ. 23-07-1927
• ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
• ಕ್ಲೊಸ್‌ಪೇಟೆ (ರಾಮನಗರ)	ದಿ. 31-07-1927
• ಕಾನಕಾನಹಳ್ಳಿ (ಕನಕಪುರ)	
• ಬೆಂಗಳೂರು	ದಿ. 01-08-1927
• ಅರಸೀಕರೆ, ಹಾಸನ	ದಿ. 02-08-1927
• ಹಾಸನ	ದಿ. 03-08-1927
• ಹಾಸನ, ಹೊಳೆನರಸೀಪುರ	ದಿ. 04-08-1927
• ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
• ದಾವಣಗೆರೆ	ದಿ. 12-08-1927
• ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927

● ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
● ಆಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕೆರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934

● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ
● ಪೊನ್ನಂಪೇಟೆ, ಹುದಿಕೇರಿ	ದಿ. 22-02-1934
● ವಿರಾಜಪೇಟೆ, ಬೆಳ್ಳೂರು	ದಿ. 23-02-1934
● ಸೋಮವಾರ ಪೇಟೆ	
● ಗುಂಡುಕಟ್ಟೆ	
● ಮಡಿಕೇರಿ, ಸಂಪಾಜೆ, ಸುಳ್ಯ	ದಿ. 24-02-1934
● ಪುತ್ತೂರು, ಉಪ್ಪಿನಂಗಡಿ	
● ವಿಠಲಗಬ್ಬ, ಕಲ್ಲಡ್ಕ, ಪಾಣೆ	
● ಮಂಗಳೂರು, ಬಂಟ್ವಾಳ	
● ಮಂಗಳೂರು	
● ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಾಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25-02-1934
● ಕುಂದಾಪುರ	ದಿ. 26-02-1934
● ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27-02-1934
● ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
● ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
● ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02-03-1934

● ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ	ದಿ. 03-03-1934
● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಿಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ	ದಿ. 07-03-1934
● ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್	ದಿ. 08-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ ಕೋಲಾರ, ಬಂಗಾರ ಪೇಟೆ, ಕೆ. ಜಿ. ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1937 ರಿಂದ 21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ಈ ರೀತಿ ಸರಳತನದಿಂದ ಇರುವುದರಿಂದ ನನ್ನ ಜೀವನವು ನೀರಸವಾಗಿತ್ತೆಂದು ಓದುಗರು ತಿಳಿಯಬಾರದು. ಇದಕ್ಕೆ ವಿರುದ್ಧವಾಗಿ ನನ್ನ ಜೀವನವು ಇನ್ನಷ್ಟು ಸರಳವಾಯಿತು. ನನ್ನ ಆತ್ಮಾನಂದಕ್ಕೆ ಪಾರವೇ ಉಳಿಯಲಿಲ್ಲ.

- ಮಹಾತ್ಮ ಗಾಂಧಿ

ಗಾಂಧಿತತ್ತ್ವಜ್ಞಾನ ಇಲ್ಲವೆ ಸಾಹಿತ್ಯದ ಮೌಲ್ಯಮಾಪನವಾಗಿರದೆ, ಭಿನ್ನ ಭಿನ್ನ ವಿಷಯಗಳ ಬಗೆಗೆ ಗಾಂಧೀಜಿಯವರು ಹೇಳಿದ ಮಾತುಗಳನ್ನು ತದ್ವತ್ತಾಗಿ ಭಾಷಾಂತರಿಸಿ ಕೊಡುವುದೇ ಆಗಿದೆ. ಪ್ರಸ್ತುತ ಗ್ರಂಥವು ಗಾಂಧೀಜಿಯವರ ಆತ್ಮಕಥೆಯ ಭಾಷಾಂತರವಾಗಿದೆ.

- ರಾ. ಶ್ರೀ. ಹುಕ್ಕೇರಿಕರ

ಈ ಕೃತಿಯ ಮಕ್ಕಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಒಂದು ನೀತಿ ಪಾಠವಾಗುವುದರಲ್ಲಿ ಸಂದೇಹವಿಲ್ಲ.

- ಡಾ॥ ಹೊ. ಶ್ರೀನಿವಾಸಯ್ಯ

ಗಾಂಧೀ ಅವರ ಸ್ವಂತ ನುಡಿಗಳನ್ನು ದಾಖಲಿಸಿದ ಅವರ ಬಾಲ್ಯದ ನೆನಪುಗಳು, ಸತ್ಯದರ್ಶನದಂತಿದೆ. ಮನುಷ್ಯ ಬಾಲ್ಯದಲ್ಲಿ ಹಲವಾರು ತಪ್ಪು, ಸುಳ್ಳು, ಹೀನಾಯ ನಡವಳಿಕೆಯವನಾಗಿದ್ದರೂ, ಅವನು ದೊಡ್ಡವನಾದಂತೆ ಅವುಗಳು ತಪ್ಪು ಎಂಬ ಅರಿವು ಮೂಡಿಸಿಕೊಂಡು ಪರಿವರ್ತನೆಯಾಗುವ ಕಥಾನಕವನ್ನು ಇದು ಹೇಳುತ್ತದೆ.

- ವೂಡೇ ಪಿ. ಕೃಷ್ಣ

ಬಾಲ್ಯವನ್ನು ವೈಭವೀಕರಿಸುವ, ತಪ್ಪಿಲ್ಲದೆ ನಡೆದ ಮಕ್ಕಳಂತೆ ಚಿತ್ರಿಸಿಕೊಳ್ಳುವ ಆಧುನಿಕ ಸಮಾಜ ಸುಧಾರಕರು, ರಾಷ್ಟ್ರನಾಯಕರುಗಳ ಆತ್ಮಕಥೆಗಳು, ಜೀವನ ಚಿತ್ರಗಳು, "ನನ್ನ ಬಾಲ್ಯದ ನೆನಪುಗಳು" ಕೃತಿಯ ಮುಂದೆ ಕಳಪೆಯಾಗುತ್ತದೆ. ಮನುಷ್ಯನ ವ್ಯಕ್ತಿತ್ವ ವಿಕಾಸವಾಗುವ ಸಹಜ ನಡೆಗಳ ಕುರಿತಾಗಿ, ಗಾಂಧಿ ಅವರ ಬಾಲ್ಯದ ನೆನಪುಗಳು ಅನಾವರಣಗೊಂಡಿವೆ.

- ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ISBN NO : 978-81-941136-8-3